ಆದ್ದರಿಂದ ತಾವು ಮನಸ್ಸು ಮಾಡಿ ಇನ್ನೂ ಒಂದು ದಿವಸ ಹೆಚ್ಚಿಗೆ ಚರ್ಚೆಗೆ ಅವಕಾಶ ಮಾಡಿಕೊಡಿ. ಏಕೆಂದರೆ 26 ಬೇಡಿಕೆಗಳ ಮೇಲೆ ಚರ್ಚೆ ಮಾಡಬೇಕಾಗಿದೆ.

ಅಧ್ಯಕ್ಷರು :– ಒಂದು ದಿವಸ ಹೆಚ್ಚಿಗೆ ಬೇಡಿಕೆ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವ ಬಗ್ಗೆ ನಂತರ ಚರ್ಚೆ ಮಾಡೋಣ. ಈಗ ಶ್ರೀ ಚಿಮ್ಮನಕಟ್ಟಿ ಯವರು ಬೇಡಿಕೆ ಮೇಲೆ ಚರ್ಚೆ ಪ್ರಾರಂಭ ಮಾಡಲಿ.

(4) ವಿತ್ತೀಯ ಕಾರ್ಯ ಕಲಾಪಗಳು

1996-97 ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ :– (ಮುಂದುವರಿದುದು)

+ **ಶ್ರೀ ಬಾಳಪ್ಪ ಭೀಮಪ್ಪ ಚಿಮ್ಮನಕಟ್ಟಿ (ಬಾದಾಮಿ) :–** ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಸದನದ ಮುಂದೆ 19 ಬೇಡಿಕೆಗಳನ್ನು ಸರ್ಕಾರದವರು ಮಂಡಿಸಿದ್ದಾರೆ. ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಬಹುಶಃ ಎಲ್ಲಾ 19 ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಸಾಧ್ಯವಾಗದೇ ಇದ್ದರೂ ಕೂಡ ಕೆಲವು ಬೇಡಿಕೆಗಳ ಮೇಲೆ ಮಾತನಾಡಿ ಇನ್ನುಳಿದಿರತಕ್ಕಂಥ ಸಮಸ್ಯೆಯನ್ನು ನಮ್ಮ ಶಾಸಕ ಸಹೋದರರಿಗೆ ಬಿಟ್ಟುಕೊಡುವುದು ಸೂಕ್ತವೆಂದು ತಿಳಿದುಕೊಂಡಿದ್ದೇನೆ. ಇವತ್ತು ಬಹಳ ಜನ ಹಿರಿಯ ಸದಸ್ಯರು ಬೇರೆ ಬೇರೆ ಬೇಡಿಕೆಗಳ ಮೇಲೆ ಅನೇಕ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ಅದರಲ್ಲಿ ನಾನು ವಿಶೇಷವಾಗಿ ಈವತ್ತು ಶಿಕ್ಷಣದ ಬಗ್ಗೆ ಮತ್ತು ಸಾರಿಗೆ ಸಂಸ್ಥೆಗಳ ಬಗ್ಗೆ ಕೆಲವು ವಿಚಾರಗಳನ್ನು ಮಾತನಾಡಬೇಕೆಂದು ಹೇಳಿ ತಮ್ಮ ಒಪ್ಪಿಗೆಯನ್ನು ಪಡೆಯುತ್ತಿದ್ದೇನೆ. ಇವತ್ತು ಶಿಕ್ಷಣದ ಬಗ್ಗೆ ಬಹುಶಃ ನಾವೆಲ್ಲರೂ ಕೂಡ ಬಹಳ ಹೆಚ್ಚಿನ ಗಮನಕೊಡಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

(ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ ಅಧ್ಯಕ್ಷ ಪೀಠ ವನ್ನು ಅಲಂಕರಿಸಿದರು)

ಸ್ವಾತಂತ್ರ್ಯಪೂರ್ವದಲ್ಲಿ ನಾವು ನಮ್ಮ ದೇಶದಲ್ಲಿರತಕ್ಕಂಥ ಪರಿಸ್ಥಿತಿಯನ್ನು ನೋಡಿದಾಗ, ಮತ್ತು ಇವತ್ತಿನ ಪರಿಸ್ಥಿತಿಯನ್ನು ನೋಡಿದಾಗ ಬಹಳ ಅಜಗಜಾಂತರ ವ್ಯತ್ಯಾಸವನ್ನು ಕಂಡಿದ್ದೇವೆ. ಹಿಂದೆ ಅನೇಕ ವರದಿಗಳು, ಕಮಿಷನ್‌ಗಳು ಸ್ಥಾಪನೆ ಆದರೂ ಸಹ ಸ್ವತಂತ್ರ್ಯ ಸಿಕ್ಕು ಇಷ್ಟು ವರ್ಷಗಳಾದರೂ ಸಹ ಶಿಕ್ಷಣ ಎಷ್ಟು ಬೆಳೆಯಬೇಕಾಗಿತ್ತೋ ಅಷ್ಟು ಬೆಳೆಯುವುದಕ್ಕೆ ಇನ್ನೂ ಕೂಡ ಸಾಧ್ಯವಾಗುತ್ತಿಲ್ಲ. ಅದಕ್ಕೆ ಅನೇಕ ಕಾರಣಗಳಿರಬಹುದು. ಆ ಕಾರಣಗಳನ್ನು ವಿವರವಾಗಿ ಹೇಳವುದಕ್ಕೆ ವೇಳೆಯ ಅಭಾವವಿರುವುದರಿಂದ ಕೆಲವೊಂದನ್ನು ಮಾತ್ರ ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣದ ಬಗ್ಗೆ ಚಿಂತನೆಯನ್ನು ಅನೇಕ ಮುಖಂಡರುಗಳು ಮಾಡಿದ್ದಾರೆ. ಹಂಟ್ಸ್ ಕಮೀಷನ್‌ರವರು 1982 ರಲ್ಲಿ ಆಧುನಿಕ ಶಿಕ್ಷಣದ ಬಗ್ಗೆ ರೂಪರೇಷೆಗಳನ್ನು ಮಾಡಿದ್ದರು. ಮತ್ತು ಎರಡನೇ ಬಾರಿ ರ್ಲೆವೆ ಕಮಿಷನ್ 1902 ರಲ್ಲಿ

ನಮ್ಮ ದೇಶಕ್ಕೆ ವರದಿ ಕೊಟ್ಟಿದ್ದಾರೆ. ಮತ್ತು 3 ನೆಯದಾಗಿ ಸೆಡ್ಲೇರ್ ಕಮಿಷನ್ ಎನ್ನುವವರು ಈ ವಿಶ್ವವಿದ್ಯಾನಿಲಯಗಳ ಕ್ರಮದ ಬಗ್ಗೆ ಒತ್ತು ಕೊಟ್ಟು ಶಿಕ್ಷಣದ ಬಗ್ಗೆ ಮೈಲಿಕಲ್ಲಾಗಿ ಪರಿಣಮಿಸಿದರು. ಅದೇ ರೀತಿಯಾಗಿ ರಾಧಾಕೃಷ್ಣನ್ ಕಮಿಷನ್ ಕೂಡ 1948 ರಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣದ ಬಗ್ಗೆ ಒತ್ತು ಕೊಟ್ಟು ಮತ್ತು ಕಾಲೇಜು ಶಿಕ್ಷಣ ಹಾಗೂ ಶಿಕ್ಷಕರ ಬಗ್ಗೆ ಅವರು ಯಾವ ರೀತಿ ಕೆಲಸ ಮಾಡಬೇಕು, ಮತ್ತು ಅವರ ವೇತನದ ಬಗ್ಗೆ ದೇಶದಲ್ಲಿ ಆಮೂಲಾಗ್ರವಾದಂಥ ಬದಲಾವಣೆ ತಂದರು. ಆ ನಂತರ ಬಂದಿರತಕ್ಕಂಥ ಲಕ್ಷ್ಮಣಸ್ವಾಮಿ ಮೊದಲಿಯಾರ್ ಅವರೂ ಕೂಡ 1952 ರಲ್ಲಿ ಈ ದೇಶಕ್ಕೆ ಪ್ರೌಢ ಶಾಲೆಗಳಲ್ಲಿ ಯಾವ ಮಟ್ಟಕ್ಕೆ ಶಿಕ್ಷಣವನ್ನು ಒದಗಿಸಿಕೊಡಬೇಕು ಎನ್ನುವುದರ ಬಗ್ಗೆ ಹೆಚ್ಚು ಒತ್ತು ಕೊಟ್ಟು ತಮ್ಮ ವರದಿಯಲ್ಲಿ ಹೇಳಿದ್ದಾರೆ. ತದನಂತರ ಬಂದಿರತಕ್ಕಂಥ ಕೊಠಾರಿ ಕಮಿಷನ್‌ರವರು 1964 ರಲ್ಲಿ ಸಮಗ್ರ ಶಿಕ್ಷಣ ವರದಿಯನ್ನು ಈ ದೇಶಕ್ಕೆ ಕೊಟ್ಟರು. ಇದನ್ನೆಲ್ಲಾ ಬಹುಶಃ ಬಹಳ ಹೆಮ್ಮೆಯಿಂದ ಹೇಳಬೇಕಾಗಿದೆ. ಈ ರೀತಿ ಅನೇಕ ಕಮಿಷನ್‌ಗಳನ್ನು ನೇಮಿಸಿ ಈ ದೇಶಕ್ಕೆ ಅಮೂಲಾಗ್ರವಾದಂಥ ಬದಲಾವಣೆಗಳನ್ನು ತರುವುದಕ್ಕೆ ಪ್ರಯತ್ನಗಳನ್ನು ಪಟ್ಟರೂ ಕೂಡ ದೇಶದಲ್ಲಿ ಶಿಕ್ಷಣದ ಕಾಂತ್ರಿ ಎಲ್ಲರಿಗೂ ಕೂಡ ಒದಗಲಿಲ್ಲ. ಶಿಕ್ಷಣದ ಸದುಪಯೋಗ ಎಷ್ಟೋ ಜನಗಳಿಗೆ ಇವತ್ತೂ ಕೂಡ ಆಗಿಲ್ಲ. ಆ ದೃಷ್ಟಿಯಿಂದ ಕೊಠಾರಿ ಕಮಿಷನ್ 1964ರ ಅಕ್ಟೋಬರ್ 2 ರಂದು ಕೆಲಸ ಪ್ರಾರಂಭ ಮಾಡಿದ ಮೇಲೆ ಮತ್ತು ಅವರು ಕೊಟ್ಟಿರತಕ್ಕಂಥ ವರದಿ ಏನು ಇದೆ. ಇದರಿಂದ ಬಹುಶಃ ನಮ್ಮ ದೇಶಕ್ಕೆ ಆಮೂಲಾಗ್ರ ವಾಗಿರತಕ್ಕಂಥ ಶಿಕ್ಷಣವನ್ನು ನೀಡಿದರು. ವಿಶೇಷವಾಗಿ ಶಿಕ್ಷಣದ ಕ್ರಾಂತಿಯನ್ನು ನಮ್ಮ ದೇಶಕ್ಕೆ ಕೊಠಾರಿ ಕಮಿಷನ್ ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಿದೆ ಎಂದು ಹೇಳಿದರೆ ಅತಿಶಯೋಕ್ತಿ ಯಾಲಾಗರದು. ಈ ಕೊಠಾರಿ ಆಯೋಗ ದೇಶದಾದ್ಯಂತ ಮತ್ತು ದೇಶವಿದೇಶಗಳಲ್ಲಿರತಕ್ಕಂಥ 11 ಜನ ಶಿಕ್ಷಣ ತಜ್ಞರನ್ನು ಒಳಗೊಂಡಿರತಕ್ಕಂಥ ಸಮಿತಿಯಾಗಿದ್ದು ಅಂದಿನ ಕೇಂದ್ರ ಶಿಕ್ಷಣ ಮಂತ್ರಿಗಳಾದ ಶ್ರೀಛಾಗ್ಲಾರವರಿಗೆ 29 ನೇ ಜೂನ್ 1966 ರಂದು ತನ್ನ ವರದಿಯನ್ನು ಸಬ್‌ಮಿಟ್ ಮಾಡಿತು. ಈ ವರದಿಯನ್ನು ಕೊಠಾರಿ ಆಯೋಗದವರು ಸರ್ಕಾರಕ್ಕೆ ಸಬ್‌ಮಿಟ್ ಮಾಡಿದಾಗ ನಮ್ಮ ದೇಶದಲ್ಲಿ ಚರಿತ್ರಾರ್ಹವಾದ ಬದಲಾವಣೆಯಾಯಿತು. ನಮ್ಮ ದೇಶದಲ್ಲಿಯ ಶಿಕ್ಷಣದ ಗುಣಮಟ್ಟವನ್ನು, ಶಿಕ್ಷಣದ ಪರಿಪಕ್ವತೆಯನ್ನು ನೋಡಿದಾಗ ಈ ಕೋಠಾರಿ ಕಮಿಷನ್‌ದವರು ಕೊಟ್ಟಂಥ ವರದಿ ಏನು ಇದೆ, ಆ ವರದಿಯನ್ನು ಕೊಟ್ಟಂಥ ತಜ್ಞರೆಲ್ಲರೂ ವಿಶ್ವವಿದ್ಯಾನಿಲಯಗಳ ಮೇಲ್ಪಟ್ಟದಿಂದ ಬಂದಿರತಕ್ಕಂಥವರು ಆಗಿದ್ದಾರೆ. ಅವರು ಕಾಲೇಜು ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಲಕ್ಷ್ಯವಹಿಸಿದ್ದಾರೆ, ವಿಶ್ವವಿದ್ಯಾನಿಲಯಗಳ ಬಗ್ಗೆ ಹೆಚ್ಚು ಲಕ್ಷ್ಯ ವಹಿಸಿದ್ದಾರೆ. ಪೂರ್ವಪ್ರಾಥಮಿಕ ಶಿಕ್ಷಣದ ಬಗ್ಗೆ ಬಹಳ ಆಮೂಲಾಗ್ರವಾದಂಥ ಅಭ್ಯಾಸಮಾಡಿ ತಜ್ಞರು ದೇಶ ವಿದೇಶಗಳಲ್ಲಿ ಸಂಚಾರ ಮಾಡಿ ಅನೇಕ ದೇಶಗಳಲ್ಲಿ ಪ್ರತಿಯೊಬ್ಬ ಪ್ರಜೆಯನ್ನು ವಿಮರ್ಶಿಸಿ ನೋಡಿ ಆತನಲ್ಲಿ ಚೌಕಾಸಿ ಮಾಡಿ ಕೊಟ್ಟಿರತಕ್ಕಂಥ ವರದಿ ಈ ಕೊಠಾರಿ ಆಯೋಗದ ವರದಿಯಾಗಿದೆ. ಮೊದಲಿನ ಕಮಿಷನ್‌ರವರು ನೀಡಿದ್ದ ವರದಿ ಕೇವಲ ಒಂದು ಶಿಕ್ಷಣಕ್ಕಾಗಿ ಸೀಮಿತವಾಗಿತ್ತು. ಆದರೆ ಕೊಠಾರಿ ಆಯೋಗ ದವರು ಶಿಕ್ಷಣದ ಮಟ್ಟದಲ್ಲಿ ಬಹಳ ಬದಲಾವಣೆ ಮಾಡಿದರು. ಕೇವಲ ಶಿಕ್ಷಣ ಅಷ್ಟೇ ಅಲ್ಲ, ಶಿಕ್ಷಣದಿಂದ ದೇಶದ ಅಭ್ಯುದಯವಾಗಬೇಕು, ಶಿಕ್ಷಣದಿಂದ ರಾಷ್ಟ್ರೀಯ ಮನೋ ಭಾವನೆ ಬೆಳೆಯಬೇಕು, ಶಿಕ್ಷಣದಿಂದ ಕೃಷಿ ಕ್ಷೇತ್ರದಲ್ಲೂ ಬದಲಾವಣೆಯಾಗಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೆ, ಶಿಕ್ಷಣ ಸಂಸ್ಥೆಗಳ ಬಗ್ಗೆ ಯಾರ್ಯಾರು ಪರಿಣಿತರು ವರದಿಗಳನ್ನು ಕೊಟ್ಟಿದ್ದಾರೆ ಎನ್ನುವುದನ್ನು ಹಿರಿಯ ಸದಸ್ಯರೂ ಪ್ರಸ್ತಾಪ ಮಾಡಿದ್ದಾರೆ. ಅನೇಕ ಪ್ರಮುಖವಾದ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಬೇಡಿಕೆ ಮೇಲೆ ಚರ್ಚೆ ಮಾಡುವುದು ಎಷ್ಟೊಂದು ಆಗತ್ಯವಿದೆಯೆಂದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೇ? ಈ ಸದನದಲ್ಲಿ ಉನ್ನತ ಶಿಕ್ಷಣ ಸಚಿವರು ಇಲ್ಲ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರೂ ಸಹ ಇಲ್ಲ. ಇಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಮೊದಲೇ ಇಲ್ಲ. ಸನ್ಮಾನ್ಯ ಉಪಮುಖ್ಯ ಮಂತ್ರಿಗಳೇ, ನಾನು ಹೇಳುವುದೇನೆಂದರೆ ಬೇಡಿಕೆ ಮೇಲೆ ಚರ್ಚೆಯಾಗುವಾಗ ಅದಕ್ಕೆ ಸಂಬಂಧಪಟ್ಟ ಸಚಿವರುಗಳು ಇಲ್ಲದಿದ್ದರೆ ಅದು ಈ ಸದನಕ್ಕೆ ಶೋಭೆ ತರುವಂಥದ್ದಲ್ಲ. ಈ ಬೇಡಿಕೆಗಳ ಮೇಲೆ ಏಕೆ ಮಾತನಾಡುತ್ತೇವೆಂದರೆ ಅದು ಅಧಿಕಾರಿಗಳ ಕಿವಿಗೆ ಬೀಳಬೇಕು, ಮಂತ್ರಿಗಳ ಕಿವಿಗೆ ಬೀಳಬೇಕು ಮತ್ತು ಶಿಕ್ಷಣದಲ್ಲಿ ಸುಧಾರಣೆಯಾಗಬೇಕು ಎನ್ನುವ ದೃಷ್ಟಿಯಿಂದ ಮಾನ್ಯ ಸದಸ್ಯರುಗಳು ಇಲಾಖೆಯ ಬೇಡಿಕೆಗಳಿಗೆ ಸಂಬಂಧಸಿದ ಹಾಗೆ ಮಾತನಾಡುವುದಕ್ಕೆ ಸಿದ್ಧತೆ ಮಾಡಿಕೊಂಡು ಬಂದಿರುತ್ತಾರೆ. ಆದಕ್ಕೆ ಮಂತ್ರಿಗಳು ಸದನದಲ್ಲಿ ಕುಳಿತುಕೊಂಡು ಸದಸ್ಯರುಗಳು ಹೇಳುವುದನ್ನು ಆಲಿಸುವುದಕ್ಕೆ ಪುರುಸೊತ್ತು ಇಲ್ಲ ಎನ್ನುವುದಾದರೆ ಹೇಗೆ? ಯಾವುದಾದರೂ ವಿಶೇಷವಾದ ಸಂದರ್ಭದಲ್ಲಿ ಸಚಿವರುಗಳು ಇಲ್ಲ ಎಂದರೆ ಅದು ನಮಗೆ ಅರ್ಥವಾಗುತ್ತದೆ. ಇವತ್ತು ಬೇಡಿಕೆ ಮೇಲಿನ ಚರ್ಚೆಯ ಸಂದರ್ಭದಲ್ಲಿ ಆ ಬೇಡಿಕೆಗೆ ಸಂಬಂಧಪಟ್ಟ ಹಾಗೆ ಇಬ್ಬರು ಸಚಿವರೂ ಸಹ ಇಲ್ಲ. ಮತ್ತು ಅಧಿಕಾರಿಗಳೂ ಸಹ ಇಲ್ಲ. ಮಾನ್ಯ ಸದಸ್ಯರುಗಳು ಬೇಡಿಕೆಗಳ ಮೇಲೆ ಚರ್ಚೆ ಮಾಡುವಾಗ ಅದನ್ನು ಆಲಿಸುವಷ್ಟು ಸಂಬಂಧಪಟ್ಟ ಮಂತ್ರಿಗಳಿಗೆ ವ್ಯವಧಾನವಿಲ್ಲದಿದ್ದರೆ ಗಿಲಿಟಿನ್ ಹಾಕಿಸಿಕೊಂಡು ಹೋಗಿ ಸ್ವಾಮಿ. ಇದರ ಬಗ್ಗೆ ನಾವು ಹೇಳಿ ಹೇಳಿ ಸಾಕಾಗಿ ಹೋಗಿದೆ. ಈ ಸರ್ಕಾರಕ್ಕೆ ಸ್ವಲ್ಪವೂ ಸೀರಿಯಸ್‌ನೆಸ್ ಇಲ್ಲ. ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಿದ್ಧ ಇಲ್ಲ. ಇದೊಂದು ಬೇಜವಾಬ್ದಾರಿತನದ ಪರಮಾವಧಿ. ಮಾನ್ಯ ಉಪಮುಖ್ಯಮಂತ್ರಿಗಳೇ ನೀವು ಈ ಕಡೆ ವಿರೋಧಪಕ್ಷದಲ್ಲಿ ಕುಳಿತಿದ್ದು ಚರ್ಚೆಯಾಗುವಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೆ ಅದನ್ನು ನೀವು ಒಪ್ಪುತ್ತಿದ್ದೀರಾ? ಯಾವ ಸಚಿವರೂ ಸಹ ಸರಿಯಾಗಿ ಸದನದೊಳಗೆ ಇರುವುದಿಲ್ಲ. ಅಧಿಕಾರಿಗಳು ಇರುವುದಿಲ್ಲ. ಈ ಬೇಡಿಕೆ ಮೇಲಿನ ಚರ್ಚೆ ಯಾವ ಮಂತ್ರಿಗಳಿಗೂ ಬೇಡವೇ? ಯಾರಿಗೋಸ್ಕರ ಈ ಸಭೆಯನ್ನು ನಡೆಸುತ್ತಿದ್ದೀರಿ? ನಾವು ಚರ್ಚೆ ಮಾಡಿದ್ದು ಕೇವಲ ರೆಕಾರ್ಡ್‌ಗೆ ಹೋದರೆ ಸಾಕೇ?

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) :- ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರತಕ್ಕಂಥ ವಿಚಾರದಲ್ಲಿ ನಮ್ಮದೂ ಸಹ ಸಮ್ಮತಿ ಇದೆ. ಮಂತ್ರಿಗಳು ಮೇಲ್ಮನೆಗೆ ಹೋಗಿದ್ದಾರೆ. ಅವರನ್ನು ಕರೆಯಿಸುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :- ಮಾನ್ಯ ಉಪಾಧ್ಯಕ್ಷರೆ, ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂಥ ಮಂತ್ರಿಗಳು ಮೇಲ್ಮನೆಯಲ್ಲಿ

ಇದ್ದಾರೆಂದು ನೀವು ಹೇಳುತ್ತೀರಿ. ಸರಿ, ನೀವು ಬನ್ನಿ, ನೀವು ಮತ್ತು ನಾವು ಆ ಮನೆಗೆ ಹೋಗಿ ನೋಡೋಣ. ಅವರು ಎಲ್ಲಿದ್ದಾರೆಂದು ಆ ಮನೆಯಲ್ಲಿ ತೋರಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ಉಪ ಮುಖ್ಯಮಂತ್ರಿಗಳು ಹೇಳುತ್ತಿರುವುದು ಸರಿ. ಮೇಲ್ಮನೆಯಲ್ಲಿ ಸಚಿವರುಗಳ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಳು ಇದ್ದಾಗ ಆ ಸಂಬಂಧಪಟ್ಟ ಸಚಿವರು ಉತ್ತರ ಕೊಡುವುದಕ್ಕೆ ಅಲ್ಲಿಗೆ ಹೋಗುವುದು ಅದು ಅನಿವಾರ್ಯವೇ ಸರಿ. ಆದರೆ ಆಯಾಯಾ ಇಲಾಖೆಯ ಕಾರ್ಯದರ್ಶಿಗಳು ಇಲ್ಲಿ ಇರುವುದಕ್ಕೆ ಆಗುವುದಿಲ್ಲವೇ? ಅವರೂ ಕೂಡ ಅಲ್ಲಿಗೆ ಹೋಗುವುದು ಅನಿವಾರ್ಯವೇ? ಈ ಸದನಕ್ಕೆ ಅಧಿಕಾರಿಗಳು ಬರುವುದಕ್ಕಾಗುವುದಿಲ್ಲವೇ? ಆಮೇಲೆ ಮತ್ತೊಂದು ವಿಚಾರ ಶಿಕ್ಷಣ ಇಲಾಖೆಗೆ ಮೂರು ಜನ ಮಂತ್ರಿಗಳನ್ನು ಮಾಡಿ ಅವರಲ್ಲಿ ಒಬ್ಬರು ಮಂತ್ರಿಯೂ ಸಹ ಈ ಸದನದಲ್ಲಿ ಇಲ್ಲ ಎಂದರೆ, ನೀವು ಸ್ವಲ್ಪ ಬೀಮಾರಿಯನ್ನು ಹಾಕಬೇಕು. ಹಾಕಿ ನೋಡೋಣ. ಯಾವ ರೀತಿಯಲ್ಲಿ ಹಾಕುತ್ತೀರೆಂದು.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :- ನಿಮ್ಮ ಕಾಲದಲ್ಲಿಯೂ ಇದು ಎಲ್ಲಾ ನಡೆದಿರುವಂಥದ್ದೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇಷ್ಟೊಂದು ಅಧ್ವಾನ ಯಾರ ಕಾಲದಲ್ಲಿಯೂ ನಡೆದಿಲ್ಲ. ಸುಮ್ಮನೆ ಅದನ್ನೇ ಹೇಳಿಕೊಂಡು ಕಾಲವನ್ನು ಕಳೆಯಬೇಡಿ. ನಿಮ್ಮ ಕಾಲದಲ್ಲಿ ನಿಮ್ಮ ಕಾಲದಲ್ಲಿ ಎಂದು.

ಶ್ರೀ ಯು. ಆರ್. ಸಭಾಪತಿ :- ಅವರ ಕಾಲದಲ್ಲಿ ಆ ರೀತಿಯಾಗಿ ಮಾಡಿದ್ದರೆ, ನಿಮ್ಮ ಕಾಲದಲ್ಲಿಯೂ ಅದೇ ರೀತಿಯಲ್ಲಿ ಮಾಡಬೇಕೆಂದು ಇದೆಯೇ?

ಶ್ರೀ ಸಿದ್ದರಾಮಯ್ಯ :- ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿರತಕ್ಕಂತಹ ವಿಷಯವನ್ನು ಸರ್ಕಾರ ತೀವ್ರವಾಗಿ ಪರಿಗಣಿಸಿದೆ. ಈಗ ಅಧಿಕಾರಿಗಳು ಬರುತ್ತಾರೆ.

ಉಪಾಧ್ಯಕ್ಷರು :- ಮಂತ್ರಿಗಳೂ ಸಹ ಇರಬೇಕು. ಅವರುಗಳನ್ನು ಕರೆಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ದಾವಣಗೆರೆಯ ಸಮ್ಮೇಳನದಲ್ಲಿ ಅಪ್ಪರ್ ಕೃಷ್ಣಕ್ಕೆ ಇನ್ನೊಬ್ಬರನ್ನು ಮಂತ್ರಿ ಮಾಡಬೇಕೆಂದು ಹೇಳಿದಾಗ ಇಲ್ಲಿ ಇರುವವರಿಗೆ ಕೆಲಸ ಇಲ್ಲ, ಮತ್ತೆ ಎಲ್ಲಿ ಮಂತ್ರಿಗಳನ್ನು ಮಾಡಲಿ ಎಂದು ಹೇಳಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಆ ರೀತಿಯಾಗಿ ಅವರು ಏನೂ ಹೇಳಿಲ್ಲ. ಅದಕ್ಕೆ ಬಣ್ಣವನ್ನು ಕಟ್ಟಿ ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇರುವವರಿಗೆ ಕೆಲಸ ಇಲ್ಲ ಎಂದು ಹೇಳಿದಾಗ ಇಲ್ಲಿ ಶಿಕ್ಷಣ ಇಲಾಖೆಯ ಮೂವರು ಮಂತ್ರಿಗಳೂ ಸಹ ಇಲ್ಲ. ನಿಜವಾಗಿಯೂ ಏನು ಅದರ ಅರ್ಥ?

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಕೆಲಸ ಇರುವುದರಿಂದಲೇ ಅವರು ಸದನಕ್ಕೆ ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನನಗ 5 ನಿಮಿಷ ಟೈಮ್ ಕೊಟ್ಟರೆ ಅವರು ಎಲ್ಲಿ ಇದ್ದಾರೆಂದು ತೋರಿಸುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಮಂತ್ರಿಗಳಿಗೆ ಬೇರೆ ಕಡೆ ಕೆಲಸ ಇದೆ ಸದನದಲ್ಲಿ ಕೆಲಸ ಇಲ್ಲ ಎಂದು ಬಂದಿಲ್ಲ.

ಉಪಾಧ್ಯಕ್ಷರು :- ಅಧಿಕಾರಿಗಳು ಬರುತ್ತಿದ್ದಾರೆ, ಮಂತ್ರಿಗಳನ್ನೂ ಸಹ ಕರೆಯುತ್ತಿದ್ದಾರೆ, ಚರ್ಚೆಯನ್ನು ಪ್ರಾರಂಭಮಾಡಿ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ವಿಧಾನಸೌಧದ ಮೂರನೇಯ ಮಹಡಿಯಲ್ಲಿ ನನಗೆ ಬಂದಿರುವಂತಹ ವರದಿಯ ಪ್ರಕಾರವಾಗಿ 12-13 ಜನ ಮಂತ್ರಿಗಳಿದ್ದಾರೆ. ಸದನವನ್ನು ಸ್ವಲ್ಪ ಕಾಲ ಮುಂದೂಡಿ ನಾವುಗಳೆಲ್ಲರೂ ಹೋಗಿ ನೋಡೇ ಬಿಡೋಣ, ಇದರ ಬಗ್ಗೆ ಒಂದು ತೀರ್ಮಾನವಾಗಿಯೇ ಬಿಡಲಿ. ಯಾರ್‍ಯಾರು ಎಲ್ಲೆಲ್ಲಿ ಯಾವ್ಯಾವ ರೂಂನಲ್ಲಿ ಇದ್ದಾರೆಂದು. ಏನು ಇದರ ಅರ್ಥ, ಮಾನ್ಯ ಉಪಾಧ್ಯಕ್ಷರೇ? ನಾನು ಅಧಿಕಾರಿಗಳ ಬಗ್ಗೆ ತಲೆಯನ್ನು ಕೆಡಿಸಿಕೊಂಡಿಲ್ಲ. ಅಧಿಕಾರಿಗಳು ಸದನಕ್ಕೆ ಬರಲಿ ಬರದೇ ಇರಲಿ ಅದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗಿಲ್ಲ. ನಾವು ಏನು ಅಧಿಕಾರಿಗಳು ಸದನದಲ್ಲಿ ಇರಬೇಕೆಂದು ಅವರಿಗೆ ಕೈಮುಗಿದು ಕೇಳಬೇಕಾಗಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- 50 ಪರ್ಸೆಂಟ್ ಹಣ ಅಧಿಕಾರಿಗಳಿಗೆ ಸಂಬಳವನ್ನು ಕೊಡುವುದಕ್ಕೆ ಹೋಗುತ್ತಿದೆ. ಮತ್ತು ಡೆವಲಪ್‌ಮೆಂಟ್‌ಗೆ ದುಡ್ಡು ಇಲ್ಲ. ಇಂತಹ ಸಂದರ್ಭದಲ್ಲಿ ಬಂದು ಕುಳಿತುಕೊಳ್ಳುವುದನ್ನು ಬಿಟ್ಟು ಬೇರೆ ಏನು ಅಂತಹ ಮಹತ್ವದ ಕೆಲಸ ಇದೆ?

ಶ್ರೀ ವಾಟಾಳ್ ನಾಗರಾಜ್ :- ಅದಕ್ಕೇ ನಾನು ಹೇಳುತ್ತಿರುವುದು; ನಿನ್ನೆಯ ದಿವಸ ವಿರೋಧ ಪಕ್ಷದ ನಾಯಕರು ಭಾಷಣವನ್ನು ಮಾಡುವಾಗ ಏನೆಂದು ಹೇಳಿದೆ ಎಂದರೆ, ಅಧಿಕಾರಿಗಳು ಯಾರೂ ಇಲ್ಲ ವಿರೋಧ ಪಕ್ಷದ ನಾಯಕರು ಭಾಷಣವನ್ನು ಮಾಡುತ್ತಿದ್ದಾರೆ. ಅಧಿಕಾರಿಗಳು ಇರಬೇಕು, ಮಾನ್ಯ ಮುಖ್ಯಮಂತ್ರಿಗಳು ಇರಬೇಕೆಂದು ಹೇಳಿದೆ. ಇದು ಒಂದು ರೀತಿಯಲ್ಲಿ ಕೋಣನ ಮುಂದೆ ಕಿಂದರಿಯನ್ನು ಬಾರಿಸಿದಂತೆ ಇದೆ. ನೀವು ಬಾರಿಸುತ್ತೀರಿ ನಾವು ಕೋಣ ಇದ್ದ ಹಾಗೆ ಇರುತ್ತೇವೆಂದು. ಅದು ಒಳ್ಳೆಯ ಸಂಪ್ರದಾಯವಲ್ಲ.

ಉಪಾಧ್ಯಕ್ಷರು :- ಮಂತ್ರಿಗಳು ಬರುತ್ತಿದ್ದಾರೆ, ಅಧಿಕಾರಿಗಳನ್ನೂ ಸಹ ಕರೆಯಿಸುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ :- ಇಲ್ಲಿ ಕಿಂದರಜೋಗಿಗಳು ಇಲ್ಲ, ಅದನ್ನು ಕೇಳುವಂಥವರು ಇಲ್ಲ.

ಶ್ರೀವಾಟಾಳ್ ನಾಗರಾಜ್ :- ಅಂದರೆ ಇವರು ಕೋಣಗಳು ಅಲ್ಲ ಎಂದು ಹೇಳುವುದು.

ಶ್ರೀ ಸಿದ್ಧರಾಮಯ್ಯ :- ಕೋಣ ಇವೆ, ಆದರೆ ಅವು ಎಲ್ಲಿ ಇರಬೇಕು ಅಲ್ಲಿ ಇರುತ್ತವೆ. ಇಲ್ಲಿ ಯಾರು ಇರಬೇಕೋ ಅವರು ಇರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ಅಂದರೆ ಗಾದೆ, ಕೋಣನ ಮುಂದೆ ಕಿಂದರಿಯನ್ನು ಬಾರಿಸಿದಂತೆ ಅಂದರೆ, ಸಂಬಂಧವಿಲ್ಲ ಎಂದು ಅಷ್ಟೇ.

ಶ್ರೀ ಸಿದ್ಧರಾಮಯ್ಯ :- ಕೋಣಗಳು ಏನು ಇಲ್ಲಿಗೆ ಬರುತ್ತವೆಯೇ?

ಶ್ರೀ ವಾಟಾಳ್ ನಾಗರಾಜ್ :- ಗಾದೆ ಇರುವುದು, ಬರಬೇಕು ಅಲ್ಲ.

ಶ್ರೀ ಸಿದ್ಧರಾಮಯ್ಯ :- ಹೇಳಿದ್ದೇವೆ. ಎಲ್ಲರೂ ಬರುತ್ತಾರೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ :- ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ಕೂಡ ಶಿಕ್ಷಣದ ಬಗ್ಗೆ ಬಹಳ ಒತ್ತು ಕೊಡಬೇಕಾದಂತಹ ಸಂದರ್ಭ ಇದೆ. ಸರ್ಕಾರಕ್ಕೆ ಶಿಕ್ಷಣದ ಬಗ್ಗೆ ಎಷ್ಟು ಕಾಳಜಿ ಇದೆ ಎನ್ನುವುದನ್ನು ತೋರಿಸಿಕೊಡುತ್ತದೆ. ಇವತ್ತು ನಾವು ಬಹಳ ಗಂಭೀರವಾಗಿ ಸಮಾಲೋಚನೆಯನ್ನು ಮಾಡಬೇಕಾಗಿದೆ. ಇವತ್ತು ದೇಶದ ಪರಿಸ್ಥಿತಿಯೂ ಸಹ ಬಹಳ ಗಂಭೀರವಾಗಿದೆ. ಇವತ್ತು ನಾವು ಕೇವಲ ಶಿಕ್ಷಣ ಎಂದು ಹೇಳಿಬಿಟ್ಟರೆ ಪಾಠಪ್ರವಚನವನ್ನು ಮಾಡತಕ್ಕಂತಹ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಲ್ಲ. ಇವತ್ತು ಶಿಕ್ಷಣ ಕ್ಷೇತ್ರದಿಂದ ದೇಶದಲ್ಲಿ ಆಗತಕ್ಕಂತಹ ಅರಾಜಕತೆಯನ್ನು ತಡೆಗಟ್ಟಬಹುದು, ದೇಶದಲ್ಲಿರ ತಕ್ಕಂತಹ ಅಸಮಾನತೆಯನ್ನು ತಡೆಗಟ್ಟಬಹುದು, ಅನೇಕ ದ್ವಂದ್ವ ನೀತಿಯಲ್ಲಿ ನಾವುಗಳು ಜೀವಿಸುತ್ತಿದ್ದೇವೆ. ರಾಜ್ಯ ರಾಜ್ಯಗಳಲ್ಲಿ ವೈಷಮ್ಯ, ಭಾಷೆ ಭಾಷೆಗಳಲ್ಲಿ ವೈಷಮ್ಯ ಇವೆಲ್ಲದರ ಒಂದು ದೂರ ದೃಷ್ಟಿಯಿಂದ ಶಿಕ್ಷಣ ಕ್ಷೇತ್ರ, ಶಿಕ್ಷಣ ರಾಷ್ಟ್ರೀಯ ಮನೋಭಾವದಿಂದ ಬೆಳೆದಾಗ ಬಹುಶಃ ಶಿಕ್ಷಣಕ್ಕೂ ಕೂಡ ಒಂದು ಒಳ್ಳೆಯ ಹೆಸರು ಬರುತ್ತದೆ. ಆ ದಿಶೆಯಲ್ಲಿ ನಮ್ಮ ದೇಶದಲ್ಲಿ ಅನಕ್ಷರತೆ, ಸ್ವಾತಂತ್ರ್ಯ ಸಿಕ್ಕಿ ಇಷ್ಟು ವರ್ಷಗಳಾದರೂ ಕೂಡ ನಾವು ಅನೇಕ ಯೋಜನೆಗಳನ್ನು ಹಾಕಿ ದಾಗಲೂ ಕೂಡ ವೃತ್ತಿ ಶಿಕ್ಷಣ ಇರಬಹುದು, ವಯಸ್ಕರ ಶಿಕ್ಷಣ ಇರಬಹುದು, ಮತ್ತು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕಲಿಯಲಿ ಎನ್ನುವ ದೃಷ್ಟಿಯಿಂದ ಶಾಲೆಯಲ್ಲಿ ಉಪ್ಪಿಟ್ಟನ್ನು ಕೊಡುವುದಾಗಲಿ, ದುಡ್ಡು ಕೊಡುವುದಾಗಲಿ, ಚಿತ್ರಾನ್ನವನ್ನು ಕೊಡುವು ದಾಗಲಿ ಮಾಡಿ ಅವರ ಮನ ಒಲಿಸುವಂತಹ ಪ್ರಯತ್ನವನ್ನು ಮಾಡುತ್ತೇವೆಯೇ ವಿನಃ ಅವರು ತಮ್ಮ ಸ್ವಪ್ರತಿಷ್ಠೆ ಯಿಂದ, ಸ್ವಂತ ಭಾವನೆಯಿಂದ ಬರತಕ್ಕಂಥದ್ದಕ್ಕೆ ನಾವುಗಳು ಯಾರೂ ಕೂಡ ಪ್ರಯತ್ನ ವನ್ನು ಮಾಡಲಿಲ್ಲ. ಇದು ದೇಶದ ದುರಾದೃಷ್ಟ. ಆ ಶಿಕ್ಷಣ ಕ್ಷೇತ್ರಕ್ಕೆ ಎಷ್ಟರಮಟ್ಟಿಗೆ ಪ್ರಾಮುಖ್ಯತೆಯನ್ನು ಕೊಟ್ಟಿದ್ದೇವೆಂದರೆ ಇವತ್ತು ಬೇಕಾದರೆ ಹೇಳಬಹುದು, ಹಿಂದಿನ ಸರ್ಕಾರದವರು ಪ್ರಾತಿನಿಧ್ಯವನ್ನು ಕೊಟ್ಟಿಲ್ಲ. ಇದಕ್ಕೆ ಹೆಚ್ಚು ಒತ್ತು ಕೊಟ್ಟಿಲ್ಲ ಎನ್ನುವಂತಹ ಮಾತಿಗೆ ನಾನು ಅಪ್ರಸ್ತುತ. ಒಟ್ಟಿನಲ್ಲಿ ಯಾವುದೇ ಸರ್ಕಾರ ಇರಲಿ, ಯಾವುದೇ ಕ್ಷೇತ್ರ ಇರಲಿ ಇವತ್ತು ಶಿಕ್ಷಣ ಕ್ಷೇತ್ರಕ್ಕೆ ಯಾವುದೇ ಪಕ್ಷ ಇರಲಿ ಯಾರೇ ಇರಲಿ, ಬಹಳ ಹೆಚ್ಚಿನ ರೀತಿಯಿಂದ ಪ್ರಾಧಾನ್ಯತೆಯನ್ನು ಕೊಟ್ಟಾಗ

ಈ ದೇಶದಲ್ಲಿರತಕ್ಕಂತಹ ಬಹಳ ಯೋಜನೆಗಳೂ ಸಹ ಸಫಲತೆಯನ್ನು ಹೊಂದುತ್ತದೆ. ಇವತ್ತು ಶಿಕ್ಷಣದ ಬಗ್ಗೆ ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನಾವು ಪ್ರತಿದಿವಸ ಯಾವುದಾದರೂ ಅಪಾಯ ವಾಗಿರತಕ್ಕಂತಹ ಯೋಜನೆಗಳ ಬಗ್ಗೆ ಮಾತನಾಡುತ್ತೇವೆ. ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿಲ್ಲವೆಂದು ತಿಳಿದು ಕೊಂಡು ಮಾತನಾಡುತ್ತೇವೆ. ಮಂತ್ರಿಗಳೂ ಕೂಡ ಸರಿಯಾಗಿ ಕೆಲಸವನ್ನು ಮಾಡಿಲ್ಲವೆಂದು ಹೇಳುತ್ತೇವೆ. ಮತ್ತು ಶಾಸಕರುಗಳೂ ಸಹ ಈ ಕ್ಷೇತ್ರದಲ್ಲಿ ಸರಿಯಾಗಿ ಕೆಲಸವನ್ನು ಮಾಡಿಲ್ಲವೆಂದು ಹೇಳುತ್ತೇವೆ. ಇವುಗಳೆಲ್ಲದರ ಮೇಲೆ ಅಪಾದನೆಯು ಬರಬೇಕಾದರೆ ಯಾವಾಗ ಅನಾಗರೀಕತೆ ಇರತಕ್ಕಂಥದ್ದನ್ನು ಯಾವಾಗ ಹೋಗಲಾಡಿಸುತ್ತಾರೋ ಯಾವಾಗ ಅನಕ್ಷರತೆಯನ್ನು ಹೋಗಲಾಡಿಸುತ್ತೇವೆಯೋ ಆಗ ನಿಜವಾದಂತಹ ಪ್ರಜಾಪ್ರಭುತ್ವ ಬರುತ್ತದೆ. ಮತ್ತು ಎಲ್ಲರೂ ಯಾವಾಗ ಸುಶಿಕ್ಷಿತರು ಆಗುತ್ತಾರೋ ಆಗ ದೇಶ ಕೂಡ ಜಾಗೃತವಾಗುತ್ತದೆ, ಅಧಿಕಾರಿಗಳೂ ಕೂಡ ಜಾಗೃತರಾಗುತ್ತರೆ. ಮತ್ತು ಮೇಲಾಗಿ ಶಿಕ್ಷಣೋತ್ತರದಿಂದ ಮಕ್ಕಳೂ ಕೂಡ ಹೆಚ್ಚು ತಿಳುವಳಿಕೆಯನ್ನು ಪಡೆದುಕೊಳ್ಳುವಂತಹ ಸಾಧ್ಯತೆ ಇದೆ. ನಾವು ಶಿಕ್ಷಣ ಕ್ಷೇತ್ರವನ್ನು ಆ ದೃಷ್ಟಿಕೋನದಿಂದ ನೋಡಿದಾಗ ಇವತ್ತು ನಮಗೆ ಬಹಳ ಬೇಸರ ವಾಗುತ್ತದೆ, ಬಹಳ ವ್ಯಥೆಯಾಗುತ್ತದೆ. ಆ ಮಟ್ಟಕ್ಕೆ ಇನ್ನೂ ಕೂಡ ಮುಟ್ಟುವುದಕ್ಕೆ ಸಾಧ್ಯವಾಗಿಲ್ಲವೆಂದು ಬಹಳ ಖೇದ ಎಂದು ನನಗೆ ಅನ್ನಿಸುತ್ತದೆ. ಇವತ್ತು ಪ್ರಾಥಮಿಕ ಶಿಕ್ಷಣದಲ್ಲಿ ಬಹಳ ಮುಖ್ಯವಾಗಿ 1992 ರ ಆದೇಶದ ಅನ್ವಯ 14 ವರ್ಷದೊಳಗಿನ ಮಕ್ಕಳಿಗೆ 2000 ಸಾವಿರ ಇಸವಿಯೊಳಗೆ ಪೂರ್ಣವಾಗಿ ವಿದ್ಯೆಯನ್ನು ಕಲಿಸಬೇಕೆಂದು ಹೇಳಿ ಈಗಾಗಲೇ ಸರ್ಕಾರ ಆದೇಶವನ್ನು ಹೊರಡಿಸಿದೆ. ಆದರೆ ಆ ದಿಸೆಯಲ್ಲಿ ನಾವು ಬಹಳ ಕುಲಂಕುಷವಾಗಿ ನೋಡಿದಾಗ ಸರ್ಕಾರದ ದೂರದೃಷ್ಟಿಯನ್ನು ಇಟ್ಟುಕೊಂಡು ಈ ಒಂದು ಕಾರ್ಯಕ್ರಮ ವನ್ನು ಹಾಕಿದ್ದಾಗ್ಯೂ ಕೂಡ ಬಹುಶಃ ನನಗೆ ಏನು ಖೇದ ಎಂದು ಅನ್ನಿಸುತ್ತದೆಂದರೆ, 1992 ಕ್ಕಿಂತಲೂ ಮೊದಲೇ ಈ ರೀತಿಯ ಯೋಜನೆಯನ್ನು ಹಾಕಿಕೊಂಡಿದ್ದರೆ ಬಹುಶಃ ಈ ರೀತಿಯ ದುರದೃಷ್ಟವು ಬರುತ್ತಿರಲಿಲ್ಲ. ಆದರೂ ಕೂಡ 3 ಉದ್ದೇಶಗಳನ್ನು ಈಡೇರಿಸಬೇಕೆಂದು ಈ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಒಂದು ಸಾರ್ವತ್ರಿಕವಾಗಿ ಶಾಲೆ ಸವಲತ್ತುಗಳನ್ನು ಒದಗಿಸುವುದು, ಎರಡನೆಯದಾಗಿ ಸಾರ್ವತ್ರಿಕವಾಗಿ ಎಲ್ಲಾ ಮಕ್ಕಳು ಶಾಲೆಗೆ ಹಾಜರಾಗುವಂತೆ ಮಾಡುವುದು. ಮೂರನೆಯದಾಗಿ ಸಾರ್ವತ್ರಿಕವಾಗಿ ಪೂರ್ವ ನಿರ್ಧಾರಿತ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸುವುದು. ಈ ಮೂರು ಉದ್ದೇಶ ಗಳಿಗಾಗಿ ಹಲವಾರು ಉದ್ದೇಶಗಳನ್ನು ಇಟ್ಟುಕೊಂಡು ಈ ಯೋಜನೆಗಳನ್ನು ಹಾಕಿಕೊಂಡು ಇವತ್ತಿನ ದಿವಸ ಉತ್ತೇಜನವನ್ನು ಕೊಡುವುದಕ್ಕೆ ಸರ್ಕಾರದವರು ಹಲವಾರು ಯೋಜನೆ ಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಬಹುಶಃ ಈ ಯೋಜನೆಗಳೊಳಗೆ ಸಮವಸ್ತ್ರಗಳನ್ನು ಕೊಡತಕ್ಕಂಥದ್ದು ಆಗಲಿ, ಮತ್ತು ಮಕ್ಕಳಿಗೆ ಹಾಲು, ಮೊಟ್ಟೆ ಮತ್ತೊಂದು ಕೊಡತಕ್ಕಂಥದ್ದು ಅಥವಾ ಪುಸ್ತಕಗಳನ್ನು ಕೊಡತಕ್ಕಂಥದ್ದು ಆಗಿರಬಹುದು. ಒಟ್ಟಾರೆ ಇಷ್ಟೇಲ್ಲಾ ಪ್ರಯತ್ನ ಮಾಡಿ ದಾಗಿಯೂ ಕೂಡ ಇವತ್ತು ಪ್ರಾಥಮಿಕ ಶಿಕ್ಷಣ ಒಂದಕ್ಕೆ ಸೀಮಿತವಾಗಿ ಮಾತನಾಡು ವುದಾದರೆ ಬಹುಶಃ 52 ಪರ್ಸೆಂಟ್ ವಿದ್ಯಾರ್ಥಿಗಳೂ ಕೂಡ ಶಾಲೆಗೆ ಬರದೇ ಇರತಕ್ಕಂತಹ, ತಮ್ಮ ಜೀವನದಲ್ಲಿ ಶಿಕ್ಷಣದಿಂದ ಅವರು ವಂಚಿತರಾಗಿ ಶಿಕ್ಷಣವನ್ನು ಅವರುಗಳು ಪಡೆಯುವುದಕ್ಕೂ ಕೂಡ ಸಾಧ್ಯವಾಗುತ್ತಿಲ್ಲ. ಉದಾಹರಣೆಗೆ ಪ್ರಾಥಮಿಕ ಶಾಲೆ ಒಂದರಲ್ಲಿಯೇ ಹೇಳುವುದಾದರೆ, ಸುಮಾರು 53.54 ಲ್ಯಾಕ್ಸ್ ಇದೆ. ಒಂದನೇ

ತರಗತಿಯಿಂದ 4 ನೇ ತರಗತಿಯಲ್ಲಿ ವ್ಯಾಸಂಗವನ್ನು ಮಾಡತಕ್ಕಂಥವರು, ಅದೇ 5 ನೇ ತರಗತಿಯಿಂದ 7 ನೇ ತರಗತಿಯಲ್ಲಿ ಕಲಿಯುವಂತಹ ಮಕ್ಕಳು 26.13 ಟೋಟಲ್ ವಿದ್ಯಾರ್ಥಿಗಳ ಸಂಖ್ಯೆ 79.67 ಇದರೊಳಗೆ ಅಂಕಿ ಸಂಖ್ಯೆಯೊಳಗೆ ನಾನು ಸರ್ಕಾರದ ಗಮನವನ್ನು ಸೆಳೆಯುವುದೇನೆಂದರೆ, ಮಧ್ಯದಲ್ಲಿ ಮಕ್ಕಳು ವ್ಯಾಸಂಗವನ್ನು ಬಿಡತಕ್ಕಂತಹ ವಿಚಾರದಲ್ಲಿ, ಸುಮಾರು ಈ 79 ಲಕ್ಷದೊಳಗೆ ಈ ಅಂದರೆ 3,4,5, ತರಗತಿಯಲ್ಲಿ ವ್ಯಾಸಂಗವನ್ನು ಮಾಡುವಾಗ ಶಾಲೆಯನ್ನು ಬಿಟ್ಟಿರತಕ್ಕಂತಹ ಮಕ್ಕಳ ಸಂಖ್ಯೆ 27 ಲಕ್ಷ ವಿದ್ಯಾರ್ಥಿಗಳು. 27 ಲಕ್ಷ ವಿದ್ಯಾರ್ಥಿಗಳು ಕೂಡ ಶಿಕ್ಷಣದಿಂದ ವಂಚಿತರಾಗಿದ್ದಾರೆಂದು ಹೇಳಿದರೆ ನಮಗೆ ನಿಜವಾಗಿಯೂ ಕೂಡ ಬಹಳ ಖೇದ ಎಂದು ಎನಿಸುತ್ತದೆ. ಇವತ್ತು ಆ ಮಕ್ಕಳ ಭವಿಷ್ಯದ ಬಗ್ಗೆ ನಾವೆಲ್ಲರೂ ಚಿಂತನೆ ಮಾಡಬೇಕಾಗಿರೆ ಬಹುಶಃ ಆ ದಿಸೆಯಲ್ಲಿ ಸರ್ಕಾರದವರು ಇದುವರೆಗಗೂ ಎಫೆಕ್ಟೀವ್ ಆಗಿ ಚಿಂತನೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿಲ್ಲವೆಂದು ಖಡಾಖಂಡಿತವಾಗಿ ಹೇಳಬಯಸುತ್ತೇನೆ.

ಅದೇ ರೀತಿ 79 ಲಕ್ಷ ವಿದ್ಯಾರ್ಥಿಗಳು 7 ನೇ ತರಗತಿಯವರೆಗೂ ವ್ಯಾಸಂಗ ಮಾಡಿದ್ದವರು ಎಸ್.ಎಸ್.ಎಲ್.ಸಿ.ವರೆಗೆ ವ್ಯಾಸಂಗ ಮಾಡಿದಂಥ ವಿದ್ಯಾರ್ಥಿಗಳ ಅಂಕಿ ಸಂಖ್ಯೆಗಳನ್ನು ನೋಡಿದರೆ ಕೇವಲ 14.67 ಲಕ್ಷ ವಿದ್ಯಾರ್ಥಿಗಳಾಗಿದ್ದಾರೆ. ಅಂದರೆ 79 ಲಕ್ಷ ಮಕ್ಕಳು 7 ನೇ ತರಗತಿಯಲ್ಲಿ ಇದ್ದಂಥವರು ಎಸ್.ಎಸ್.ಎಲ್.ಸಿ.ವರೆಗೆ ಬರುವ ಹೊತ್ತಿಗೆ ಶಾಲೆಯನ್ನು ಬಿಟ್ಟಿರುವವರ ಸಂಖ್ಯೆ ಸುಮಾರು 65 ಲಕ್ಷ. ಅದೇ ರೀತಿ ಪಿ.ಯು.ಸಿ.ವರೆಗೆ ಓದಿದಂಥ ವಿದ್ಯಾರ್ಥಿಗಳ ಸಂಖ್ಯೆಯನ್ನು ನೋಡಿದರೆ ನಮಗೆ ನಿಜವಾಗಿ ಖೇದವೆನಿಸುತ್ತದೆ. ಸುಮಾರು 2-3 ಲಕ್ಷ ವಿದ್ಯಾರ್ಥಿಗಳೂ ಪಿ.ಯು.ಸಿವರೆಗೆ ಬರಲಿಲ್ಲ ಎಂದರೆ ಇದರ ಬಗ್ಗೆ ಸರ್ಕಾರ ಯೋಚಿಸಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟು ಸರ್ಕಾರ ಕೆಲಸಮಾಡತಕ್ಕದ್ದು ಬಹಳ ಅವಶ್ಯಕತೆ ಇದೆ ಎಂಬುದನ್ನು ಹೇಳಬಯಸುತ್ತೇನೆ. ಇವತ್ತು ಆ ಮಕ್ಕಳ ಭವಿಷ್ಯಕ್ಕಾಗಿ ಅನೇಕ ಸುಧಾರಣಾ ಕಾರ್ಯ ಕ್ರಮಗಳನ್ನು ನಾವು ಹಾಕಿಕೊಂಡಿದ್ದರೂ ಕೂಡ ಸರ್ಕಾರ ಇದರಲ್ಲಿ ತನ್ನ ಸಫಲತೆಯನ್ನು ಕಾಣುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದಕ್ಕೆ ಹತ್ತು ಹಲವಾರು ಕಾರಣಗಳಿರಬಹುದು. ನಾನಾದರೂ ತಮ್ಮಲ್ಲಿ ಬಹಳ ಕಳಕಳಿಯಿಂದ ವಿನಂತಿಸಿಕೊಳ್ಳುವುದೇನೆಂದರೆ, ನೀವು ಕಾಲೇಜು ವಿದ್ಯಾಭ್ಯಾಸಕ್ಕೆ ಅನುದಾನವನ್ನಾದರೂ ಕೊಡಿ ಏನಾದರೂ ಮಾಡಿಕೊಳ್ಳಿ; ಆದರೆ ಅದಕ್ಕಿಂತಲೂ ಬಹಳ ಮುಖ್ಯವಾದುದು ಎಂದರೆ ಪ್ರಾಥಮಿಕ ವಿದ್ಯಾಭ್ಯಾಸ ಪ್ರಾಥಮಿಕ ಶಿಕ್ಷಣ, ಪೂರ್ವ ಪ್ರಾಥಮಿಕ ಶಿಕ್ಷಣ ಪ್ರೌಢ ಶಿಕ್ಷಣಕ್ಕೆ ನಾವು ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಹೆಚ್ಚು ಅನುದಾನವನ್ನು ಕೊಟ್ಟರೆ ಅಲ್ಲಿರತಕ್ಕ ಸಮಸ್ಯೆಗಳನ್ನು ಬಗೆಹರಿಸಿದರೆ, ಬಹಳ ಅನುಕೂಲವಾಗುತ್ತದೆ. ಸರ್ಕಾರ ಹಲವಾರು ಯೋಜನೆಗಳನ್ನು ರೂಪಿಸಿ ಹತ್ತಾರು ಕೋಟಿ ರೂ.ಗಳನ್ನು ವಿನಿಯೋಗಿಸುವ ಬದಲು ಈ ವಿದ್ಯಾ ಕ್ಷೇತ್ರಕ್ಕೆ ಹೆಚ್ಚಿನ ಹಣವನ್ನು ಒದಗಿಸಿದರೆ ಬಹುಶಃ ಇದಕ್ಕಿಂತಲೂ ದೊಡ್ಡ ಕೆಲಸ ಬೇರೊಂದಿಲ್ಲವೆಂದು ಹೇಳಬಯಸುತ್ತೇನೆ. ಸರ್ಕಾರದವರು ಸರಿಯಾದ ಕಾರ್ಯಕ್ರಮವನ್ನು ಹಮ್ಮಿಕ್ಕೊಂಡು ಪ್ರಾಥಮಿಕ ಶಿಕ್ಷಣದಲ್ಲಿರುವ ನ್ಯೂನತೆಗಳನ್ನು ಹೋಗಲಾಡಿಸಿ, ಸುಧಾರಣೆ ಕಾರ್ಯವನ್ನು ಕೈಗೊಳ್ಳಬೇಕೆಂದು ಕಳಕಳಿಯಿಂದ ಭಿನ್ನೈಸಿಕೊಳ್ಳುತ್ತೇನೆ. ಉದಾಹರಣೆಗೆ

ಹೇಳುವುದಾದರೆ ಈ ವರ್ಷ ರಾಜ್ಯದ ಒಟ್ಟು ಬಜೆಟ್‌ನಲ್ಲಿ 16.85 ಪರ್ಸೆಂಟ್ ಹಣವನ್ನು ಕೊಟ್ಟಿದ್ದೀರಿ. ಇದು ಬಹಳ ಕಡಿಮೆ. ಇದನ್ನು ಇನ್ನೂ ಹೆಚ್ಚು ಮಾಡಬೇಕು. ಪ್ರಾಥಮಿಕ ಶಿಕ್ಷಣಕ್ಕಾಗಿ ಕನಿಷ್ಠ 20 ಪರ್ಸೆಂಟ್ ಆದರೂ ಬಜೆಟ್ ಅಲೋಕೇಷನ್ ಮಾಡಬೇಕು. ಇವತ್ತು ತಾವು ಪಠ್ಯಪುಸ್ತಕಗಳ ವಿತರಣೆಗಾಗಿ ಸುಮಾರು 6 ಕೋಟಿ ರೂ ಉಪಾಹಾರಕ್ಕಾಗಿ ಸುಮಾರು 32 ಕೋಟಿ ರೂ, ಇದೇರೀತಿ ಸಮವಸ್ತ್ರಗಳ ವಿತರಣೆಗೂ ಕೂಡ ಹಣವನ್ನು ಕೊಡುತ್ತಿದ್ದೀರಿ. ನೀವು ಏನು ಹಣವನ್ನು ಕೊಡುತ್ತಿದ್ದೀರಿ ಇದು ಸರಿಯಾದ ರೀತಿಯಲ್ಲಿ ಫಲಾನುಭವಿಗಳಿಗೇ ಮುಟ್ಟುವ ರೀತಿಯಲ್ಲಿ ತಾವು ನೋಡಿಕೊಳ್ಳ ಬೇಕಾಗಿದೆ. ಬಹಳಷ್ಟು ಹಣ ಅಪವ್ಯಯವಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅನೇಕ ಶ್ರೀಮಂತರ ಮಕ್ಕಳು ಗೋಧಿಯನ್ನು ಎಲ್ಲೆಲ್ಲೋ ಚೆಲ್ಲಿ, ಬೇರೆಯವರಿಗೆ ಮಾರಾಟ ಮಾಡುವಂಥ ಕೆಲಸವನ್ನು ನಾವು ನೋಡುತ್ತಿದ್ದೇವೆ. ನೀವು ಗುರ್ತಿಸುವಂಥ ಫಲಾನು ಭವಿಗಳು ಯಾರಿದ್ದಾರೆ ಅವರು ನಿಜವಾಗಿಯೂ ಇದರ ಪ್ರಯೋಜನವನ್ನು ಪಡೆದು ಕೊಳ್ಳಬೇಕೆಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಅದೇರೀತಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿಯನ್ನು ಹೆಚ್ಚಿಸಲು ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಸರ್ಕಾರ ವಿಶೇಷ ಆದ್ಯತೆಯನ್ನು ಕೊಡುತ್ತಿದೆ. ಇವತ್ತು ನಮ್ಮ ಶಿಕ್ಷಕ ವರ್ಗದವರು ಗ್ರಾಮಸ್ಥರ ಸಹಕಾರ ದಿಂದ, ಮತ್ತು ಅಧಿಕಾರಿಗಳ ಸಹಕಾರದಿಂದ ಈ ಯೋಜನೆಯನ್ನು ಕ್ರಾಂತಿಕಾರಿಯಾಗಿ ಪರಿವರ್ತನೆ ಮಾಡಬಹುದು. ಆದರೆ ಒಂದು ದುರಾದೃಷ್ಟವೆಂದರೆ, ಇವತ್ತು ಅನೇಕ ಶಿಕ್ಷಕರು ಇದರಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿಲ್ಲ. ನಮ್ಮ ಮಾನ್ಯ ಸಚಿವರಾದ ಗೋವಿಂದಗೌಡರು ಬಹಳ ಆಸಕ್ತಿಯುಳ್ಳ ಮಂತ್ರಿ ಆಗಿದ್ದಾರೆ. ಅವರು ಕೇವಲ ಅವರ ಇಲಾಖೆಯಲ್ಲಿ ಮಾತ್ರ ಒಳ್ಳೆಯವರಾಗಿ ಕೆಲಸ ಮಾಡಿದರೆ ಸಾಲದು. ಅವರು ತಮ್ಮ ಕಾರ್ಯಕ್ಷೇತ್ರದಲ್ಲಿ ಕೆಳಮಟ್ಟದ ಅಧಿಕಾರಿಗಳಲ್ಲೂ ಕೂಡ ದಯೆ ದಾಕ್ಷಿಣ್ಯದಿಂದ ಕೆಲಸ ಮಾಡಬೇಕಾಗುತ್ತದೆ. ಇವತ್ತು ಶಿಕ್ಷಕ ವರ್ಗದವರು ಅಷ್ಟೊಂದು ಕಾಳಜಿಯಿಂದ ಕೆಲಸ ನಿರ್ವಹಿಸಲು ಸಾಧ್ಯವಾಗಿಲ್ಲ ಎಂಬ ಮಾತನ್ನು ಹೇಳಬಯಸುತ್ತೇನೆ.

ಇವತ್ತು ಯಾವುದೇ ಸರ್ಕಾರೀ ಶಾಲೆಗಳನ್ನು ತೆಗೆದುಕೊಂಡರೂ ಅವುಗಳಿಗೆ ಸ್ವಂತವಾದ ಆಟದ ಮೈದಾನಗಳಿಲ್ಲ. ಆಟಪಾಠಗಳಿಗೆ ನಾವು ಎಷ್ಟರಮಟ್ಟಿನ ಪ್ರಾಶಸ್ತ್ಯ ವನ್ನು ಕೊಟ್ಟಿದ್ದೇವೆ ಎಂಬುದನ್ನು ನೋಡಿದರೆ ಬಹಳ ಖೇದ ಎನಿಸುತ್ತದೆ. ಮಕ್ಕಳು ಆಟವಾಡುವ ಬಗ್ಗೆ ಅಥವಾ ಮಕ್ಕಳ ದೈಹಿಕ ಶಿಕ್ಷಣದ ಬಗ್ಗೆ ನಾವು ಯಾರೂ ಕೂಡ ಹೆಚ್ಚಿನ ಮಹತ್ವವನ್ನು ಕೊಟ್ಟಿಲ್ಲ. ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರದವರು ಬಹಳಷ್ಟು ಒತ್ತಾಯ ಹಾಕುತ್ತಾರೆ. ಆದರೆ ಅದೇ ಸರ್ಕಾರದ ಅಧೀನದಲ್ಲಿರುವ ಶಾಲೆಗಳ ಪರಿಸ್ಥಿತಿಯನ್ನು ನೋಡಿದರೆ ಅಲ್ಲಿ ಯಾವುದೇ ರೀತಿಯ ಅನುಕೂಲಗಳೂ ಇಲ್ಲ. ಇವತ್ತು ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸಬೇಕಾದರೆ ನಾವು ಮೊದಲು ಅವರ ದೈಹಿಕ ಶಿಕ್ಷಣದ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. ಸರ್ಕಾರ ದವರು ಪ್ರತಿಯೊಂದು ಶಾಲೆಗೂ ದೈಹಿಕ ಶಿಕ್ಷಕರನ್ನು ಆಯ್ಕೆ ಮಾಡಿ ನೇಮಕಾತಿ ಮಾಡಿದರೆ ಬಹುಶಃ ಆ ಮಕ್ಕಳ ಮನಸ್ಸಿಗೆ ಹೆಚ್ಚಿನ ಮನರಂಜನೆ, ಆಸಕ್ತಿ, ಉತ್ಸಾಹ ಸಿಕ್ಕುತ್ತದೆ ಎಂಬುದನ್ನು ಹೇಳಬಯಸುತ್ತೇನೆ.

ಈ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಕರ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ನಮ್ಮ ಉತ್ತರ ಕರ್ನಾಟಕದಲ್ಲಿ ಬಹಳಷ್ಟು ಘಟನೆಗಳು ನಡೆದಿವೆ. ಪ್ರಾಥಮಿಕ ಶಿಕ್ಷಕರು ಯಾರಿದ್ದಾರೆ ಅವರು ಕಳೆದ 15-20 ವರ್ಷಗಳಿಂದ ಒಂದೇ ತಾಲ್ಲೂಕಿನಲ್ಲಿ, ಒಂದೇ ಗ್ರಾಮದಲ್ಲೇ ಕೆಲಸ ಮಾಡುತ್ತಿದ್ದಾರೆ. ಇದು ಒಂದು ದುರಾದೃಷ್ಟ. ಇವತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ, ಸರ್ಕಾರದವರು ಹೆಚ್ಚಿನ ಆದ್ಯತೆ, ವೇತನ ಮತ್ತಿತರ ಸವಲತ್ತುಗಳನ್ನು ಕೊಟ್ಟಿದ್ದಾರೆ. ಈ ಶಿಕ್ಷಕರನ್ನು ಗುರುಗಳೆಂಬ ಪೂಜ್ಯ ಭಾವನೆಯಿಂದ ಕಾಣುತ್ತಿದ್ದೇವೆ. ಆದರೆ ಒಂದು ಮಾತನ್ನು ನಾನು ಬಹಳ ನೊಂದ ಮನಸ್ಸಿನಿಂದ ಹೇಳಬೇಕಾಗಿದೆ. ಪ್ರತಿಯೊಬ್ಬ ಶಿಕ್ಷಕರೂ ಕೂಡ ರಾಜಕೀಯ ಮಾಡುವುದಕ್ಕೆ ಪ್ರಾರಂಭಿಸಿದ್ದಾರೆ. ಬಹುಶಃ ಈ ಭಾಗದಲ್ಲಿ ಕಡಿಮೆ ಇದೆ. ಆದರೆ ನಮ್ಮ ಉತ್ತರ ಕರ್ನಾಟಕದಲ್ಲಂತೂ ಹೇಳತೀರದಷ್ಟು ಈ ಶಿಕ್ಷಕರು ರಾಜಕಾರಣಿಗಳಾಗಿದ್ದರು. ಆ ದೃಷ್ಟಿಯಿಂದ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ; ಯಾವುದೇ ಶಿಕ್ಷಕರನ್ನಾಗಲೀ ಅವರದ್ದು ಅದು ಹುಟ್ಟಿದ ಊರೇ ಆದರೂ ಕೂಡ ಅವರು ಬೇರೆ ತಾಲ್ಲೂಕಿನಲ್ಲಿ ಕೆಲಸ ಮಾಡುವಂಥ ವ್ಯವಸ್ಥೆ ಮಾಡಿಕೊಡಬೇಕು. ಆಮೂಲಾಗ್ರವಾದ ಬದಲಾವಣೆ ತರಬೇಕೆಂದರೆ ಯಾರು ಅದೇ ಊರಿನಲ್ಲಿ ಹುಟ್ಟಿದ್ದು ಅದೇ ತಾಲ್ಲೂಕಿನಲ್ಲೇ, ಅದೇ ಗ್ರಾಮದಲ್ಲೇ ಸೇವೆಯನ್ನು ಮಾಡುತ್ತಿದ್ದರೆ ಮೊದಲು ಅವರನ್ನು ಅಲ್ಲಿಂದ ಬೇರೆ ತಾಲ್ಲೂಕಿಗೆ, ವರ್ಗ ಮಾಡಿ. ಆಗ ಮಾತ್ರ ಶಿಕ್ಷಣದ ಸುಧಾರಣೆ ಆಗುತ್ತದೆಂದು ನನ್ನ ಭಾವನೆ. ಕಳೆದ 10-20 ವರ್ಷಗಳಿಂದ ಅವರು ಒಂದೇ ಕಡೆ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ಆ ರೀತಿ ಒಂದೇ ಕಡೆ ಗ್ರಾಮೀಣ ಪ್ರದೇಶದಲ್ಲೇ ಕೆಲಸ ಮಾಡುತ್ತಾ ಬಂದಿರುವವರನ್ನೂ ಕೂಡ ಬೇರೆಕಡೆ ವರ್ಗಾವಣೆ ಮಾಡಬೇಕು. ಏಕೆಂದರೆ ಈ ವರ್ಗ ಯಾವುದೋ ಒಂದು ಶಾಪದಿಂದ ಒಂದೇ ಕಡೆ ಇರಬಾರದು. ಪಟ್ಟಣದಲ್ಲಿರುವವರು ಗ್ರಾಮೀಣ ಪ್ರದೇಶದಕ್ಕೆ, ಗ್ರಾಮೀಣ ಪ್ರದೇಶದಲ್ಲಿರುವವರು ಪಟ್ಟಣ ಪ್ರದೇಶಕ್ಕೆ ಬಂದರೆ ಅವರಲ್ಲೂ ಕೂಡ ಒಂದು ರೀತಿಯ ಹುರುಪು, ಹುಮ್ಮಸ್ಸು ಬಂದು ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ.

(ಶ್ರೀ ರಮೇಶ್ ಕುಮಾರ್) ರವರು ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು.

ಇವತ್ತು ಈ ದಿಸೆಯಲ್ಲಿ ನಾನು ಹೇಳಿದಂಥ ರೀತಿಯಲ್ಲಿ ಶಿಕ್ಷಕರನ್ನು ವರ್ಗಾವಣೆ ಮಾಡುವ ನಿಟ್ಟಿನಲ್ಲಿ ಸರ್ಕಾರ ಒಂದು ದಿಟ್ಟ ನಿಲುವನ್ನು ತಾಳಿದ್ದೇ ಆದರೆ ಈ ಶಿಕ್ಷಣದ ಗುಣಮಟ್ಟವನ್ನು ನಾವು ಪಡೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಪ್ರತಿಯೊಂದು ಶಾಲೆಗೂ ಮಕ್ಕಳು ಹೆಚ್ಚಿನ ರೀತಿಯಲ್ಲಿ ಬರಬೇಕೆಂದರೆ, ಅವರ ಮನಸ್ಸನ್ನು ಆಕರ್ಷಿಸಬೇಕಾದರೆ ಪ್ರತಿಯೊಂದು ಶಾಲೆಗೂ ಒಬ್ಬೊಬ್ಬ ಮಹಿಳಾ ಶಿಕ್ಷಕಿಯರನ್ನು ನೇಮಕಾತಿ ಮಾಡುವುದು ಒಳ್ಳೆಯದು. ಸರ್ಕಾರದವರು ಮಹಿಳಾ ಶಿಕ್ಷಕಿಯರನ್ನು ನೇಮಕಾತಿ ಮಾಡಿದರೆ ಅವರು ಮಕ್ಕಳಿಗೆ ಮನರಂಜನೆ ನೀಡುವುದು, ಸಂಗೀತ, ನೃತ್ಯ, ಹೇಳಿ ಕೊಡುವ ಮೂಲಕ ಹೆಣ್ಣುಮಕ್ಕಳನ್ನು ಆಕರ್ಷಿಸುವುದಕ್ಕೆ ಅನುಕೂಲವಾಗುತ್ತದೆ. ಇವತ್ತು ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಗಮನಾರ್ಹವಾಗಿ ಕಡಿಮೆ ಆಗುತ್ತಿರುವುದನ್ನು

ನೋಡಿದರೆ, ಸುಮಾರು 27 ಲಕ್ಷದಷ್ಟು ಮಕ್ಕಳು ಮಧ್ಯದಲ್ಲೇ ಏನು ಶಾಲೆಗೆ ಹೋಗುವುದನ್ನು ಬಿಟ್ಟಿದ್ದಾರೆ ಅವರಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಹೆಣ್ಣುಮಕ್ಕಳಿದ್ದಾರೆ. ಅದೇರೀತಿ ಹಿಂದುಳಿದ ವರ್ಗಗಳ ಮಕ್ಕಳು, ಪರಿಶಿಷ್ಟ ಜಾತಿ ಮತ್ತು ವರ್ಗದ ಮಕ್ಕಳು ಶಾಲೆಗೆ ಹೋಗುವುದನ್ನು ಮಧ್ಯದಲ್ಲೇ ನಿಲ್ಲಿಸಿಬಿಡುತ್ತಿದ್ದಾರೆ. ಇದಕ್ಕೆ ಕಾರಣ ಗಳು ಬೇರೆ ಇರಬಹುದು. ಅದು ಬಡತನ ಕಾರಣ ಇರಬಹುದು. ಅಥವಾ ಅವರಲ್ಲಿ ಶಿಕ್ಷಣದ ಬಗ್ಗೆ ಹೆಚ್ಚಿನ ಅಭಿರುಚಿ ಇಲ್ಲದೇ ಇರುವುದೇ ಇರಬಹುದು. ಒಟ್ಟಾರೆ ನಾವು ಇದರ ಬಗ್ಗೆ ಅಮೂಲಾಗ್ರವಾಗಿ ವಿಚಾರ ಮಾಡಿ ನೋಡಿದರೆ ಇದರಲ್ಲಿ ಹೆಚ್ಚಿನ ಸಾಧನೆಯನ್ನು ಸಾಧಿಸ ಬೇಕಾದರೆ ಪ್ರತಿಯೊಂದು ಶಾಲೆಗೂ ಒಬ್ಬೊಬ್ಬ ಮಹಿಳಾ ಶಿಕ್ಷಕಿಯರನ್ನು ನೇಮಕ ಮಾಡಿದರೆ ಆದರಿಂದ ಬಹಳಷ್ಟು ಒಳ್ಳೆಯದಾಗುತ್ತದೆ. ಇವತ್ತು ತಪಾಸಣೆ ವಿಚಾರದಲ್ಲಿ ಹೇಳುವುದಾದರೆ, ಬಹಳಷ್ಟು ಅಧಿಕಾರಿಗಳು ಏನೋ ಒಂದು ರೀತಿಯ ನಿರ್ದೇಶನ ನೀಡುವಂಥ ಕೆಲಸ ಆಗಬಾರದು. ಮಾರ್ಗದರ್ಶನವನ್ನು ನೀಡು ವಂಥ ತಪಾಸಣೆಗಳು ಆಗಬೇಕು. ಇಷ್ಟು ಮಾತುಗಳನ್ನು ಪ್ರಾಥಮಿಕ ಶಾಲೆಗಳಿಗೆ ಸಂಬಂಧಪಟ್ಟಂತೆ ಹೇಳಿ, ಪಿ.ಯು.ಸಿ.ಯಲ್ಲಿ ಜಾಬ್ ಓರಿಯಂಟೆಡ್ ಕೋರ್ಸ್‌ಗಳನ್ನು ಏನು ಇಂಟ್ರಡ್ಯೂಸ್ ಮಾಡಿದ್ದೇವೆ, ಅದೇ ರೀತಿ ಹೈಸ್ಕೂಲ್ ಮಟ್ಟದಲ್ಲೂ ಇಂಟ್ರಡ್ಯೂಸ್ ಮಾಡಿ ಕಲಿಕೆಯ ಸಂದರ್ಭದಲ್ಲೇ ಗಳಿಸುವುದಕ್ಕೆ ಒತ್ತು ಕೊಟ್ಟು, ಆ ಮಕ್ಕಳು ಸ್ವಾವಲಂಬಿಗಳಾಗಿ ಬಾಳುವುದಕ್ಕೆ ಅನುಕೂಲವಾಗುವಂಥ ವೃತ್ತಿ ಶಿಕ್ಷಣದ ವ್ಯವಸ್ಥೆಯನ್ನು ಪ್ರೌಢಶಾಲೆಗಳಲ್ಲೂ ಜಾರಿಗೆ ತಂದರೆ ಬಹಳ ಅನುಕೂಲವಾಗುತ್ತದೆ. ಈ ಅಂಶವನ್ನು ಗಮನದಲ್ಲಿ ಇಟ್ಟುಕೊಂಡು ಹೈಸ್ಕೂಲ್ ಮಟ್ಟದಿಂದ ಕೆಳಗಿರತಕ್ಕ ಶಾಲಾ ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಕಳ ಕಳಿಯಿಂದ ಭಿನ್ನೈಸಿ ಕೊಳ್ಳುತ್ತೇನೆ.

ಅಧ್ಯಕ್ಷರು :- ಇನ್ನೂ ತಮಗೆ ಎಷ್ಟು ಹೊತ್ತು ಬೇಕಾಗಬಹುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಎಲ್ಲಿಯವರೆಗೆ 3 ಜನ ವಿದ್ಯಾ ಮಂತ್ರಿಗಳೂ ಸದನಕ್ಕೆ ಬರುವುದಿಲ್ಲ ಅಲ್ಲಿಯವರೆಗೂ ಇವರು ಮುಂದುವರೆಸಬಹುದು. till atleast one of them come here, he will continue.

ಶ್ರೀ ಸಿ. ಬೈರೇಗೌಡ :- ಇಬ್ಬರು ಮಂತ್ರಿಗಳು ಆ ಸದನದಲ್ಲಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಎಲ್ಲಿಯವರೆಗೆ ಅವರು ಬರುವುದಿಲ್ಲ ಅಲ್ಲಿಯವರೆಗೂ ಇವರು ಮುಂದುವರೆಸುತ್ತಾರೆ.

ಒಬ್ಬ ಮಾನ್ಯ ಸದಸ್ಯರು :- ಮಾನ್ಯ ಅಧ್ಯಕ್ಷರೆ, ಈಗ 3 ಜನ ಮಂತ್ರಿ ಗಳಿದ್ದಾರೆ. ಆದರೆ ಈ ಭಾಷಣವನ್ನು ಕೇಳುವುದಕ್ಕಾಗಿಯೇ ಇನ್ನೊಬ್ಬ ಮಂತ್ರಿಯನ್ನು ಮಾಡುವುದು ಒಳ್ಳೆಯದು.

ಶ್ರೀ ಸಿ. ಬೈರೇಗೌಡ :- ಮಾನ್ಯ ಗೋವಿಂದಗೌಡರು ಕೌನ್ಸಿಲ್‌ಗೆ ಹೋಗು ತ್ತೇನೆಂದು ನನಗೆ ಹೇಳಿ ಹೋಗಿದ್ದಾರೆ.

ಅಧ್ಯಕ್ಷರು :- ಮಾನ್ಯ ಗೋವಿಂದಗೌಡರ ವಿಚಾರದಲ್ಲಿ ನಾನು ಪ್ರಶ್ನೆ ಮಾಡುವುದಿಲ್ಲ. ಅಲ್ಲಿ ಪ್ರಶ್ನೋತ್ತರ ಇದೆ. ಇಲ್ಲಿ ಡಿಮ್ಯಾಂಡ್ಸ್‌ನ್ನು ಮೂವ್ ಮಾಡಿ, ಅದರ ಮೇಲೆ ಚರ್ಚೆ ಆಗುತ್ತಿರುವಾಗ ಅಷ್ಟೂ ಜವಾಬ್ದಾರಿ ಇಲ್ಲದಿದ್ದರೆ if they don't present themselves in the House, as a Presiding Officer, I find it embarrasing.

SRI C. BYREGOWDA :- I am sorry, Sir..

MR. SPEAKER :- What happened to the Adult Education Minister?

12.40 ಪಿ. ಎಂ.

SRI. C. BYREGOWDA :- I am really sorry.

MR. SPEAKER :- There are three ministers looking after the department of Education. I can understand, Mr. Govindegowda is a sincere man; if he has business in the Legislative Council he can go there, but what about other two Ministers?

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ತಮ್ಮ ಭಾವನೆಗಳನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ. ಇವತ್ತು ಸಂಜೆ ಸಚಿವ ಸಂಪುಟದ ಸಭೆ ಇದೆ. ಈ ವಿಚಾರವನ್ನು ನಾವು ಪ್ರಸ್ತಾಪ ಮಾಡಿ ಎಲ್ಲಾ ಮಂತ್ರಿಗಳು ಇಲ್ಲಿರುವ ಹಾಗೆ ಮಾಡುತ್ತೇವೆ. ತಾವು ಹೇಳುತ್ತಿರುವುದು ಸರಿ ಇದೆ. ಡಿಮ್ಯಾಂಡ್ಸ್ ಮೂವ್ ಮಾಡಿದವರು ಕೊನೇಪಕ್ಷ ಇಲ್ಲಿರತಕ್ಕದ್ದು ನಮ್ಮ ಕರ್ತವ್ಯ; ನಾವು ಅದನ್ನು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಒಂದು ಕೆಲಸ ಮಾಡಿ. ನಾವು ಮಾತನಾಡುವುದಿಲ್ಲ. ಟೈಪ್ ಮಾಡಿಸಿ ನಿಮಗೆ ಕಳುಹಿಸಿಕೊಡುತ್ತೇವೆ. ನೀವು ಅದನ್ನು ನೋಡಿ ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿದರೆ ಕೊನೆಗೆ ಬರವಣಿಗೆಯಲ್ಲಾದರೂ ಏನಾದರೂ ಒಂದು ಪರಿಹಾರ ಸಿಗಬಹುದು; ಇಲ್ಲಿ ನಾವು ಮಾತನಾಡುವ ಉದ್ದೇಶ ಏನು?

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಹಾಗೇನೂ ಇಲ್ಲ, ನಾವು ಅಟೆಂಡ್ ಮಾಡುತ್ತೇವೆ.

ಅಧ್ಯಕ್ಷರು :- ನಿಮ್ಮ ಸಲಹೆ ಚೆನ್ನಾಗಿದೆ. ನಿಮ್ಮಲ್ಲಿ ಟೈಪಿಸ್ಟ್ ಇದ್ದಾರೆಂದು ಗೊತ್ತಿದೆ. ಆದರೆ ನನಗೆ ಟೈ ಇಲ್ಲ, ಅವನ್ನೆಲ್ಲಾ ಸ್ಕ್ರುಟಿನೈಸ್ ಮಾಡಿ ಕಳುಹಿಸುವುದಕ್ಕೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಯಾರಾದರೂ ಕೇಳುತ್ತಾರೆಂದರೆ ಪ್ರಸ್ತಾಪ ಮಾಡೋಣ. ಕೆಲವು ಸಲಹೆಗಳನ್ನು ನಾವು ಏತಕ್ಕೆ ಕೊಡುತ್ತೇವೆ. ಆ

ಸಲಹೆಗಳನ್ನು ಸರ್ಕಾರದವರು ಪರಿಶೀಲಿಸಬೇಕು, ಅವುಗಳನ್ನು ಬರೆದುಕೊಳ್ಳಬೇಕು. ಆದಷ್ಟು ಮಟ್ಟಿಗೆ ಅವನ್ನು ಇಂಪ್ಲಿಮೆಂಟ್ ಮಾಡಬೇಕೆಂಬ ದೃಷ್ಟಿಯಿಂದ ಪ್ರಸ್ತಾಪ ಮಾಡುವುದು. ಆದರೆ ಇಲ್ಲಿ ನಮ್ಮ ಸಲಹೆಗಳನ್ನು ಬರೆದುಕೊಳ್ಳುವವರು ಇಲ್ಲ, ಕೇಳುವವರು ಇಲ್ಲ, ಸ್ಪಂದನ ಮಾಡುವವರು ಇಲ್ಲವೆಂದರೆ ಹೇಗೆ ಹೇಳುವುದು, ಯಾರಿಗೆ ಹೇಳುವುದು? ನಾವು ಇದನ್ನು ಎಷ್ಟು ಸಾರಿ ರೈಸ್ ಮಾಡುವುದು?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :- ಡಿಸಿಡೆಂಟ್ ಆ್ಯಕ್ಟಿವಿಟೀಸ್....

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ನಮ್ಮ ಪಾರ್ಟಿಯಲ್ಲಿ ಡಿಸಿಡೆಂಟ್ ಆ್ಯಕ್ಟಿವಿಟೀಸ್ ಇಲ್ಲ. ಅದನ್ನು ಕ್ಲಿಯರ್ ಆಗಿ ಹೇಳುತ್ತಿದ್ದೇನೆ. ಡಿಸಿಡೆಂಟ್ ಆ್ಯಕ್ಟಿವಿಟೀಸ್ ಎಂದು ಹೇಳುವುದಕ್ಕೆ ಹೋಗಬೇಡಿ.

MR. SPEAKER :- Each one of you have your own experience.

SRI. P. G. R. SINDHYA :- Some of us are sitting here all the time. We are here and we are also trying to participate in the debate. We will also clarify it.

MR. SPEAKER :- Thank you for being in the House.

ಶ್ರೀ ಬಿ. ಬಿ. ಚಿಮ್ಮನಕಟ್ಟಿ :- ಅಧ್ಯಕ್ಷರೇ, ನಮ್ಮ ದುರಾದೃಷ್ಟ ಹೇಗಿದೆ ಅಂದರೆ, ಈಗ ನಾವು ಶಿಕ್ಷಕರನ್ನು ಸಂದರ್ಶನ ಮಾಡಿ ಅಪಾಯಿಂಟ್ ಮಾಡಿ ಕೊಂಡಿದ್ದೇವೆ. ಈಗ ಮತ್ತೊಂದು ಯೋಜನೆ ಇದೆ. ಅದೇ ಅಪಾಯಿಂಟ್ ಮಾಡಿ ಕೊಂಡಿರತಕ್ಕ ಶಿಕ್ಷಕರಿಗೆ ಮತ್ತೊಂದು ತರಬೇತಿ ಕೊಡುವ ವ್ಯವಸ್ಥೆ ಇದೆ. ಇದು ದುರಾದೃಷ್ಟದ ಕೆಲಸ ಅಲ್ಲದೆ ಬೇರೇನು? ಒಟ್ಟಾರೆ ಅಂಥ ಒಂದು ಯೋಜನೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಶಿಕ್ಷಕರ ಗುಣಮಟ್ಟ ಹೆಚ್ಚಿಸುವುದಕ್ಕೆ 1986 ರಲ್ಲಿ National policy on Education. Central Government has introduced this scheme. 1987 ಕ್ಕೆ ಇಂಟ್ರಡ್ಯೂಸ್ ಮಾಡಿದರೆ 1991ರ ವರೆಗೆ 4 ವರ್ಷಗಳ ಕಾಲ ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಅನುದಾನದಲ್ಲಿ ಒಂದು ಪೈಸೆ ಕೂಡ ಯುಟಿಲೈಸ್ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇದು ನಮಗೆ ಬಂದಿರತಕ್ಕ ದುರಾದೃಷ್ಟ ಎಂದು ಹೇಳಬಹುದು. ಒಂದು ಕಡೆ ಹಣದ ಅಭಾವದಿಂದ ನಮ್ಮ ಶಿಕ್ಷಣ ನರಳುತ್ತಿದೆ. ಆರ್ಥಿಕ ಪರಿಸ್ಥಿತಿಯಿಂದ ನರಳುತ್ತಿದೆ, ಇನ್ನೊಂದು ಕಡೆ ದುಡ್ಡು ಧಾರಾ ಳವಾಗಿ ಬಂದಿರತಕ್ಕ ಸಂದರ್ಭಗಳು ಇದ್ದರೂ ಕೂಡ ಅದನ್ನು ಉಪಯೋಗಿಸಿಕೊಳ್ಳು ವಷ್ಟರ ಮಟ್ಟಿಗೆ ಕೂಡ ಚಾನ್ಸ್ ಇಲ್ಲ. ಆ ದೃಷ್ಟಿಯಿಂದ ನನಗೆ ಬಹಳ ಕೆಟ್ಟದು ಅನ್ನಿಸತಕ್ಕ ವಿಚಾರ ಇಷ್ಟೆ: ಮಂತ್ರಿಗಳು ಅದನ್ನು ನೋಡಬೇಕಾದವರು ನೋಡಲಿಲ್ಲ

ಅಂದರೂ ಕೂಡ ಸಂಬಂಧಪಟ್ಟ ಅಧಿಕಾರಿಗಳು ಈ ಹಣ ಉಪಯೋಗ ಮಾಡದೆ ಇರತಕ್ಕವರು ಯಾರೇ ಇರಲಿ ಅವರ ಮೇಲೆ ಬಹುಶಃ ಶಿಸ್ತಿನ ಕ್ರಮ ತೆಗೆದುಕೊಂಡಿದ್ದೇ ಆದರೆ ಮುಂದೆ ಬರತಕ್ಕ ಯೋಜನೆಗಳಲ್ಲಿ ಸಫಲತೆ ಕಾಣುವುದಕ್ಕೆ ಸಾಧ್ಯಾವಾಗುತ್ತದೆ. ಆ ದೃಷ್ಟಿಯಿಂದ ಈವತ್ತು ನಿಮಗೆ ಒಂದು ಉದಾಹರಣೆ ಹೇಳುವುದಾದರೆ ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಹಣದಲ್ಲಿ ಸುಮಾರು 1782.22 ಲಕ್ಷ ಹಣದಲ್ಲಿ 1206.69 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದರಲ್ಲಿ ಅನ್-ಯುಟಿಲೈಸ್ ಮಾಡಿರ ತಕ್ಕದ್ದು 793.60 1991 ರಿಂದ 1994 ರವರೆಗೆ ಅಷ್ಟು ದುಡ್ಡು ಖರ್ಚು ಮಾಡಿ ಕೇಂದ್ರದಿಂದ ಬಂದಿರತಕ್ಕ ಹಣಕೂಡ ಪೂರ್ತಿ ಯುಟಿಲೈಸ್ ಮಾಡುವುದಕ್ಕೆ ಆಗಲಿಲ್ಲ. ಇದು ದುರಾದೃಷ್ಟ ಎಂದು ಹೇಳಬೇಕಾಗಿದೆ. ನಮ್ಮ ಆರ್ಗನೈಸ್ಡ್ ಸೆಟ್‌ಅಪ್‌ನಲ್ಲಿ, D.P.I., Department of State Education and Research and training, ಅವರನ್ನು ಇಟ್ಟುಕೊಂಡಿದ್ದೇವೆ. Director of public Instruction, Deaprtment of State Education and Training ಎಂದು ಇಟ್ಟುಕೊಂಡಿದ್ದೇವೆ. ಮತ್ತು Principal of the Head of the Institution, ಎಂದು ನಾವು ಇಟ್ಟುಕೊಂಡಿದ್ದೇವೆ. ಇದರ ಉದ್ದೇಶ ಶಿಕ್ಷಕರಲ್ಲಿ ಉತ್ತಮವಾದ ಗುಣಮಟ್ಟ ಕಾಪಾಡಬೇಕು ಹಾಗು ಪರಿಣಾಮಕಾರಿಯಾದ ಶಿಕ್ಷಣ ಒದಗಿಸಬೇಕೆಂದು ಇಷ್ಟೆಲ್ಲಾ ಯೋಜನೆ ಇದ್ದರೂ ಕೂಡ ಸರ್ಕಾರ ಅದಕ್ಕೆ ಒಳ್ಳೆಯ ದೃಷ್ಟಿಯಿಂದ ಹಣ ಉಪಯೋಗ ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ. ಉದಾಹರಣೆಗೆ ಹೇಳುವುದಾದರೆ ಒಂದು ಆಯವ್ಯಯ ಮಾಡಿರತಕ್ಕದ್ದು. ಯಾವ ರೀತಿ ಅಧಿಕಾರಿಗಳು ಇದನ್ನು ನಿರ್ಲಕ್ಷ್ಯ ಮಾಡಿದ್ದಾರೆಂಬುದಕ್ಕೆ ಉದಾಹರಣೆ ಕೊಡವುದಾದರೆ ಬುಕ್ಸ್ ಮತ್ತು ಎಕ್ವಿಪ್‌ಮೆಂಟ್ಸ್ ಬಂದಿರತಕ್ಕದ್ದು. ಡೈರೆಕ್ಟರ್ ಅವರು ಫೆಬ್ರವರಿ 1993 ಕ್ಕೆ ಹತ್ತು ಪಬ್ಲಿಷರ್ಸ್‌ಗೆ ಬುಕ್ಸ್ ಆರ್ಡರ್ ಕೊಟ್ಟಿದ್ದಾರೆ. The Committee constituted for selection of books. ಯವರು ಹತ್ತು ಪಬ್ಲಿಷರ್ಸ್‌ಗೆ ಬುಕ್ಸ್‌ಗೆ ಆರ್ಡರ್ ಕೊಟ್ಟರೂ ಕೂಡ ಅವರು ಎಷ್ಟು ಬುಕ್ಸ್ ಕೊಟ್ಟಿದ್ದಾರೆಂದರೆ 16302 ಪುಸ್ತಕಗಳನ್ನು ಮಾತ್ರ ಕಾಲೇಜುಗಳಿಗೆ ವಿತರಣೆ ಮಾಡಿದ್ದಾರೆ. ಆದರೆ 8745 ಪುಸ್ತಕ ಗಳನ್ನು ಇದುವರೆಗೆ ಅವರು ಸರಿಯಾದ ವೇಳೆಗೆ ಒದಗಿಸುವುದಕ್ಕೆ ಆಗಲಿಲ್ಲ. ಸರಿಯಾದ ವೇಳೆಗೆ ಒದಗಿಸುವುದಕ್ಕಾಗದೆ ಇದ್ದುದಕ್ಕೆ ಅನೇಕ ಕಾಲೇಜುಗಳು ಅದರ ಉಪಯೋಗದಿಂದ ಬಹಳ ವಂಚಿತರಾಗಿವೆ ಅದೇ ರೀತಿ ಕಂಪ್ಯೂಟರ್ ಸಪ್ಲೈ ಯೋಜನೆ ಇದೆ. ಈ ರೀತಿ ಅನೇಕ ಮಹತ್ತರ ಯೋಜನೆಗಳು ಇವೆ. ಆ ಯೋಜನೆಯಲ್ಲಿ 60 ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಿದರೆ ಅದರಲ್ಲಿ 36 were not installed ; 24 installed but not put to use. ಇಷ್ಟು ಕಂಪ್ಯೂಟರ್‌ಗಳು, ಬಹಳ ಕಿಮ್ಮತ್ತಿನ ವಸ್ತುಗಳನ್ನು 1994 ರೊಳಗೆ ಪರ್ಚೇಸ್ ಮಾಡಿ ಕೊಟ್ಟರೂ ಕೂಡ ಅದನ್ನು ನಾವು ಸರಿಯಾಗಿ ಉಪಯೋಗ ಮಾಡಲಿಕ್ಕೆ ಆಗಲಿಲ್ಲ ದುರಾದೃಷ್ಟ ಅಂದರೆ ಬಿಲ್ಡಿಂಗ್‌ಗಳ ಬಗ್ಗೆ ಇರತಕ್ಕ ಹಣ ಬಂದರೂ ಕೂಡ ಅವರು ಯಾವುದೇ ರೀತಿಯಲ್ಲಿ ವ್ಯಯ ಮಾಡುವುದಕ್ಕಾಗಲಿಲ್ಲ. ಆ ದೃಷ್ಟಿಯಿಂದ ಇವತ್ತು ಯಾವುದೇ ಯೋಜನೆ ಬರಲಿ ಅದು ಸದುಪಯೋಗವಾಗ ಬೇಕೆಂದು ಇದ್ದರೆ ಅಧಿಕಾರಿಗಳ ಮೇಲೆ ಸರಿಯಾದ ಹಿಡಿತ ಇಟ್ಟು ಅವರು ಸರಿಯಾದ ರೀತಿಯಲ್ಲಿ ಸದುಪಯೋಗ ಪಡೆಯುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು

ತಮ್ಮ ಮೂಲಕ ಶಿಕ್ಷಣ ಇಲಾಖೆಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ವಿಶೇಷವಾಗಿ ಸಾರಿಗೆ ಇಲಾಖೆಯ ಬಗ್ಗೆ ಹೇಳುದಾದರೆ; ಶ್ರೀ ಸಿಂಧ್ಯಾ ಅವರೇ ಸಾರಿಗೆ ಇಲಾಖೆಯನ್ನು ನಿರ್ವಹಿಸಿಕೊಂಡಿದ್ದಾರೆ. ಅವರಲ್ಲಿ ನಾನು ಬಹಳ ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ; ತಾವೂಕೂಡ ಈ ಸಾರಿಗೆ ಇಲಾಖೆಯ ಬಗ್ಗೆ ಬಹಳ ಮುತುವರ್ಜಿ ವಹಿಸಿ ಹೆಚ್ಚು ಕಾಳಜಿ ಮಾಡಿ ಪರಿಣಾಮಕಾರಿಯಾಗಿ ಈ ಸಾರಿಗೆ ಸಂಸ್ಥೆಯನ್ನು ಮಾಡಬೇಕೆಂದು ಮಾಡಿದ್ದೀರಿ. ಈ ಇಲಾಖೆ ಹೆಚ್ಚು ಆದಾಯ ಕೊಡತಕ್ಕ ಇಲಾಖೆ. ಅದರ ಬಗ್ಗೆ ಹೆಚ್ಚು ಗಮನ ಕೊಟ್ಟಿದ್ದೇ ಆದರೆ ಇನ್ನೂ ಹೆಚ್ಚು ಆದಾಯವನ್ನು ತರುವುದಕ್ಕೆ ಸಾಧ್ಯ ಇದೆ. ಆ ದೃಷ್ಟಿಯಿಂದ ನಿಮಗೆ ಉದಾಹರಣೆಗೆ ಹೇಳುವುದಾದರೆ ನಮ್ಮ ಮಹಾರಾಷ್ಟ್ರ ಬಾರ್ಡರ್ ಇರತಕ್ಕ ಜಿಲ್ಲೆಗಳು; ಅದು ಬೆಳಗಾಂ ಜಿಲ್ಲೆ ಆಗಿರಬಹುದು, ಬಿಜಾಪುರ ಜಿಲ್ಲೆ ಆಗಿರಬಹುದು. ಅಲ್ಲಿ ಚೆಕ್‌ಪೋಸ್ಟ್‌ಗಳಿಗೆ ಏನು ತಾವು ಅಧಿಕಾರಿಗಳನ್ನು ಹಾಕಿದ್ದೀರಿ ಅವರು ಯಾವುದಾದರೂ ಒಂದು ಅನೇಕ ವ್ಯವಹಾರಗಳಲ್ಲಿ ಶಾಮೀಲಾಗಿದ್ದಾರೆ. ಆ ದೃಷ್ಟಿಯಿಂದ ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ, ಬಹಳ ಪ್ರಾಮಾಣಿಕ ವಾಗಿರತಕ್ಕ, ದಕ್ಷ ಅಧಿಕಾರಿಗಳನ್ನು ಅಲ್ಲಿ ಹಾಕಿದ್ದೇ ಆದರೆ ಇನ್ನು ನಮ್ಮ ರಾಜ್ಯಕ್ಕೆ ಹೆಚ್ಚಿನ ಆದಾಯ ಬರುವಂಥ ಮೂಲಗಳು ದೊರೆಯುತ್ತವೆ. ಆ ದೃಷ್ಟಿಯಿಂದ ಆ ಇಲಾಖೆಯ ಬಗ್ಗೆ ನಾನು ಹೆಚ್ಚು ಹೇಳದೆ, ಹೆಚ್ಚು ಮುತುವರ್ಜಿ ವಹಿಸಿ ಆಡಳಿತದಲ್ಲಿ ದಕ್ಷತೆ ತಂದಿದ್ದೇ ಆದರೆ ಬಹಳ ನಿಷ್ಠೂರತೆಯಿಂದ ನೋಡಿದ್ದೇ ಆದರೆ ಇನ್ನೂ ಹೆಚ್ಚು ಆದಾಯ ತರತಕ್ಕ ಇಲಾಖೆ ಆಗಬಹುದು. ಆ ಇಲಾಖೆಯ ಬಗ್ಗೆ ಹೆಚ್ಚು ಕೆಲಸಗಳನ್ನು ತಾವು ಕೂಡ ಮಾಡಿದ್ದೀರಿ. ಆ ಇಲಾಖೆಯ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಸಾರಿಗೆ ಸಂಸ್ಥೆಯ ಬಗ್ಗೆ ಎರಡು ಮಾತುಗಳನ್ನು ಹೇಳತಕ್ಕದ್ದು ಅಷ್ಟೆ. ಬಹುಶಃ ಸಾರಿಗೆ ಸಂಸ್ಥೆಯಿಂದ ಇವತ್ತು ಅನೇಕ ಜನ ನಮ್ಮ ಎಲ್ಲ ಶಾಸಕರಿಗೆ ನಾವು ಯಾವುದಾದರೂ ಒಳ್ಳೆಯ ಹೆಸರನ್ನು ಪಡೆಯಬೇಕಾಗಿತ್ತು ಅಥವಾ ಕೆಟ್ಟ ಹೆಸರು ಪಡೆಯಬೇಕಾಗಿತ್ತು ಅಂದರೆ ಎರಡು ಇಲಾಖೆಗಳು ಒಳ್ಳೆಯ ರೀತಿಯಿಂದ ನಡೆದಿವೆ ಎಂದರೆ ಸಾಕು. ಒಂದು ವಿದ್ಯುಚ್ಛಕ್ತಿ ಇಲಾಖೆ, ಮತ್ತೊಂದು ಸಾರಿಗೆ ಇಲಾಖೆ. ಬಹುಶಃ ಇದನ್ನು ಎಲ್ಲ ಶಾಸಕರು ಒಪ್ಪಿಕೊಳ್ಳುತ್ತಾರೆ. ಈ ಸಾರಿಗೆ ವ್ಯವಸ್ಥೆಯನ್ನು ಒಳ್ಳೆಯ ರೀತಿಯಿಂದ ದಕ್ಷತೆಯಿಂದ ನಡೆಸಿದ್ದೇ ಆದರೆ, ಹಿಂದೆ ಆಗಿರತಕ್ಕ ಅನೇಕ ಘಟನೆಗಳು ಇರಬಹುದು, ಇರಲಿ; ಬಹುಶಃ ನಮ್ಮ ಸರ್ಕಾರಕ್ಕೆ ಕೂಡ ಒಳ್ಳೆಯ ಹೆಸರು ಬರುತ್ತದೆ. ಇದು ಒಂದೇ ನಾನು ತಮ್ಮಲ್ಲಿ ಕಳಕಳಿಯಿಂದ ಬಿನ್ನವಿಸಿಕೊಳ್ಳುವುದು. ಇದು ಜನರ ಸೇವೆ ಮಾಡತಕ್ಕ ಒಂದು ಅವಕಾಶ ಎಂಬುದು ನಿಮ್ಮ ಅಭಿಪ್ರಾಯದಲ್ಲಿ ಇದೆ. ಇದರಲ್ಲಿ ತಾವು ಕೂಡ ಮನಸ್ಸಿಗೆ ವ್ಯಥೆಪಟ್ಟು ಕೊಳ್ಳತಕ್ಕದ್ದು ಏನೂ ಇಲ್ಲ. ತಾವು ಮೊದಲು ಹೋಂ ಡಿಪಾರ್ಟ್‌ಮೆಂಟ್ ನೋಡಿ ಕೊಳ್ಳುತ್ತಿದ್ದೀರಿ ಅದು ಬಹಳ ದೊಡ್ಡ ಇಲಾಖೆ. ಆದರೂ ಕೂಡ ಕೆಲಸ ಮಾಡುವವರಿಗೆ ಯಾವುದು ಹೆಚ್ಚು ಹೊಲಸು ಇರುತ್ತದೆ ಅದನ್ನು ಸರಿಮಾಡಲು ಸಾಧ್ಯವಾಗುತ್ತದೆ. ಸಾರಿಗೆ ಇಲಾಖೆಯಲ್ಲಿ ಏನು ಅಪವ್ಯಯ ನಡೆಯುತ್ತಿತ್ತು, ಸರಿಯಾಗಿ ಕಾರ್ಯ ನಿರ್ವಹಿಸುವುದ ಕ್ಕಾಗುತ್ತಿರಲಿಲ್ಲ ಅಂಥ ಇಲಾಖೆಯ ಜವಾಬ್ದಾರಿಯನ್ನು ನೀವು ವಹಿಸಿಕೊಂಡಮೇಲೆ ನಿಮಗೆ ಒಳ್ಳೆಯ ಹೆಸರು ಬರತಕ್ಕ ಸಂದರ್ಭ ಇದೆ. ಆದೃಷ್ಟಿಯಿಂದ ಸಾರಿಗೆ

ಇಲಾಖೆಯ ವ್ಯವಸ್ಥೆಯಲ್ಲಿ ಮುಖ್ಯವಾಗಿ ನಾವು ಹಿಂದಿನ ದಿನಗಳನ್ನು ನೋಡಿದ್ದೇ ಆದರೆ 1961 ರಲ್ಲಿ ಸ್ಥಾಪನೆಯಾಗಿ ಇವತ್ತು 1996 ರಲ್ಲಿದ್ದರೂ ಕೂಡ ಒಂದು ದಿನವೂ ಅದರಲ್ಲಿ ಲಾಭ ಇದೆ ಎಂದು ಹೇಳಲಿಲ್ಲ. ಅದಕ್ಕೆ ಅನೇಕ ಕಾರಣಗಳು ಇರಬಹುದು. ಒಟ್ಟಾರೆ ಸಂಸ್ಥೆಯಿಂದ 1990ರೊಳಗೆ ಒಂದು ವರ್ಷದ ಆದಾಯ ಪರಿವೀಕ್ಷಣೆ ಮಾಡಿ ನೋಡಿದಾಗ ಏನೂ ಲಾಭ ಕಾಣುತ್ತಿಲ್ಲ. 1975 ರವರೆಗೆ ಮಾತ್ರ ಲಾಭವಾಗಿದೆ. 1975 ರಿಂದೀಚೆಗೆ ಅಪಾರವಾಗಿರತಕ್ಕ ಹಾನಿ ಅನುಭವಿಸುತ್ತಾ ಬಂದಿದೆ. ಅದಕ್ಕೆ ಕಾರಣ ಏನೇ ಇರಲಿ. ಒಟ್ಟಾರೆ ನೀವು ಮಾತ್ರ ಇದನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕು, ಸುಧಾರಣೆ ಮಾಡಬೇಕೆಂದು ನೀವೇ ರಚಿಸಿರತಕ್ಕ ಸಿಂಧ್ಯ ರಿಪೋರ್ಟ್ ಎಂದು ಮಾಡಿದ್ದೀರಿ. ಆ ರಿಪೋರ್ಟ್ ನಿಮ್ಮ ಹುಟ್ಟು. ನೀವು ಬೆಳೆಸಿರತಕ್ಕ ಸಸಿ. ಆ ಸಸಿಗೆ ನೀರು ಹಾಕಿ ಗೊಬ್ಬರ ಹಾಕಿ ಬೆಳೆಸತಕ್ಕದ್ದು ನಿಮ್ಮ ಕೈಯಲ್ಲಿದೆ. ಆ ದೃಷ್ಟಿಯಿಂದ ನೀವು ಆ ಸಸಿ ಬೆಳೆಸುವುದಕ್ಕೆ ಮನಸ್ಸು ಮಾಡಿ ಆ ಸಂಸ್ಥೆಯನ್ನು ಉತ್ತಮಮಟ್ಟದಲ್ಲಿ ತರುವುದಕ್ಕೆ ತಾವು ಹಗಲಿರುಳೂ ದುಡಿಯುತ್ತೀರಿ ಎಂದು ನಾನು ಭಾವಿಸಿದ್ದೇನೆ. ಇವತ್ತು ನಿಮ್ಮ ಸಾರಿಗೆ ವ್ಯವಸ್ಥೆಯಲ್ಲಿ ಮುಖ್ಯವಾಗಿ ಡಿವಿಷನ್ನನ್ನೇ ನಾವು ಬಹಳ ಮುಖ್ಯವಾಗಿ ಇಟ್ಟುಕೊಂಡಿರುತ್ತೇವೆ. ಡಿವಿಷನ್ ಆಗಲೀ ಅಥವಾ ಡಿಪೋ ಆಗಲೀ, ಡಿವಿಷನ್‌ಗೆ ಬಹಳ ಮಹತ್ವ ಕೊಡುತ್ತೇವೆ. ಉದಾಹರಣೆಗೆ ಬಾಗಲಕೋಟೆ ಡಿವಿಷನ್ ತೆಗೆದುಕೊಳ್ಳಿ. ಬಾಗಲಕೋಟೆ ಡಿವಿಷನ್‌ನಲ್ಲಿ ಇವತ್ತು ನಾವು ಬಹಳ ಕೂಲಂಕುಷವಾಗಿ ನೋಡಿದಾಗ ನಮ್ಮ ಬಾಗಲ ಕೋಟೆಯಲ್ಲಿ ಸುಮಾರು 324 ಷೆಡ್ಯೂಲ್ಸ್ ಇವೆ. ಅದರಲ್ಲಿ 311 ಷೆಡ್ಯೂಲ್ಸ್ ಅಷ್ಟೇ ಓಡುತ್ತದೆ. ಉಳಿದ 13 ಷೆಡ್ಯೂಲ್ಸ್ ರದ್ದಾಗಿವೆ. ಹೀಗೆ ರದ್ದಾಗುವುದಕ್ಕೆ ಟೈರುಗಳೇ ಕಾರಣವಾಗಿರಬಹುದು. ಇಂಜಿನ್‌ಗಳು ಕಾರಣವಾಗಿರಬಹುದು ಸ್ಟಾಫ್‌ಗಳು ಕಾರಣವಾಗಿರ ಬಹುದು. ಕಂಡ ಕ್ಟರ್‌ಗಳು ಇರಲಾರದಂಥ ಕಾರಣವೇ ಇರಬಹುದು. ಏನೇ ಕಾರಣ ಇದ್ದರೂ ಕೂಡ ಓಡದೇ ಇರತಕ್ಕಂಥ ಷೆಡ್ಯೂಲ್ಸ್‌ಗಳಿಂದ ಎಷ್ಟು ಹಾನಿಯಾಗುತ್ತದೆ ಎಂಬುದನ್ನು ಹೇಳು ತ್ತೇನೆ. ಸುಮಾರು 13 ಷೆಡ್ಯೂಲ್ಸ್ ತಾವು ರದ್ದುಪಡಿಸಿದ್ದೇ ಆದರೆ, ಒಂದು ಷೆಡ್ಯೂಲ್‌ಗೆ ತಾವು ಮಿನಿಮಂ 300 ಕಿಲೋಮೀಟರ್ಸ್ ಎಂದು ಇಟ್ಟಿದ್ದೀರಿ. ಸುಮಾರು 300 ಕಿಲೋಮೀಟರ್ ಅಂದರೆ 13 ಬಸ್ಸುಗಳಾದರೆ ಸುಮಾರು 3900 ಕಿಲೋಮೀಟರ್ ರದ್ದಾಯಿತು. ಸುಮಾರು 3900 ಕಿಲೋಮೀಟರ್ ರದ್ದಾಯಿತು ಅಂದರೆ ಸುಮಾರು 4000 ಕಿಲೋಮೀಟರ್ ಆದಹಾಗೆ. ಒಂದು ಕಿಲೋಮೀಟರ್‌ಗೆ ಮಿನಿಮಂ ಚಾರ್ಜ್ 7 ರೂಪಾಯಿ ಹಿಡಿಯುತ್ತೀರಿ. 7 ರೂಪಾಯಿನ ಹಾಗೆ ಆದರೆ ಪ್ರತಿ ದಿನ ಅಂದಾಜು 28,000 ರೂಪಾಯಿ ಹಾನಿಯಾಗುತ್ತದೆ. ಪ್ರತಿ ದಿನ 28 ಸಾವಿರ ರೂಪಾಯಿನ ಹಾಗೆ ಆದರೆ ಪ್ರತಿ ತಿಂಗಳಿಗೆ ನೀವು ಲೆಕ್ಕ ಹಾಕಿದರೆ ಪ್ರತಿ ತಿಂಗಳು ಸುಮಾರು 9 ಲಕ್ಷ ರೂಪಾಯಿ ಹಾನಿಯಾಗುತ್ತದೆ. ಒಂದು ವರ್ಷಕ್ಕೆ ಇದನ್ನು ನಾವು ಟೋಟಲ್ ಮಾಡಿದಾಗ ಒಂದೊಂದು ಕೋಟಿ ರೂಪಾಯಿ ಹಾನಿಯಾಗುತ್ತದೆ. ಒಂದೊಂದು ಕೋಟಿ ರೂಪಾಯಿ, ಡಿವಿಷನ್ ಸ್ವರೂಪದಲ್ಲಿ ಹೇಳುವುದಾದರೆ, ತಾವು ಈ ರದ್ದಾಗಿರ ತಕ್ಕಂಥ ಷೆಡ್ಯೂಲ್‌ಗಳನ್ನು ತಪ್ಪಿಸಿ ಬಸ್ಸುಗಳನ್ನು ಓಡಿಸತಕ್ಕ ವ್ಯವಸ್ಥೆ ನೀವು ಮಾಡಿದ್ದಾದರೆ ಹಾನಿಯನ್ನು ತಪ್ಪಿಸುವುದಕ್ಕೆ ತಮ್ಮ ಕಡೆಯಿಂದ ಸಾಧ್ಯವಾಗುತ್ತದೆ. ಇದಕ್ಕೆ ನೀವು ಮನಸ್ಸು ಮಾಡಬೇಕಾಗುತ್ತದೆ.

ಉದಾಹರಣೆಗೆ ಹೇಳುವುದಾದರೆ ನಮ್ಮ ಬಾಗಲಕೋಟೆ ಡಿವಿಷನ್‌ನಲ್ಲಿ ಟೈರ್ ಪ್ಲಾಂಟ್ ಇಲ್ಲ. ವಿಶೇಷವಾಗಿ ಟೈರ್ ಪ್ಲಾಂಟ್ ಇರಲಾರದಕ್ಕೆ ನಾವು ಬಿಜಾಪುರದಿಂದ ಟೈರುಗಳನ್ನು ತರಿಸಬೇಕು. ಕಮ್ಮಿ ಬಿತ್ತು ಅಂದರೆ ಬೆಳಗಾಂನಿಂದ ಟೈರುಗಳನ್ನು ತರಿಸಬೇಕು. ಬಹುಶಃ ಈ ತರತಕ್ಕದ್ದರೊಳಗೆ ಈ ಬಿಜಾಪುರದೊಳಗೇ ಈಗ ಅಲ್ಲಿರತಕ್ಕ ಏನು ವರ್ಕಿಂಗ್ ಮೆಥೆಡ್ ಇದೆ ಅದರ ಪ್ರಕಾರ ಅವರಿಗೇನೇ ಟೈರ್ ಸಾಲುವುದಿಲ್ಲ. ಅಂಥ ಸಂದರ್ಭದಲ್ಲಿ ಬಾದಾಮಿಗೆ ಎಷ್ಟು ಕೊಡಬೇಕು ಅವರು? ಅವರು ಇನ್ ಟೈಮಿಗೆ ಕೊಡುವುದಕ್ಕಾಗುವುದಿಲ್ಲ. ನಮಗೆ ರಿಕ್ವೈರ್‌ಮೆಂಟ್ ಎಷ್ಟಿದೆಯೋ ಅಷ್ಟು ಕೂಡ ಕೊಡುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಬಾಲಗಕೋಟೆ ಡಿವಿಷನ್‌ನಲ್ಲಿ ಅಲ್ಲಿ ಒಂದು ಟೈರ್ ಪ್ಲಾಂಟ್ ನೀವು ಮಾಡಿದ್ದೇ ಆದರೆ ಬಹುಶಃ ಈ ಟೈರುಗಳ ಮುಖಾಂತರ ಏನು ಹಾನಿಯಾಗಿದೆ ಅದನ್ನು ಕೂಡ ತಾವು ತಪ್ಪಿಸಬಹುದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ :- ಸ್ಯಾಂಕ್ಷನ್ ಮಾಡಿದ್ದೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ :- ಮಾಡಿದ್ದೀರೋ ಬಹಳ ಸಂತೋಷ. ಅದೇರೀತಿ ಎಂಜಿನ್ ರೀಕಂಡೀಷನ್ ಮಾಡುವುದಕ್ಕೆ, ಬಹುಶಃ 3 ಲಕ್ಷ 50 ಸಾವಿರ ಕಿಲೋಮೀಟರ್ ಓಡಿದಂಥ ಇಂಜಿನ್ ತಾವು ಬದಲಾಯಿಸುತ್ತೀರಿ. ಹೀಗೆ ಬದಲಾಯಿಸುವುದಕ್ಕೂ ಕೂಡ ತಾವು ಹುಬ್ಬಳ್ಳಿಗೆ ಕಳುಹಿಸಬೇಕು, ಇಲ್ಲದೇ ಹೋದರೆ ನಮ್ಮಲ್ಲಿರತಕ್ಕದ್ದನ್ನು ಹುಬ್ಬಳ್ಳಿಗೆ ಕಳುಹಿಸುತ್ತೇವೆ. ಹುಬ್ಬಳ್ಳಿಯಲ್ಲೂ ಕೂಡ ಬಹಳ ಸುಸಜ್ಜಿತವಾಗಿರತಕ್ಕ ವ್ಯವಸ್ಥೆ ಇಲ್ಲ ಅಲ್ಲಿ. ಅಲ್ಲಿ ಅವ್ಯವಸ್ಥೆಯ ಆಗರ ಆಗಿದೆ ಎಂದು ನಾನು ಕೇಳಿದ್ದೇನೆ. ಆ ದೃಷ್ಟಿಯಿಂದ ಎಂಜಿನ್ ಕಂಡೀಷನ್‌ನಿಂದ ಪ್ರತಿಯೊಂದು ಡಿಪೋದೊಳಗೆ ಕನಿಷ್ಟ 5 ಬಸ್ಸುಗಳಾದರೂ ನಿಂತುಹೋಗುತ್ತವೆ. 5 ಬಸ್ಸು ನಿಂತುಹೋಯಿತು ಅಂದರೆ 5 ಬಸ್ಸಿನಿಂದ ಆಗತಕ್ಕಂಥ ಹಾನಿಯನ್ನು ಕೂಡ ತಾವು ಪುನಃ ಪರಾಮರ್ಶಿಸಿ, ಆ ದೃಷ್ಟಿಯಿಂದ ಹಾನಿಯನ್ನು ತಪ್ಪಿಸುವುದಕ್ಕೆ ಬಹಳ ಅಲ್ಪಸ್ವಲ್ಪವಾಗಿರತಕ್ಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗಿದೆ. ಇವತ್ತು ಈ ಸಮಸ್ಯೆಗಳನ್ನು ತಾವು ಇತ್ಯರ್ಥಪಡಿಸಿದ್ದೇ ಆದರೆ ಒಂದು ಡಿಪೋ ಆಗಲೀ ಡಿವಿಷನ್ ಆಗಲೀ, ನಾನು ಹೇಳಿರತಕ್ಕದ್ದು ಬಾಗಲಕೋಟೆ ಡಿವಿಷನ್ ಒಂದು ಉದಾಹರಣೆಯಾಗಿರಬಹುದು. ಬಹುಶಃ ರಾಜ್ಯದಲ್ಲಿರತಕ್ಕ 100 ಡಿಪೋಗಳೇನಿವೆ ಆ 100 ಡಿಪೋಗಳಲ್ಲೂ ಕೂಡ ಇದೇ ಸಮಸ್ಯೆಗಳೇ ಇರುತ್ತವೆ. ಆ ಸಮಸ್ಯೆಗಳ ಕಡೆಗೆ ತಾವು ಹೆಚ್ಚಿನ ಗಮನವನ್ನು ಕೊಡುತ್ತೀರಿ ಎಂದು ನಾನು ಆಶಿಸುತ್ತೇನೆ. ಹೆಚ್ಚು ಕಿಲೋಮೀಟರ್ ಓಡಿರತಕ್ಕ ಬಸ್ಸುಗಳು, ಅಂದರೆ ಸುಮಾರು 7 ಲಕ್ಷ 50 ಸಾವಿರ ಕಿಲೋಮೀಟರ್ ಆದ ತಕ್ಷಣ ತಾವು ಬೇರೆ ಬಸ್ಸುಗಳನ್ನು ಕೊಡುತ್ತಿದ್ದೀರಿ. ಆ ಬಸ್ಸುಗಳನ್ನು ಕೊಡುವುದರಲ್ಲಿ ಬಹುಶಃ ಸರ್ಕಾರದ ವರದಿ ಪ್ರಕಾರ 22 ಪರ್ಸೆಂಟ್ ಎಂದು ಇವತ್ತು ಸರ್ಕಾರ ಒಪ್ಪಿಕೊಂಡಿದೆ. ರೀಪ್ಲೇಸ್‌ಮೆಂಟ್ ಆಫ್ ಬಸಸ್ ನಾನು ಹೇಳುವುದು. ಸುಮಾರು 22 ಪರ್ಸೆಂಟ್ ಎಂದು ಹೇಳಿದರೆ ಪ್ರತಿಯೊಂದು ಡಿಪೋಗೆ ಎಷ್ಟಾಗುತ್ತದೆ? ಕನಿಷ್ಠ ಏನಿಲ್ಲ ಅಂದರೂ 15 ಬಸ್ಸುಗಳು ನಿಲುಗಡೆಯಾಗುತ್ತವೆ. 15 ಬಸ್ಸುಗಳು ನಿಲುಗಡೆಯಾಗುತ್ತವೆ ಅಂತ ಹೇಳಿದರೆ ಇದರ ಲಾಸ್ ಎಷ್ಟು ಅಕ್ಯುಮಲೇಟ್ ಆಗುತ್ತದೆಂದು ತಾವೇ ಊಹಿಸಿ. ಇದನ್ನು ನೀವು

ತಡೆಗಟ್ಟಬೇಕು. ಬಹುಶಃ ತಡೆಗಟ್ಟದೇ ಇದ್ದರೆ ಇನ್ನು ಯಾವ ಕಾಲಕ್ಕೂ ಕೂಡ ಸಾರಿಗೆ ಸಂಸ್ಥೆಯನ್ನು ಸುಧಾರಣೆ ಮಾಡುವುದಕ್ಕಾಗುವುದಿಲ್ಲ. ಈ ಒಂದು ಸುಧಾರಣೆಯನ್ನು ಈ ಲೆಕ್ಕದಲ್ಲಿ ತಾವು ಭಾಗವಹಿಸಿ ಅದನ್ನು ಮಾಡುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ಇನ್ನೂ ಸಿಬ್ಬಂದಿ ಬಗ್ಗೆ ಬಹಳ ಕಳಕಳಿಯಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಿಬ್ಬಂದಿ ಬಗ್ಗೆ ನಾನು ಒಂದು ವೇದನೆಯಿಂದ ಹೇಳತಕ್ಕ ಮಾತು ಇವತ್ತು ಬಹಳ ಜನ ಕಂಡಕ್ಟರ್ಸ್ ಮತ್ತು ಡ್ರೈವರ್‌ಗಳನ್ನು ಅಪಾಯಿಂಟ್ ಮಾಡುತ್ತಾ ಇದ್ದೀರಿ ನೀವು ಅವರನ್ನು ಮಾಡಿರಿ. ಆದರೆ ಈಗ ಇರತಕ್ಕ ಕಂಡಕ್ಟರುಗಳು ಮತ್ತು ಡ್ರೈವರ್ ಗಳೇನಿದ್ದಾರೆ ಅವರು ಸೌಜನ್ಯದಿಂದ ನಡೆದುಕೊಳ್ಳುವುದಿಲ್ಲ. ಸಾರ್ವಜನಿಕರ ಜೊತೆಗೆ ಸೌಜನ್ಯದಿಂದ ನಡೆದುಕೊಂಡಿರತಕ್ಕ ಉದಾಹರಣೆಯೇ ಇಲ್ಲ ಜನರ ಜೊತೆ ಸೌಜನ್ಯ ದಿಂದ ವರ್ತಿಸದೇ ಇದ್ದರೂ ಕೂಡ ಅವರಲ್ಲಿರತಕ್ಕ ಅಧಿಕಾರಿಗಳ ಮಟ್ಟದಲ್ಲೂ ಸಹ ಅವರು ಸೌಜನ್ಯದಿಂದ ವರ್ತಿಸುತ್ತಾ ಇಲ್ಲ. ಇವತ್ತು ನಿಮ್ಮ ಡಿ.ಸಿ.ಗಳ ಪರಿಸ್ಥಿತಿ ಏನಾಗಿದೆ ಎಂಬುದನ್ನು ಹೇಳುತ್ತೇನೆ. ನಾನು ಆ ಯೂನಿಯನ್‌ಗಳಿಗೆ ಹೆಚ್ಚು ಪ್ರಾತಿನಿಧ್ಯ ಕೊಡಿ, ಅವರಿಗೆಲ್ಲಾ ಸವಲತ್ತುಗಳನ್ನು ಕೊಡಿ ಎಂದು ವಾದ ಮಾಡುವವನು. ಆದರೆ ಅವರಿಗೆ ಎಷ್ಟು ಪ್ರಾತಿನಿಧ್ಯ ಕೊಡಬೇಕು, ಎಷ್ಟು ಇತಿಮಿತಿಗಳಿರಬೇಕು ಅಷ್ಟೇ ಇತಿ ಮಿತಿಗಳಿದ್ದರೆ ಬಹಳ ಒಳ್ಳೆಯದು. ಇವತ್ತು ಏನಾಗಿದೆ ಎಂದರೆ, ಇವತ್ತು ಅನೇಕ ಜನ ಕಂಡಕ್ಟರುಗಳು ಡ್ರೈವರ್‌ಗಳು, ಅಲ್ಲಿ ಕೆಲಸ ಮಾಡತಕ್ಕವರು ಅನೇಕ ಜನ ಡಿ.ಸಿ. ಗಳನ್ನು ಬಡಿದು ಹೊಡೆದು ಮಾಡಿದ್ದಾರೆ. ಮೈಸೂರಿನಲ್ಲಿ ಡಿ.ಸಿ.ಯವರಿಗೆ ಪೆಟ್ಟು ಬಿದ್ದಿರತಕ್ಕದ್ದನ್ನು ಪೇಪರ್‌ನಲ್ಲಿ ನೋಡಿದ್ದೇವೆ. ಒಂದು ವೇಳೆ ಆಕಸ್ಮಾತ್ ಮೇಲಾಧಿಕಾರಿ ಗಳಲ್ಲಿ ಆ ತರಹದ್ದು ಏನಾದರೂ ಅನುಮಾನ ಬಂತು ಅಂದರೆ ಯಾರೂ ಕೂಡ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಬೆಳಗಾವಿ ಡಿ.ಸಿ.ಯವರಿಗೂ ಕೂಡ ಪೋಲೀಸರ ರಕ್ಷಣೆಯನ್ನು ಕೊಟ್ಟಿದ್ದೀರಿ. ಮೈಸೂರು ಡಿ.ಸಿ.ಯವರಿಗೆ ಪೋಲೀಸ್ ರಕ್ಷಣೆಯನ್ನು ಕೊಟ್ಟಿದ್ದೀರಿ. ಹಾಗಾದರೆ ಪೋಲೀಸ್ ರಕ್ಷಣೆಯಲ್ಲಿ ಅವರು ಯಾವ ರೀತಿ ಕೆಲಸ ಮಾಡಬೇಕು? ಕೆಲಸ ಮಾಡುವುದಕ್ಕೆ ಎಂದಿಗೂ ಸಾಧ್ಯವಾಗುವುದಿಲ್ಲ. ಅವರಲ್ಲಿ ಮನೋಧೈರ್ಯ ಬರಬೇಕು ಎಂದರೆ ಯಾರು ತಪ್ಪಿತಸ್ಥರಿದ್ದಾರೆ, ಯಾವುದೇ ಯೂನಿಯನ್ ಇರಲಿ ಅದನ್ನು ಅಬಾಲಿಷ್ ಮಾಡುವುದಕ್ಕೆ ಕ್ರಮ ಕೈಗೊಳ್ಳಿರಿ. ಮತ್ತೆ ಮೇಲಾಗಿ ಆ ಒಂದು ಶಿಸ್ತಿನ ಕ್ರಮವನ್ನು ಕೈಗೊಳ್ಳದೇ ಹೋದರೆ ಸಾರಿಗೆ ಸಂಸ್ಥೆಯಲ್ಲಿ ಅಶಿಸ್ತು ಹೋಗಲಾಡಿಸುವುದಕ್ಕೆ ಯಾರ ಕಡೆಯಿಂದಲೂ ಸಾಧ್ಯಾವಾಗುವುದಿಲ್ಲ. ಆದ್ದರಿಂದ ದಯವಿಟ್ಟು ನಿಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ ನಿರ್ದಾಕ್ಷಿಣ್ಯವಾಗಿ ಅವರ ಮೇಲೆ ಒಂದು ಕ್ರಮವನ್ನು ತೆಗೆದುಕೊಳ್ಳಲೇಬೇಕು. ಆ ದೃಷ್ಟಿಯಿಂದ ಒಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲಾ ಇಲಾಖೆಯಲ್ಲೂ ಕೂಡ ಟ್ರಾನ್ಸ್‌ಫರ್ಸ್ ಮಾಡುತ್ತಾರೆ. ಸಾರಿಗೆ ಇಲಾಖೆಯಲ್ಲಿ ಮಾತ್ರ ಯಾರೇ ಡ್ರೈವರ್‌ಗಳಿರಬಹುದು, ಕಂಡಕ್ಟರುಗಳಿರಬಹುದು ಅವರನ್ನು ಯಾರೂ ಕೂಡ ಮುಟ್ಟುವಹಾಗಿಲ್ಲ. ಅವರು 20 ವರ್ಷವಾದರೂ ಅಲ್ಲೇ ಇರುತ್ತಾರೆ, 30 ವರ್ಷಗಳಾದರೂ ಅಲ್ಲೇ ಇರುತ್ತಾರೆ. ಅವರು ಏನೇನು ಬಿಸಿನೆಸ್ ಮಾಡುತ್ತಿರುತ್ತಾರೋ ದೇವರಿಗೇ ಗೊತ್ತು. ಆ ದೃಷ್ಟಿಯಿಂದ

ಅವರನ್ನೂ ಕೂಡ ವರ್ಗ ಮಾಡಿ. ಬೇರೆ ಬೇರೆ ಡಿವಿಷನ್‌ಗಳಿಗೆ ವರ್ಗ ಮಾಡಿದರೆ ಸ್ವಲ್ಪ ಬದಲಾವಣೆ ಕೂಡ ಆಗುತ್ತದೆ. ಆ ದೃಷ್ಟಿಯಿಂದ, ಇವತ್ತು ಆ ಒಂದು ಶಿಸ್ತಿನ ಕ್ರಮವನ್ನು ನೀವು ಕೈಕೊಳ್ಳದೇ ಹೋದರೆ ಬಹುಶಃ ಇದನ್ನು ನಾವು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಅವರ ಮೇಲೆ ಯಾವುದೇ ರೀತಿ ಕಾಯಿದೆ ಕಾನೂನುಗಳನ್ನು ತಿದ್ದುಪಡಿ ತಂದಾದರೂ ಸಹಿತ ಆ ಯೂನಿಯನ್‌ಗಳನ್ನು ಹದ್ದುಬಸ್ತಿನಲ್ಲಿಡತಕ್ಕ ಕ್ರಮವನ್ನು ತಾವು ಬಹಳ ಧೈರ್ಯದಿಂದ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇವತ್ತು ಜಾಗೃತ ವಿಭಾಗದವರು ಲೈನ್ ಚೆಕಿಂಗ್ ಎಂದು ಮಾಡುತ್ತಾರೆ. ಬಹುಶಃ 2 ಪರ್ಸೆಂಟ್ ಇದ್ದುದನ್ನು ಈಗ 7 ಪರ್ಸೆಂಟ್‌ಗೆ ತಾವು ತಂದಿದ್ದೀರಿ. ಇದು ಇನ್ನೂ 15 ಪರ್ಸೆಂಟ್ ಆಗಬೇಕು. ದುರಾದೃಷ್ಟ ಎಂದರೆ ಚೆಕ್ ಮಾಡುವುದರಲ್ಲಿ ಏಕೋ ಬಹಳ ಮರ್ಜಿಗೆ ಒಳಗಾಗುತ್ತಾರೆ. ಅವರನ್ನು ನೀವು ಕೌಂಟರಾಗಿ, ಬೇರೆ ಬೇರೆ ಅಧಿಕಾರಿಗಳನ್ನು ಬೇರೆ ಬೇರೆ ರೂಟ್‌ಗಳಲ್ಲಿ ಹಾಕಿಸಿ ಹೆಡ್ ಆಫೀಸಿನಲ್ಲಿರತಕ್ಕ ಅಧಿಕಾರಿಗಳನ್ನು ಕೂಡ ತಾವು ಕಳುಹಿಸಿಕೊಟ್ಟರೆ ಬಹುಶಃ ಎಫೆಕ್ಟೀವ್ ಲೈನ್ ಚೆಕಿಂಗ್ ಆಗುತ್ತದೆ. ಆದರೆ ದುರಾದೃಷ್ಟ ಅಂದರೆ ಇದನ್ನು ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ. ಹೆಚ್ಚಿಗೆ ಮಾಡಿದ್ದೇ ಆದರೆ ಆದಾಯ ಕೂಡ ಹೆಚ್ಚಾಗುತ್ತದೆ. ನಗರಪ್ರದೇಶದಿಂದ ಸಾರಿಗೆ ವ್ಯವಸ್ಥೆಯನ್ನು ಬೇರ್ಪಡಿಸಲೇಬೇಕಾಗುತ್ತದೆ. ಅನಿವಾರ್ಯವಾಗಿ ಬೇರ್ಪಡಿಸಲೇಬೇಕಾಗುತ್ತದೆ. ಇಲ್ಲಿರತಕ್ಕ ಹಾನಿ ಏನಿದೆ ಅದನ್ನು ಇಡೀ ರಾಜ್ಯದ ಜನರಿಗೆ ಹೊರಿಸುವುದು ಬೇಡ. ಯಾವ ಒಂದು ಹಣ್ಣು ಕೆಟ್ಟಿದೆ ಆ ಹಣ್ಣು ಅಷ್ಟೇ ಬದಲಾವಣೆ ಮಾಡಿದರೆ ಬಹುಶಃ ಉಳಿದ ಹಣ್ಣಿನ ಸಂರಕ್ಷಣೆಯೂ ಆಗುತ್ತದೆ. ಆ ದೃಷ್ಟಿಯಿಂದ ನಿಮ್ಮಲ್ಲಿ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ ಸಾರಿಗೆ ಇಲಾಖೆಯಲ್ಲಿ ಆಮೂಲಾಗ್ರವಾದ ಬದಲಾವಣೆ ತರಬೇಕಾಗಿತ್ತೆಂದರೆ ನಿಮ್ಮ ರಿಪೋರ್ಟ್ ಏನಿದೆ, ವಿಭಾಗಮಟ್ಟದಲ್ಲಿ ಕಾರ್ಪೊ ರೇಷನ್ ಮಾಡಬೇಕೆಂದು ಏನು ಮಾಡಿದ್ದೀರಿ ಅದೇ ರೀತಿ ಮಾಡಿ ಈ ಸಾರಿಗೆಗೆ ಬಹಳ ಹೆಚ್ಚಿನ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ವಾಟಾಳ್ ನಾಗರಾಜ್** (ಚಾಮರಾಜನಗರ):- ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮಂಡಿಸಿರತಕ್ಕ 19 ಬೇಡಿಕೆಗಳ ಬಗ್ಗೆ ನಾನು ಮಾತನಾಡಬೇಕಾಗಿದೆ. ಇಲ್ಲಿ ಏನೋ ಒಂದು ರೀತಿ ಮೋಡ ಕವಿದ ವಾತಾವರಣ ಇದ್ದ ಹಾಗೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಅನಾರೋಗ್ಯದಲ್ಲಿದ್ದಾರೆ. ಮಂತ್ರಿಗಳು ಬಹಳ ಜನ ಸದನದಲ್ಲಿ ಇಲ್ಲ. ಶಾಸಕರೂ ಸಹ ಬಹಳ ಜನ ಸದನದಲ್ಲಿ ಇಲ್ಲ. ಅಧಿಕಾರಿಗಳಂತೂ ಇಲ್ಲವೇ ಇಲ್ಲ. ಈ ಪರಿಸ್ಥಿತಿಯನ್ನು ನೋಡಿದಾಗ ಒಂದು ರೀತಿಯಲ್ಲಿ ಶಾಸನಸಭೆಯಲ್ಲಿ ಮೋಡ ಕವಿದ ವಾತಾವರಣ ನಿರ್ಮಾಣವಾಗಿದೆ. ಇಷ್ಟೊಂದು ಬೇಡಿಕೆಗಳ ಬಗ್ಗೆ ಮಾತನಾಡಲು ಸಾಕಷ್ಟು ಅವಕಾಶವನ್ನು ತಾವು ಕೊಟ್ಟದ್ದೀರಿ. ಆದರೆ ಸಮಗ್ರವಾಗಿ ಎಲ್ಲಾ ಬೇಡಿಕೆಗಳ ಬಗ್ಗೆ ಚರ್ಚೆ ಸುದೀರ್ಘವಾಗಿ ಇಲ್ಲಿ ಆಗಬೇಕು, ನನಗನಿಸುತ್ತದೆ ಇದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಒಂದೊಂದು ಬೇಡಿಕೆಗೂ ಎರಡೆರಡು ದಿವಸ ಚರ್ಚೆಗೆ ಅವಕಾಶ ಸಿಗಬೇಕು ಎನ್ನುವುದು ನನ್ನ ಮನವಿ. ತಾವು ಅದನ್ನು

ಪರಿಶೀಲಿಸುವುದು ತಮಗೆ ಸೇರಿದ್ದು. ಈ ಸಂದರ್ಭದಲ್ಲಿ ತಾವು ಜಾಸ್ತಿ ಅವಕಾಶ ಕೊಡಲಿಲ್ಲವೆನ್ನತಕ್ಕ ಮಾತನ್ನು ನಾನು ಹೇಳುತ್ತಿಲ್ಲ. ಅವಕಾಶ ಚೆನ್ನಾಗಿ ಕೊಟ್ಟಿದ್ದೀರಿ ಅದರ ಬಗ್ಗೆ ಇಲ್ಲಿ ತಮಗೂ ಅರ್ಥವಾಗಿದೆ ಬಹಳ ದೊಡ್ಡ ದೊಡ್ಡ ಇಲಾಖೆಗಳು ಅದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ. ಈ ದೃಷ್ಟಿಯಲ್ಲಿ ನೋಡಿದಾಗ ನೀವು ಇಷ್ಟು ಇಲಾಖೆಗಳನ್ನು ಹಾಕಿರತಕ್ಕದ್ದು ಒಂದು ಕಡೆಯಾದರೆ, ಮಂತ್ರಿಗಳು ಅದೇರೀತಿಯಲ್ಲಿ ಕೆಲವರು ಇರತಕ್ಕದ್ದು, ಕೆಲವರು ಇಲ್ಲದಿರತಕ್ಕದ್ದನ್ನು ನೋಡಿದಾಗ, ಒಂದು ರೀತಿ ಇಲಾಖೆಗಳು ಇಷ್ಟು ಇದ್ದರೂ ಚರ್ಚೆಗೆ ಬಂದಿರುವುದು ಸರಿಯೇ? ಮತ್ತು ಮಂತ್ರಿಗಳು ಇಲ್ಲದಿರತಕ್ಕದ್ದು ಸರಿಯೇ? ನಾನು ಇಲ್ಲಿರುವ ಮಂತ್ರಿಗಳನ್ನು ಬೈಯ್ಯುತ್ತಿಲ್ಲ, ಇದು ಭಾವನೆ. ಈವೊಂದು ಪರಿಸ್ಥಿತಿಗೆ ಶಾಸನಸಭೆ ಆಗಬಾರದು. ಶಾಸನಸಭೆ ರಾಜ್ಯದ ಪ್ರಜಾಪ್ರಭುತ್ವದಲ್ಲಿ ಬಹಳ ಎತ್ತರವಾದ ಮಹತ್ತರವಾದ ಅಂಗ. ಈ ಸಭೆಗೆ ನಾವು ಎಲ್ಲಾ ಹೆಚ್ಚಿನ ಶಕ್ತಿ ಕೊಡಬೇಕು. ಬರುತ್ತಾ ಬರುತ್ತಾ ಈ ಸಭೆಯ ಶಕ್ತಿ ಕುಂದಬಾರದು. ಈ ಸಭೆಗೆ ನಾವೆಲ್ಲರೂ ಶಾಸಕರು ಜನರಿಂದ ಆಯ್ಕೆಯಾದವರು ಈ ಸದನದಲ್ಲಿ ಪ್ರಾಮಾಣಿಕವಾಗಿರಬೇಕು. ನಮಗೆ ಏನೇ ಕೆಲಸವಿದ್ದರೂ ಈ ಸದನ ಸೇರತಕ್ಕದ್ದು ಶಾಸನಸಭೆ ಶಾಸಕರಿಗಾಗಿ ಸೇರತಕ್ಕದ್ದು. ಈ ಸದನದಲ್ಲಿ ನಾವು ಗೈರು ಹಾಜರಿ ಆಗಬಾರದು. ಮತ್ತು ಅಧ್ಯಕ್ಷರು ಗೈರುಹಾಜರಾದವರ ಬಗ್ಗೆ ಪಟ್ಟಿಯನ್ನು ಸದನದಲ್ಲಿ ಓದಿಸಿಕೊಳ್ಳಬಾರದು ನಾವು. ಅಧ್ಯಕ್ಷರು ಅವರ ಮನಸ್ಸಿನಲ್ಲಿ ಇಂಥಿಂಥವರು ಬಂದಿಲ್ಲವೆಂದು ಹೇಳಿಸಿಕೊಳ್ಳುವ ಮಟ್ಟಕ್ಕೆ ನಾವು ಹೋಗಬಾರದು. ಆ ಪರಿಸ್ಥಿತಿಯಲ್ಲಿ ಸದನ ಇರಬೇಕಾದ್ದು ನಮ್ಮ ಕರ್ತವ್ಯ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಸದನಕ್ಕಿರತಕ್ಕ ಮಹತ್ವ ಕಡಿಮೆಯಾಗಬಾರದೆನ್ನತಕ್ಕದ್ದು ನನ್ನ ಕಳಕಳಿಯ ಮನವಿ. ಆ ದೃಷ್ಟಿಯಲ್ಲಿ ಸರ್ಕಾರವೂ ಅಷ್ಟೇ ಜವಾಬ್ದಾರಿಯಿಂದ ಆಳುವ ಪಕ್ಷದ ಮಂತ್ರಿಗಳು ಆಳುವ ಪಕ್ಷದ ಶಾಸಕರು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿರತಕ್ಕದ್ದು ಅವರ ಕರ್ತವ್ಯ. ಪದೇ ಪದೇ ಅವರನ್ನು ಕರೆಯಿಸಿಯೆಂದು ನಾವು ಹೇಳತಕ್ಕದ್ದು ಸರಿಯಲ್ಲ. ಮತ್ತು ಪ್ರತಿದಿನ ಅಧ್ಯಕ್ಷರು ಅವರನ್ನು ಕರೆಯಿರಿ ಎಂದು ಹೇಳತಕ್ಕದ್ದು ಅದು ಅಷ್ಟು ಸೌಜನ್ಯವು ಅಲ್ಲವೆನ್ನತಕ್ಕದ್ದು ಬಹಳ ನೋವಿನ ಪ್ರಸಂಗ. ವಿಧಾನಮಂಡಲದ ಬಗ್ಗೆ ಒಂದು ಬೇಡಿಕೆಯಿದೆ. ನನಗನಿಸುತ್ತದೆ ವಿಧಾನಮಂಡಲ ಬಹಳ ಶಕ್ತಿಯುತವಾಗಿರಬೇಕು. ತಾವು ಅದನ್ನು ಶಕ್ತಿಯುತವಾಗಿ ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ನಿಮ್ಮ ಇಲಾಖೆಯ ಅಧಿಕಾರಿ ವರ್ಗದವರು ಮತ್ತು ನಿಮ್ಮ ಇಲಾಖೆ ಎಲ್ಲವೂ ಬಹಳ ಹೆಚ್ಚಿನ ಬಹುಶಃ ಇಡೀ ದೇಶದಲ್ಲೇ ಕರ್ನಾಟಕ ವಿಧಾನಮಂಡಲಕ್ಕೆ ಬಹಳ ಗೌರವವಿದೆ. ಮತ್ತು ಅದಕ್ಕೆ ಒಂದು ಹೆಚ್ಚಿನ ಶಕ್ತಿಯಿದೆಯೆಂದು ನಾನು ಅಂದುಕೊಂಡಿದ್ದೇನೆ. ಅದನ್ನು ಬೆಳೆಸುವುದಕ್ಕೆ ನೀವು ಒಂದು ಹೊಸ ವಿಧಾನದಲ್ಲಿ ಯಾವ್ಯಾವ ರೀತಿಯಲ್ಲಿ ಬೆಳೆಸಬೇಕೆಂಬುದರ ಬಗ್ಗೆ ಒಂದು ಯೋಜನೆಯನ್ನು ತಾವು ತಯಾರು ಮಾಡಬೇಕೆಂದು ತಮ್ಮಲ್ಲಿ ಮಾನ್ಯ ಅಧ್ಯಕ್ಷರಲ್ಲಿ ಕಳಕಳಿಯಿಂದ ನಾನು ಮನವಿ ಮಾಡುತ್ತೇನೆ. ಈ ಇಲಾಖೆಗೆ ಒಂದು ವಿಶೇಷವಾದ ಸ್ಥಾನಮಾನ ಬರುವುದಕ್ಕೆ ಎಷ್ಟು ಶಕ್ತಿಯುತವಾದ ಯೋಜನೆಯನ್ನು ತಯಾರು ಮಾಡಬೇಕೋ ಅದನ್ನು ಮಾಡಬೇಕೆಂದು ಹೇಳಿ ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

ಈಗ ಮಂಡಿಸಿರತಕ್ಕ ಬೇಡಿಕೆಗಳಲ್ಲಿ ಕೆಲವು ಬೇಡಿಕೆಗಳ ಬಗ್ಗೆ ಚರ್ಚೆಮಾಡ ಬಹುದೆಂದು ನಾನು ಅಂದುಕೊಂಡಿದ್ದೇನೆ. ಆಸ್ಪತ್ರೆಗಳಿಗಾಗಿ ನಾವು ಬಹಳ ಹಣವನ್ನು ಕೊಡುತ್ತಿದ್ದೇವೆ. ವಿವಿಧ ರೂಪದಲ್ಲಿ ಆಸ್ಪತ್ರೆಗಳಿಗೆ ನಾವು ಅನೇಕ ರೂಪದಲ್ಲಿ ಕೊಡು ತ್ತಿದ್ದೇವೆ. ಆದರೆ ಇವತ್ತು ಆಸ್ಪತ್ರೆಗಳ ಪರಿಸ್ಥಿತಿ ಅದು ನಡೆದುಕೊಂಡಿರತಕ್ಕ ವ್ಯವಸ್ಥೆ ಅದನ್ನು ನೋಡಿದಾಗ ಅದು ನಿಜವಾಗಲೂ ಕರ್ಮಕಾಂಡ. ಆಸ್ಪತ್ರೆಗಳು ಒಂದು ನರಕವೆಂದು ಹೇಳಿ ನಾವು ಏನು ಹೇಳುತ್ತಿದ್ದೇವೆ. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ತಾಲ್ಲೂಕುಮಟ್ಟದಲ್ಲಿರತಕ್ಕ ಆಸ್ಪತ್ರೆಗಳು ಅಲ್ಲ, ಜಿಲ್ಲಾಮಟ್ಟದಲ್ಲಿರತಕ್ಕ ಆಸ್ಪತ್ರೆಗಳಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳ ಪರಿಸ್ಥಿತಿ ಕೂಡ ಇವತ್ತು ನರಕವಾಗಿದೆ. ಈ ಆಸ್ಪತ್ರೆಗಳು ವಿಕ್ಟೋರಿಯಾ ಆಸ್ಪತ್ರೆಯಾಗಲಿ, ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಯಾಗಲಿ, ಬೌರಿಂಗ್ ಆಸ್ಪತ್ರೆಯಾಗಲಿ ಅಲ್ಲಿಗೆ ಹೋದಾಗ, ಶೌಚಸ್ಥಳಕ್ಕೆ ನುಗ್ಗಿ ಹೊರಗೆ ಬಂದರೆ ವಿವಿಧ ರೋಗಗಳು ಒಳಗೆ ಹೋಗಿ ಆರೋಗ್ಯವಾಗಿರತಕ್ಕ ಮನುಷ್ಯನಿಗೆ ಕಾಯಿಲೆ ಬರತಕ್ಕ ಪರಿಸ್ಥಿತಿ ನಿರ್ಮಾಣವಾಗುತ್ತದೆ. ತಮಗೆ ಹೇಳುತ್ತೇನೆ, ಆಪರೇಷನ್ ಥಿಯೇಟರ್‌ಗಳಲ್ಲಿ ಜನರೇಟರ್‌ಗಳೇ ಇರುವುದಿಲ್ಲ. ವಿದ್ಯುಚ್ಛಕ್ತಿ ವ್ಯವಸ್ಥೆ ಕೆಟ್ಟರೆ ಬದಲಿ ವ್ಯವಸ್ಥೆ ಅಲ್ಲಿ ಜನರೇಟರ್ ಇಲ್ಲ. ಸಾಮಾನ್ಯ ಹತ್ತಿ ಅಲ್ಲಿ ಇಲ್ಲ. ಕಾಲಿಗೆ ಹಾಕತಕ್ಕ ಔಷಧಿಯನ್ನು. ಅಲ್ಲಿ ಅದ್ದಿ ಹಾಕಲಿಕ್ಕೆ ಹತ್ತಿನೇ ಅಲ್ಲಿ ಇಲ್ಲ. ಇದು ದೊಡ್ಡ ದೊಡ್ಡ ಆಸ್ಪತ್ರೆಗಳ ಪರಿಸ್ಥಿತಿ. ಅನೇಕ ಸಾರಿ ನಾನು ಇಲ್ಲಿ ಹೇಳಿದ್ದೇನೆ, ವಾರ್ಷಿಕ ವರದಿಯಲ್ಲಿ ಹೇಳಿದ್ದಾರೆ. ಎಷ್ಟೆಷ್ಟು ಬಾಬುಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿ ದ್ದೇವೆ ಎಂದು ಆದರೆ ಆಸ್ಪತ್ರೆ ಗಳ ಸುಧಾರಣೆ ಇನ್ನೂ ಆಗಿಲ್ಲ. ತಮಗೆ ಹೇಳುತ್ತೇನೆ ಇವತ್ತು ನಮ್ಮ ಸರ್ಕಾರಿ ಆಸ್ಪತ್ರೆಗಳ ಅಧಃಪತನದಿಂದ, ಸರ್ಕಾರಿ ಆಸ್ಪತ್ರೆಗಳ ಅವಿವೇಕ ದಿಂದ, ಸರ್ಕಾರಿ ಆಸ್ಪತ್ರೆಗಳ ಬೇಜವಾಬ್ದಾರಿತನದಿಂದ ಇವತ್ತು ನರ್ಸಿಂಗ್ ಹೋಮ್‌ಗಳು ನಾಯಿಕೊಡೆಗಳ ರೀತಿ ಯದ್ವಾತದ್ವ ಬೆಳೆಯುತ್ತಿವೆ. ಸರ್ಕಾರಿ ಆಸ್ಪತ್ರೆಗಳಿಗೆ ಪರ್ಯಾಯ ವಾಗಿ ನರ್ಸಿಂಗ್ ಹೋಮ್‌ಗಳು ಬರುತ್ತಿವೆ. ನರ್ಸಿಂಗ್‌ಹೋಮ್‌ಗಳು ಮಾರ್ವಾಡಿ ಲೆಕ್ಕಾಚಾರ. ಅವರಿಗೆ ಕರುಣೆಯಿಲ್ಲ, ಅವರಿಗೆ ಹೃದಯವಿಲ್ಲ ಒಂದು ಪ್ರಾಮಾಣಿಕತೆಯಿಲ್ಲ. ಹಿಂದೆ ಅನೇಕ ಕಡೆ ಸತ್ತರೆ ಹೆಣವನ್ನು ಅವನ ಹಣವನ್ನು ತೀರಿಸದೆ ಹೆಣವನ್ನು ಕೊಡದಿರತಕ್ಕ ಪರಿಸ್ಥಿತಿ ಅನೇಕ ನರ್ಸಿಂಗ್‌ಹೋಮ್‌ಗಳಲ್ಲಿ ಉಂಟು. ಈ ನರ್ಸಿಂಗ್ ಹೋಮ್‌ಗಳು ಕೆಲವು ಶ್ರೀಮಂತರ ಕೈಕೆಳಗೆ ಇರತಕ್ಕ ಒಂದು ಸಂಸ್ಥೆಗಳಾಗಿದೆ. ನರ್ಸಿಂಗ್ ಹೋಮ್‌ಗಳಲ್ಲಿ ಕೆಲಸ ಮಾಡತಕ್ಕ ವೈದ್ಯರುಗಳು ಯಾರು? ಸರ್ಕಾರಿ ವೈದ್ಯರುಗಳೇ ಬಹಳ ವೈದ್ಯರುಗಳು ನರ್ಸಿಂಗ್ ಹೋಮ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಕಾರಣ ಏನೆಂದರೆ ನಮ್ಮ ವೈದ್ಯರುಗಳಿಗೆ ಹೆಚ್ಚಿನ ರೀತಿಯಲ್ಲಿ ಅವರಿಗೆ ವ್ಯವಸ್ಥೆ ಅವರಿಗೆ ಸಂಬಳ ಸಾರಿಗೆ ಪ್ರತಿಯೊಂದನ್ನು ಕೊಡಬೇಕೆಂದು ಹೇಳತಕ್ಕ ಮನುಷ್ಯ ನಾನು. ಈವೊಂದು ದೃಷ್ಟಿಯಿಂದ ನಾವು ನಮ್ಮ ವ್ಯವಸ್ಥೆಯನ್ನು ಸರ್ಕಾರಿ ಆಸ್ಪತ್ರೆಗಳ ವ್ಯವಸ್ಥೆಯನ್ನು ಸರಿ ಪಡಿಸಲಿಲ್ಲವೆಂದರೆ ಬಹಳ ಅತ್ಯಂತ ನರಕ. ತಮಗೆ ಒಂದು ಮಾತು ಹೇಳುತ್ತೇನೆ, ರೋಗಿಗಳಿಗೆ ಜಿರಲೆ ತಿಂದಿರತಕ್ಕ ಬ್ರೆಡ್‌ನ್ನು ಕೊಡುತ್ತಿದ್ದಾರೆ. ನೊಣ, ಸೊಳ್ಳೆ ಸತ್ತು ಬಿದ್ದಿರತಕ್ಕ ಹಾಲು ಕೊಡುತ್ತಿದ್ದಾರೆ. ವಾರ್ಡ್‌ಗಳ ಪರಿಸ್ಥಿತಿಯನ್ನು ನೋಡಿದರೆ ಅತ್ಯಂತ ಕಣ್ಣೀರು ಬರುತ್ತದೆ. ಯಾವ್ಯುದೋ ಓಬೀರಾಯನ ಕಾಲದ ಹಾಸಿಗೆ; ಕೆಟ್ಟ ವಾಸನೆಯ ಹೊದಿಕೆ, ಹಾಸಿಗೆಗಳನ್ನು ಬದಲಾವಣೆ ಮಾಡದಿರತಕ್ಕ ಪರಿಸ್ಥಿತಿ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ, ಕೃಷ್ಣರಾಜೇಂದ್ರ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ, ಬೌರಿಂಗ್ ಆಸ್ಪತ್ರೆಗಳಲ್ಲಿ

ನಾವು ಕಾಣುತ್ತಿದ್ದೇವೆ; ಇನ್ನು ತಾಲ್ಲೂಕು ಆಸ್ಪತ್ರೆಗಳ ಪರಿಸ್ಥಿತಿಯನ್ನು ತಾವು ಗಮನಿಸಿದರೆ, ತಾಲ್ಲೂಕು ಆಸ್ಪತ್ರೆಗಳು ಹಾಸಿಗೆಗಳು ಇಲ್ಲದೆ ರೋಗಿಗಳನ್ನು ನೆಲದಮೇಲೆ ಮಲಗಿಸಿರತಕ್ಕದ್ದು ಅನೇಕ ಆಸ್ಪತ್ರೆಗಳಲ್ಲಿ ಇದೊಂದು ದೃಶ್ಯವಾಗಿದೆ. ಈ ವ್ಯವಸ್ಥೆಯನ್ನು ನಮ್ಮ ಸರ್ಕಾರ ಪರಿಣಾಮಕಾರಿಯಾಗಿ ನೋಡಲಿಲ್ಲವೆಂದರೆ ನಾವು ದೊಡ್ಡ ದುರಂತವನ್ನೇ ಮಾಡಿದಹಾಗೆ ಆಗುತ್ತದೆನ್ನುವ ಮಾತನ್ನು ತಮಗೆ ಹೇಳುತ್ತೇನೆ. ಕಲುಷಿತವಾದ ಔಷಧಿ, ಮೊನ್ನೆ ಒಂದು ಶಾಲೆಯ ಮಕ್ಕಳಿಗೆ ಶಾಲಾ ಸಮಯದಲ್ಲಿ ಒಂದು ಮಗು ಮಾತ್ರೆ ತಿಂದು ಸತ್ತಿದೆ. ಈ ಮಾತ್ರೆಗಳ ಒಂದು ಜಾಲ ಇದೆಯಲ್ಲಾ, ಈ ಮಾತ್ರೆಗಳ ಜಾಲ ಇದೊಂದು ವಿಚಿತ್ರ. ಅನೇಕ ಅಂಗಡಿಗಳಲ್ಲಿ ಅನಾಸಿನ್ ಎಂದು ಮಾರುತ್ತಾರೆ. ಅದೇನು ಅನಾಸಿನ್ನೇ ಸುಣ್ಣದ ಗುಳಿಗೆಯೇ ಅದೇನು ಎನ್ನತಕ್ಕದ್ದನ್ನು ಪರೀಕ್ಷೆ ಮಾಡಿ ಕೊಡತಕ್ಕದ್ದನ್ನು ಇವತ್ತಿನವರೆಗೂ ನಾವು ಯಾರೂ ಮಾಡುವ ಗೋಜಿಗೆ ಹೋಗಿಲ್ಲ. ಎಲ್ಲಾ ಅಂಗಡಿಗಳಲ್ಲೂ ತಲೆನೋವು ಬಂತು ಅಂದರೆ ಹೋಗಿ ಅನಾಸಿನ್ ತೆಗೆದುಕೊಂಡು ಬಿಡುತ್ತೇವೆ. ಅದು ಯಾವ ತರಹ ತಿರುಗುತ್ತೋ ಯಾವ ರೋಗಕ್ಕೆ ತಿರುಗುತ್ತೋ ಅದು ಎಲ್ಲಿಗೆ ತಲುಪುತ್ತೋ ಗೊತ್ತಿಲ್ಲ. ಈ ಪರಿಸ್ಥಿತಿ ನಿರ್ಮಾಣವಾಗಿದೆ, ಅದಕ್ಕೆ ನಾನು ತಮಗೆ ಹೇಳುತ್ತಿದ್ದೇನೆ. ಆಸ್ಪತ್ರೆಗಳ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಒಂದು ಸಮಗ್ರವಾದಂತಹ ಚಿಂತನೆ ಸರ್ಕಾರದಲ್ಲಿ ಆಗಬೇಕು ಎನ್ನತಕ್ಕದ್ದು ನನ್ನ ಕಳಕಳಿಯ ಮನವಿ ಸ್ವಾಮಿ. ಸರ್ಕಾರಿ ಆಸ್ಪತ್ರೆಗಳು ಯಾವಾಗ ಸರಿಹೋಗುವುದಿಲ್ಲ ಆಗ ನರ್ಸಿಂಗ್‌ಹೋಮ್‌ಗಳು ಬೆಳೆಯುತ್ತವೆ. ನರ್ಸಿಂಗ್‌ಹೋಮ್‌ಗಳಿಗೆ ಹಣ ಕೊಡಲಿಕ್ಕೆ ಸಾಮಾನ್ಯ ಜನ ಮತ್ತು ಬಡವರಿಂದ ಸಾಧ್ಯವಿಲ್ಲ. ಇಂತಹ ಪರಿಸ್ಥಿತಿ ಇರುವಾಗ ಆಸ್ಪತ್ರೆಗಳ ವ್ಯವಸ್ಥೆ ಪರಿಣಾಮ ಕಾರಿಯಾಗಿ ಸರಿಹೋಗಬೇಕೆನ್ನತಕ್ಕದ್ದು ನನ್ನ ಕಳಕಳಿಯ ಮನವಿ. ಔಷಧಿಗಳ ನಿಯಂತ್ರಣ ಇಲಾಖೆ ಇದೆ. ಈ ಔಷಧಿಗಳ ನಿಯಂತ್ರಣ ಇಲಾಖೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ. ಎಷ್ಟು ರೀತಿಯಲ್ಲಿ ಎಲ್ಲೆಲ್ಲಿ ಔಷಧಿಗಳು ತಯಾರಾಗುತ್ತಿವೆ, ತಯಾರಾಗತಕ್ಕ ಔಷಧಿ ಎಲ್ಲಿ ಮಾರಾಟವಾಗುತ್ತದೆ, ಯಾವ್ಯಾವ ಔಷಧಿ ಎಷ್ಟು ಕಲುಷಿತವಾಗಿಲ್ಲ ಅದನ್ನು ನೋಡತಕ್ಕ ವ್ಯವಸ್ಥೆಯನ್ನು ಆ ಇಲಾಖೆ ಮಾಡುತ್ತಿಲ್ಲ. ಈ ಪರಿಸ್ಥಿತಿಯನ್ನು ನೋಡಿದಾಗ ಅತ್ಯಂತ ಬಹಳ ನಾಚಿಕೆಗೇಡು ಅನ್ನಿಸುತ್ತದೆ. ಇವತ್ತು ನಾಯಿ ಕಡಿದರೆ ಔಷಧಿ ಇಲ್ಲ. ತಾಲ್ಲೂಕು ಆಸ್ಪತ್ರೆಗಳಲ್ಲಿ ನಾಯಿ ಕಡಿದರೆ ಅದಕ್ಕೆ ಔಷಧಿ ಇಲ್ಲ.

1-10 ಪಿ. ಎಂ.

ಹಾವು ಕಡಿದರೆ ಔಷಧಿ ಇಲ್ಲವೇ ಇಲ್ಲ. ಹಾವು ಕಚ್ಚಿದ ತಕ್ಷಣ ಸಾವೇ. ಹಾವು ಕಡಿದಾಗ ತಕ್ಷಣ ಚಿಕಿತ್ಸೆ ಕೊಡಬೇಕು. ಹಳ್ಳಿಗಳಲ್ಲಿ ಹೊಲದಲ್ಲಿ ಹಾವು ಕಡಿದರೆ 'ಅವನ ಆಯಸ್ಸು ಮುಗಿಯಿತು, ಹೋದ' ಎಂದು ಹೇಳುತ್ತಾರೇ ಹೊರತು ಆತನಿಗೆ ತಕ್ಷಣ ಔಷಧಿ ಕೊಟ್ಟು ಆತನನ್ನು ಉಳಿಸಬೇಕು ಎನ್ನತಕ್ಕಂಥ ವ್ಯವಸ್ಥೆ ಇವತ್ತು ಇಲ್ಲ. ನಾಯಿ ಕಡಿದರೆ ಅದರ ಮುಂದಿನ ಪರಿಣಾಮ ಇದೆಯಲ್ಲಾ, ಬಹಳ ಕೆಟ್ಟದ್ದು. ಔಷಧಿ ಸಿಕ್ಕಿಲ್ಲ ಎಂದರೆ ಅವನು ನಾಯಿಯಾಗಿಯೇ ಬೊಗಳಿಕೊಂಡು ಸಾಯುತ್ತಾನೆ. ಇದು ಬಹಳ ಅತ್ಯಂತ ನೋವಿನ ಪ್ರಸಂಗ. ನಾಯಿ ಕಡಿದರೆ ಔಷಧಿ ಇಲ್ಲ...

ಅಧ್ಯಕ್ಷರು :- ಹುಚ್ಚುನಾಯಿ.

ಶ್ರೀ ವಾಟಾಳ್ ನಾಗರಾಜ್ :- ಹೌದು, ಹುಚ್ಚುನಾಯಿ ಕಡಿದರೆ ಔಷಧಿ ಇಲ್ಲ. ಹಾವು ಕಡಿದರೆ ಔಷಧಿ ಇಲ್ಲ, ಚೇಳು ಕಡಿದರೆ ಔಷಧಿ ಇಲ್ಲ. ಈಗ ತಾಲ್ಲೂಕು ಆಸ್ಪತ್ರೆಗಳ ವ್ಯವಸ್ಥೆಯನ್ನು ತಾವು ನೋಡಬೇಕು. ಇದು ಕರುಣಾಜನಕವಾದ ಕತೆ. ಸರ್ಕಾರ ಇಷ್ಟೊಂದು ಹಣ ಕೊಡುತ್ತಿದ್ದಾರೆ. ಮಾನ್ಯ ಹಣಕಾಸು ಸಚಿವರು ಇದ್ದಾರೆ. ತಾವು ಕೊಟ್ಟ ಹಣ ಸದ್ವಿನಿಯೋಗ ಆಗುವುದಕ್ಕೆ, ಯಾವ ಜವಾಬ್ದಾರಿ ವಹಿಸಿದ್ದೀರಿ? ಅನೇಕ ಆಸ್ಪತ್ರೆಗಳಲ್ಲಿ ಕಟ್ಟಡ ಇದೆ, ವೈದ್ಯರು ಇಲ್ಲ. ಬಹುತೇಕ ತಾಲ್ಲೂಕು ಆಸ್ಪತ್ರೆಗಳ ವ್ಯವಸ್ಥೆ ಸರಿಯಿಲ್ಲ ಎಂಬ ನನ್ನ ಕಳಕಳಿಯನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ. ಇನ್ನು ಪ್ರೌಢಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣ. ಈ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣಕ್ಕೆ ನೀವು ಏನೂ ಅವರಿಗೆ ಕೊಡಬೇಕಾಗಿಲ್ಲ. ಪ್ರೌಢಶಿಕ್ಷಣ ಮತ್ತು ಪ್ರಾಥಮಿಕ ಶಿಕ್ಷಣ, ಈ ಬಗ್ಗೆ ನಾವು ಚಿಂತನೆ ಮಾಡಿದಾಗ ಖಾಸಗಿ ಶಾಲೆಗಳು ವ್ಯಾಪಾರಿ ಕೇಂದ್ರಗಳಾಗಿವೆ. ಪ್ರಾಥಮಿಕ ಶಿಕ್ಷಣದಿಂದ ಪ್ರೌಢಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ವ್ಯಾಪಾರ. ಈ ವ್ಯಾಪಾರಿ ಮನೋಭಾವನೆಯನ್ನು ತಪ್ಪಿಸಬೇಕಾದರೆ ನಮ್ಮಲ್ಲಿ ಸರ್ಕಾರಿ ಶಾಲೆಗಳಿಗೆ ಹೆಚ್ಚಿನ ಮಹತ್ವ ಕೊಡಬೇಕು, ಸರ್ಕಾರಿ ಶಾಲೆಗಳನ್ನು ಉತ್ತಮ ಸ್ಥಿತಿಗೆ ತರಬೇಕು. ಉಪಾಧ್ಯಾಯರು ಅಲ್ಲಿ ಸ್ಪಷ್ಟವಾಗಿ ಇರಲೇಬೇಕು. ಉಪಾಧ್ಯಾಯರು ಇಲ್ಲದೇ ಇರತಕ್ಕಂಥ ಶಾಲೆಗಳಲ್ಲಿ ಫಲಿತಾಂಶ ಕಡಿಮೆ, ಇದು ಸ್ಪಷ್ಟ. ಯಾವ ಶಾಲೆಗಳು ಫಲಿತಾಂಶ ಕಡಿಮೆ ಕೊಡುತ್ತವೆ, ಆ ಶಾಲೆಯ ಉಪಾಧ್ಯಾಯರ ಮೇಲೆ ಅದರ ಹೊಣೆಗಾರಿಕೆಯನ್ನು ಹೊರಿಸತಕ್ಕಂಥ ಜವಾಬ್ದಾರಿ ಸರ್ಕಾರದ ಮೇಲೆ ಬರಬೇಕು. ನಾನು ಹೇಳುತ್ತೇನೆ, ಶಿಕ್ಷಣ ಮಹತ್ವವಾದುದು. ಹಾಗೆಯೇ ಶಿಕ್ಷಕರೂ ಕೂಡ "ಗುರು ಬ್ರಹ್ಮ, ಗುರುವಿಷ್ಣು, ಗುರುದೇವೊ ಮಹೇಶ್ವರ" ಎಂದು ಏನು ಕರೆಯುತ್ತಿದ್ದೇವೆ, ಇದಕ್ಕೆ ಪರ್ಯಾಯವಾದ ವ್ಯವಸ್ಥೆ ಇವತ್ತು ಇದೆ. ಆದ್ದರಿಂದಲೇ ಇವತ್ತು ನಮ್ಮ ಶಾಲೆಗಳು ಶಾಲೆಗಳಾಗಿಯೇ ಉಳಿದಿಲ್ಲ. ಶಾಲೆಗಳು ರಾಜಕೀಯ ಕೇಂದ್ರಗಳಾಗಿ ಉಳಿದಿವೆ. ಮಕ್ಕಳದ್ದು ಒಂದು ರೀತಿ, ಉಪಾಧ್ಯಾಯರದ್ದು ಒಂದು ರೀತಿ. ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದಲೇ ಈ ಮನೆಪಾಠ ವ್ಯವಸ್ಥೆ ಶುರುವಾಗಿದೆ. ಇದು ಏಕೆ ಶುರುವಾಗಿದೆ ಎಂದರೆ ನಮ್ಮಲ್ಲಿ ಸರ್ಕಾರಿ ಶಾಲೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವ ಕಾರಣದಿಂದ ಇದು ಆಗಿದೆ. ಕನ್ನಡ ಮಾಧ್ಯಮ ಬಗ್ಗೆ ಇದು ತಂದೆತಾಯಿಗಳಿಗೆ ಬೇಕಾಗಿಲ್ಲ. ತನ್ನ ಮಕ್ಕಳನ್ನು ಕನ್ನಡ ಮಾಧ್ಯಮಕ್ಕೆ ಸೇರಿಸಬೇಕು ಎನ್ನತಕ್ಕಂಥ ವಿಚಾರದಲ್ಲಿ ಇವತ್ತು ಹಳ್ಳಿಗಾಡಿನಲ್ಲಿರತಕ್ಕಂಥ ಜನರಿಗೆ ಅದರ ಜಾಡ್ಯ, ರೋಗ ಬಂದಿದೆ. ಈ ಒಂದು ಪರಿಸ್ಥಿತಿಯಿಂದಾಗಿ ಹಳ್ಳಿಗಳಿಂದ ಹಿಡಿದು ಪಟ್ಟಣವರೆಗೆ ಇಂಗ್ಲೀಷ್ ಮಾಧ್ಯಮ ಶಾಲೆಗಳು ನಾಯಿಕೊಡೆಗಳಂತೆ ಬೆಳೆದು ನಿಂತಿವೆ. ಇಂಗ್ಲೀಷ್ ಶಾಲೆಗಳ ಮುಂದೆ ತಂದೆತಾಯಿಗಳು ಗುಲಾಮರ ರೀತಿಯಲ್ಲಿ ಸಾಲುಗಟ್ಟಿ ನಿಂತಿರುತ್ತಾರೆ. ಈ ದೃಶ್ಯ ಮನುಷ್ಯತ್ವ ಇರತಕ್ಕಂಥವರಿಗೆ, ಮಾನಮರ್ಯಾದೆ ಇರತಕ್ಕಂಥವರಿಗೆ ಅಗೌರವ ತರತಕ್ಕಂಥಾದ್ದು. ಅವರು ಕೇಳಿದಷ್ಟು ಹಣ ಕೊಡುತ್ತಾರೆ, ಹಣಕ್ಕೆ ಲೆಕ್ಕವೇ ಇಲ್ಲ. ಖಾಸಗಿ ಶಾಲೆಗಳು ಈ ಪರಿಸ್ಥಿತಿಯಲ್ಲಿ ನಡೆದರೆ ಈ ದೇಶದಲ್ಲಿ ಶಿಕ್ಷಣ ವ್ಯವಸ್ಥೆ

ಅಂಧಕಾರಮಯವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಆದಕ್ಕೆ ಶಿಕ್ಷಣ ವ್ಯವಸ್ಥೆ ಪರಿಣಾಮಕಾರಿಯಾದ ಬದಲಾವಣೆಯಾಗತಕ್ಕಂಥ ವ್ಯವಸ್ಥೆಯಾಗಬೇಕು. ಈಗ ಇರತಕ್ಕಂಥ ಮಾನ್ಯ ಗೋವಿಂದೇಗೌಡರು, ಅವರ ಬಗ್ಗೆ ನನಗೆ ಹೆಚ್ಚಿನ ಗೌರವ ಇದೆ. ಕರ್ನಾಟಕದಲ್ಲಿ ಹಿಂದೆ ಶ್ರೀ ಎಸ್. ಆರ್. ಕಂಠಿಯವರು ಇದೇ ಸ್ಥಾನದಲ್ಲಿ ಶಿಕ್ಷಣ ಮಂತ್ರಿಯಾಗಿ ಇದ್ದರು. ಅವರೂ ಕೂಡ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ಮಾಡುವುದಕ್ಕೆ ಹೊರಟಿದ್ದಂಥ ಒಬ್ಬ ಕಾಂತ್ರಿಕಾರಿ ವ್ಯಕ್ತಿಯಾಗಿದ್ದರು. ಅಷ್ಟೇ ಪರಿಣಾಮಕಾರಿಯಾಗಿರುವಂಥ ವ್ಯಕ್ತಿ ಶ್ರೀಮಾನ್ ಗೋವಿಂದೇಗೌಡರು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಮುಕ್ತಕಂಠದಿಂದ ಹೇಳುತ್ತಿದ್ದೇನೆ. ಅವರಲ್ಲಿ ಪ್ರಾಮಾಣಿಕತೆ ಇದೆ, ಚಿಂತನೆ ಇದೆ. ಈ ಶಾಲೆಗಳಿಗೆ ಹೊಸ ರೂಪ ಕೊಡತಕ್ಕಂಥ ಕಳಕಳಿ ಇದೆ. ಶಿಕ್ಷಣಕ್ಕೆ ವ್ಯವಸ್ಥಿತ ರೂಪದಲ್ಲಿ ಖರ್ಚು ಮಾಡತಕ್ಕಂಥ ಹಣ ನೋಡಿದಾಗ, ಇದು ನಿಜವಾಗಿಯೂ ಅಪವ್ಯಯವಾಗುತ್ತಿದೆ. ಸರ್ಕಾರಿ ಶಾಲೆಗಳಿಗೆ ಹೆಚ್ಚಿನ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಮಾನ್ಯ ಶಿಕ್ಷಣ ಸಚಿವರ ಕ್ಷೇತ್ರದಲ್ಲಿ ಕ್ಷೇತ್ರವೆಂದರೆ ಅವರ ಜಿಲ್ಲೆಯ ಮೂಡಿಗೆರೆಯಲ್ಲಿ ಮೊನ್ನೆ ಏನಾಗಿದೆ ಎಂದರೆ, ಮಳೆಯಲ್ಲೇ ಶಾಲೆ ನೆನೆಯುತ್ತಿದೆ. ಮಕ್ಕಳು ಛತ್ರಿ ಹಿಡಿದುಕೊಂಡು ಕುಳಿತಿದ್ದಾರೆ. ಇದು ಕೇವಲ ಮೂಡಿಗೆರೆ ಒಂದರಲ್ಲೇ ಅಲ್ಲ, ಕರ್ನಾಟಕದ ಉದ್ದಗಲಕ್ಕೂ ಇಂಥ ಸರ್ಕಾರಿ ಶಾಲೆಗಳು ದನಗಳ ದೊಡ್ಡಿಗಿಂತ ಕಡಿಮೆಯಾಗಿವೆ. ಅವುಗಳನ್ನು ಸರಿಪಡಿಸತಕ್ಕಂಥ ವ್ಯವಸ್ಥೆ ಆಗಬೇಕು. ಉತ್ತಮ ಉಪಾಧ್ಯಾಯರು, ಉತ್ತಮ ವ್ಯವಸ್ಥೆಯನ್ನು ಅವುಗಳಿಗೆ ಕಲ್ಪಿಸಿಕೊಟ್ಟರೆ, ಖಾಸಗಿ ಶಾಲೆಗಳಿಗೆ ಕಡಿವಾಣ ಹಾಕಬಹುದು. ಈ ದೃಷ್ಟಿಯಿಂದ ಉತ್ತಮ ವ್ಯವಸ್ಥೆ ಆಗಬೇಕಾದದ್ದು ಅದನ್ನು ನೋಡಬೇಕಾದದ್ದು ತಮ್ಮ ಕರ್ತವ್ಯ. ಉರ್ದುಶಾಲೆಗಳಿಗೆ ಇವತ್ತಿನವರೆಗೂ ಕನ್ನಡ ಉಪಾಧ್ಯಾಯರುಗಳಿಲ್ಲ. ಅವರು ಕೇಳುತ್ತಲೇ ಇದ್ದಾರೆ, ಬೇಡುತ್ತಲೇ ಇದ್ದಾರ, ಕಾಡುತ್ತಲೇ ಇದ್ದಾರೆ, ಆದರೂ ಇವತ್ತಿನವರೆಗೂ ಕನ್ನಡ ಉಪಾಧ್ಯಾಯರು ಉರ್ದುಶಾಲೆಗಳಲ್ಲಿ ಇಲ್ಲ. ನನಗನ್ನಿಸುತ್ತದೆ, ನೀವು ಮಧ್ಯಾಹ್ನದ ಊಟ ಕೊಡದಿದ್ದರೂ ಚಿಂತೆ ಇಲ್ಲ. ಸಮವಸ್ತ್ರ ಕೊಡದಿದ್ದರೂ ಚಿಂತೆ ಇಲ್ಲ. ಉತ್ತಮವಾದ ಉಪಾಧ್ಯಾಯರನ್ನು ಕೊಟ್ಟು, ಉತ್ತಮ ಶಾಲೆಗಳನ್ನು ಕೊಡಿ. ಇದರಿಂದ ಒಳ್ಳೆಯ ಪರಿಸರ ಸೃಷ್ಟಿಯಾಗುತ್ತದೆ. ಅದು ಬಿಟ್ಟು ಈಗ ತಾವು ಶಾಲೆಗಳಿಗೆ ಶೌಚಾಲಯಕ್ಕೆಂದು ಐದು ಸಾವಿರ ಕೊಡುವುದಾಗಿ ಹೇಳುತ್ತೀರಿ. ಸ್ವಾಮಿ, ಹಳ್ಳಿಗಳಲ್ಲಿ ತಾವು ಕೊಟ್ಟಿರತಕ್ಕಂಥ ಶೌಚಾಲಯಗಳಿಗೆ ತೊಳೆಯುವುದಕ್ಕೆ ನೀರು ಇಲ್ಲದೆ ಫಜೀತಿಯಾಗಿದೆ. ನಿಮ್ಮಲ್ಲಿ ನೀರಿನ ವ್ಯವಸ್ಥೆ ಸರಿಪಡಿಸಿ ಶಾಲೆಗಳಿಗೆ ಶೌಚಾಲಯ ಕೊಡಿ. ಒಂದು ಕಡೆ ಶೌಚಾಲಯ ಕೊಡುತ್ತೀರಿ, ಮತ್ತೊಂದು ಕಡೆ ನೀರಿನ ವ್ಯವಸ್ಥೆ ಇಲ್ಲವೆಂದರೆ ಅದು ಸಹಿಯಾಗುವುದಿಲ್ಲ. ಇನ್ನು ಸಮವಸ್ತ್ರ ಇದಕ್ಕಿಂತ ದೊಡ್ಡದಾದ ನಾಟಕ, ಅನ್ಯಾಯ ಬೇರೆ ಇಲ್ಲ. ಚಡ್ಡಿ ತೋಳಿಗೆ ಬಂದಿರುತ್ತದೆ, ತೋಳು ಕಾಲಿಗೆ ಬರುತ್ತದೆ. ಸರಿಯಾದ ಅಳತೆ ಇರುವುದಿಲ್ಲ. ಯಾರೋ ಬೇಕಾದವರಿಗೆ ಕಾಂಟ್ರಾಕ್ಟ್ ಕೊಟ್ಟುಬಿಡುತ್ತಾರೆ. 'ಎಲ್ಲಾ ಹೊಲೆದು ತಂದುಬಿಡಪ್ಪ' ಎಂದು ಹೇಳುತ್ತಾರೆ, ಆತ ಹೊಲೆದು ತಂದುಬಿಡುತ್ತಾನೆ. ಆ ಬಟ್ಟೆಗಳನ್ನು ಹೇಗೆ ಹಾಕಿಕೊಳ್ಳಬೇಕೋ ಗೊತ್ತಿಲ್ಲ. 10 ಸಾವಿರ, 20ಸಾವಿರ ಬಟ್ಟೆಗಳನ್ನು ಹೊಲೆದಾಗ, ಅದು ಬಟ್ಟೆಯನ್ನು ಒಂದು ಸಾರಿ ನೀರಿಗೆ ಹಾಕಿದ ತಕ್ಷಣ ಮುಳುಗಿ ಹೋಗುತ್ತದೆ; ಅದು

ನೀರಿನಲ್ಲಿ ಹೋಮ ಆಗುತ್ತದೆ. ಈ ಸಮವಸ್ತ್ರಕ್ಕೆ ಕೊಡತಕ್ಕಂಥ ಹಣ, ಯಾರೋ ಕೆಲವರನ್ನು ಶ್ರೀಮಂತರನ್ನಾಗಿ ಮಾಡುವುದಕ್ಕೆ ಒಟ್ಟು ಸಮವಸ್ತ್ರ ತಂದುಕೊಡುತ್ತೇವೆ ಅಂತ ಹೇಳಿ, ಆ ಚಡ್ಡಿ, ಅಂಗಿಗಳು ಹೇಗೇ ಹೇಗೋ ಇರುತ್ತವೆ. ನಿಜವಾಗಿಯೂ ಇದು ನಮ್ಮ ಮಕ್ಕಳಿಗೆ ಅವಮಾನ. ಮಕ್ಕಳಿಗೆ ಅಗೌರವವನ್ನು ಉಂಟುಮಾಡತಕ್ಕಂಥ ರೀತಿ ಯಲ್ಲಿರುವ ಈ ಸಮವಸ್ತ್ರ ವ್ಯವಸ್ಥೆಯನ್ನು ಇವತ್ತು ಪರಿಣಾಮಕಾರಿಯಾಗಿ ಬದಲಾವಣೆ ಮಾಡಬೇಕು. ಒಳ್ಳೆಯ ಬಟ್ಟೆಯನ್ನು ಕೊಡಬೇಕು. ಖಾದಿ ಬಟ್ಟೆಯನ್ನೇ ಕೊಡಿ. ಇದರಿಂದ ಖಾದಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆ. ಇದನ್ನು ಸರ್ಕಾರದ ಒಂದು ನೀತಿಯನ್ನಾಗಿ ಮಾಡಿ. ಖಾದಿ ಬಟ್ಟೆಯ ಸಮವಸ್ತ್ರವನ್ನೇ ಕೊಡಬೇಕು ಖಾದಿ ಬಟ್ಟೆಯನ್ನೇ ಬಳಸಬೇಕು ಎಂದು ಹೇಳಿದರೆ, ಇದು ಒಂದು ನೀತಿಯಾಗುತ್ತದೆ ಮತ್ತು ಖಾದಿಗೆ ಹೆಚ್ಚಿನ ರೀತಿಯಲ್ಲಿ ಬೆಂಬಲ ಕೊಟ್ಟಹಾಗೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ತಮಗೆ ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ಉತ್ತಮ ಊಟದ ವ್ಯವಸ್ಥೆ- ಇದು ಕುಲಗೆಟ್ಟಿದೆ. ರುಚಿ ಇಲ್ಲ. ಒಳ್ಳೆ ಅಕ್ಕಿ ಹಾಕುವುದಿಲ್ಲ, ಒಳ್ಳೆಯ ವ್ಯವಸ್ಥೆ ಇಲ್ಲ. ಎಲ್ಲವೂ ಒಂದು ರೀತಿಯಲ್ಲಿ ನರಕ ಪರಿಸ್ಥಿತಿ. ಇಷ್ಟೆಲ್ಲಾ ಪರಿಸ್ಥಿತಿಯಲ್ಲಿ ಹಳ್ಳಿಗಾಡಿನಲ್ಲಿರುವ ನಮ್ಮ ಮಕ್ಕಳು ಸರ್ಕಾರಿ ಶಾಲೆ ಗಳಲ್ಲಿ ಓದುತ್ತಿರುವಾಗ, ಫಲಿತಾಂಶವನ್ನು ಹೆಚ್ಚಿಗೆ ಬರಬೇಕೆಂದು ನಿರೀಕ್ಷೆ ಮಾಡಿದರೆ ಅದು ಅತ್ಯಂತ ನೋವಿನ ಪ್ರಸಂಗವಾಗುತ್ತದೆ. ಆ ದೃಷ್ಟಿಯಿಂದ ಫಲಿತಾಂಶ ಹೆಚ್ಚಿನ ರೀತಿಯಲ್ಲಿ ಬರಬೇಕಾದರೇ, ಈ ವ್ಯವಸ್ಥೆಯನ್ನು ಅತ್ಯಂತ ಹೆಚ್ಚಿನ ರೀತಿಯಲ್ಲಿ ಮಾಡಿಕೊಡಬೇಕಾಗುತ್ತದೆ. ಈ ಶಾಲೆ ಎಂದರೆ ಒಂದು ದೇಗುಲ ಇದ್ದಹಾಗೆ. ಉಪಾ ಧ್ಯಾಯರು ಗುರುವಿಗೆ ಸಮಾನ, ಇದರಲ್ಲಿ ಬೇರೆ ಮಾತೇ ಇಲ್ಲ. ಗುರುವಿನ ಸ್ಥಾನಕ್ಕೆ ಅಪಖ್ಯಾತಿ ಬಾರದ ರೀತಿಯಲ್ಲಿ ನಮ್ಮ ಉಪಾಧ್ಯಾಯರುಗಳು ನಡೆದುಕೊಳ್ಳಬೇಕು. ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ನಮ್ಮ ಸರ್ಕಾರ ಅವರಿಗೆ ಎಲ್ಲಾ ರೀತಿಯ ಸಹಕಾರವನ್ನು ಕೊಡಬೇಕೆಂದು ಹೇಳುತ್ತೇನೆ. ಈ ವ್ಯಾಪಾರ ಕೇಂದ್ರಗಳು ಏನಿವೆ, ಇವುಗಳನ್ನು ನಾವು ನಿಜವಾಗಿಯೂ ನಿಲ್ಲಿಸದಿದ್ದರೆ, ನಮ್ಮ ಮಕ್ಕಳು ಹಣ ಕೊಟ್ಟು ಶಿಕ್ಷಣವನ್ನು ಕಲಿಯತಕ್ಕದ್ದು ಅತ್ಯಂತ ನೋವಿನ ಪ್ರಸಂಗವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಸರ್ಕಾರ ಅನೇಕ ಇಲಾಖೆಗಳನ್ನು ಸೃಷ್ಟಿ ಮಾಡಿದೆ. ಕೆಲವು ಇಲಾಖೆಗಳು ಬೇಕಾಗಿಲ್ಲವೆಂದು ನನಗೆ ಅನ್ನಿಸುತ್ತದೆ. ಇದನ್ನು ಬಹುಶಃ ಎಲ್ಲರೂ ಒಪ್ಪುತ್ತಾರೆಂದು ಕಾಣುತ್ತದೆ. ಈ ವಿಭಾಗಾಧಿಕಾರಿ ಡಿವಿಜನಲ್ ಕಮೀಷನರ್ ಇವರ ಅವಶ್ಯಕತೆ ಇದೆಯೇ? ಜಿಲ್ಲಾಧಿಕಾರಿ ಇದ್ದಮೇಲೆ ಡಿವಿಜನಲ್ ಕಮೀಷನರ್ ವ್ಯವಸ್ಥೆ ನಮಗೆ ಬೇಕಾಗಿಲ್ಲವೆಂದು ನನಗನ್ನಿಸುತ್ತದೆ. ಈ ವ್ಯವಸ್ಥೆ ಆರಾ ಮವಾಗಿ, ಒಂದು ರಾಜಭವನದಲ್ಲಿ ರಾಜ್ಯಪಾಲರು ಇದ್ದಹಾಗೆ. ಇದಕ್ಕೆ ಅಷ್ಟೇ ಗಂಭೀರತೆ ಇರತಕ್ಕಂಥಾದ್ದು. ಎಲ್ಲೋ ಅವರ ಮೂರು- ನಾಲ್ಕು ಜಿಲ್ಲೆಗಳಿಗೆ ಪ್ರವಾಸ ಮಾಡಿ ಬರುವುದು ಅಷ್ಟೆ. ಅದು ಬಿಟ್ಟರೆ ಬೇರೆ ಇಲ್ಲ. ಇದನ್ನು ತೆಗೆದರೆ ಸರ್ಕಾರಕ್ಕೆ ಉಳಿತಾಯವಾಗುತ್ತದೆ ಮತ್ತು ಸರ್ಕಾರ ಈ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಮಾಡಬೇಕು ; ಇದನ್ನು ತೆಗೆಯಬೇಕು ಎಂದು ನನ್ನ ಅನಿಸಿಕೆಯನ್ನು ವ್ಯಕ್ತಪಡಿಸುತ್ತೇನೆ.

ಮತ್ತೆ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತಿಗಳು ಬಂದ ಮೇಲೆ ಕ್ಷೇತ್ರ ಅಭಿವೃದ್ಧಿ ಅಧಿಕಾರಿ ಇವರು ಬೇಕಾಗಿಲ್ಲ. ನಮ್ಮ ಇವತ್ತಿನ ಹೊಸ ಪದ್ಧತಿ ಪ್ರಕಾರ ಅವರಿಗೆ ಕೆಲಸವೇ ಇಲ್ಲ. ಕಾರ್ಯ ನಿರ್ವಾಹಕ ಅಧಿಕಾರಿಗೆ ಎಲ್ಲವನ್ನೂ ಕೊಟ್ಟಿದ್ದಾರೆ ಚೆಕ್‌ಗೆ ಸೈನ್ ಮಾಡು ವಂಥಾದ್ದು, ಮತ್ತೆ ಬೇರೆ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ಅಂದ ಮೇಲೆ ಈ ಕ್ಷೇತ್ರಾಭಿವೃದ್ಧಿ ಅಧಿಕಾರಿ ಖಂಡಿತ ಬೇಕಾಗಿಲ್ಲ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಾನು ಶ್ರೀಮಾನ್ ಸಿದ್ದರಾಮಯ್ಯನವರ ಗಮನಕ್ಕೆ ತರುತ್ತಿದ್ದೇನೆ. ತಾವು ಹಣಕಾಸಿನ ಸಚಿವರಾಗಿದ್ದೀರಿ. ಹಣ ಉಳಿಸಬೇಕು, ಅದನ್ನು ಬೇರೆಯದಕ್ಕೆ ಖರ್ಚು ಮಾಡಬೇಕು. ಯಾವ ಯಾವ ಇಲಾಖೆಯಲ್ಲಿ, ಈ ರೀತಿ ಹೊರೆಯಾಗಿರತಕ್ಕ ಅಧಿಕಾರಿಗಳು ಇದ್ದಾರೆ ಅಥವಾ ಅಧಿಕಾರ ಇದೆ, ಆ ಅಧಿಕಾರದ ಬಗ್ಗೆ ನೀವು ಸಚಿವ ಸಂಪುಟದಲ್ಲಿ ಕುಳಿತುಕೊಂಡು ಚರ್ಚೆ ಮಾಡಿ, ಅವರನ್ನು ತೆಗೆಯಿರಿ. ಲೋಕೋಪಯೋಗಿ ಇಲಾಖೆಯಲ್ಲಿ ಯಾವುದನ್ನು ತೆಗೆಯಬೇಕು, ಕಂದಾಯ ಇಲಾಖೆಯಲ್ಲಿ ಯಾವುದನ್ನು ತೆಗೆಯಬೇಕು ಹೀಗೆ ವಿವಿಧ ಇಲಾಖೆಯಲ್ಲಿ ಯವುದು ಸಮಂಜಸವಿಲ್ಲ, ಅಂತಹ ಅಧಿಕಾರಿಗಳನ್ನು ಯಾವರೀತಿ ತೆಗೆಯಬೇಕೆಂಬ ಬಗ್ಗೆ ಒಂದು ಸ್ಪಷ್ಟವಾದ ತೀರ್ಮಾನ ತೆಗೆದುಕೊಳ್ಳಿ. ಇದಕ್ಕೆ ಒಂದು ಸೂತ್ರ ಹಾಕಿ. ಸುಮ್ಮನೆ, ಯಾವುದೋ ಕಾಲ, "ಅಪ್ಪ ಹಾಕಿದ ಆಲದ ಮರ" ಎಂಬಂತೆ ಅವತ್ತಿನಿಂದ ಇವತ್ತಿನವರೆಗೂ ಒಂದೇಸಮಕ್ಕೆ ಹಾಕಿಕೊಂಡು ಹೋಗುವ ಬದಲು, ಇದನ್ನು ವ್ಯವಸ್ಥಿತವಾಗಿ ಬದಲಾವಣೆ ಮಾಡಿದರೆ ಒಳ್ಳೆಯದು. ಈಗ ನಾವು ತಾಲ್ಲೂಕು ಪಂಚಾಯ್ತಿಗಳಿಗೆ ಹೋಗುತ್ತಾ ಇದ್ದೇವೆ. ಇವತ್ತು ಬಿ.ಡಿ.ಓ., ಕ್ಷೇತ್ರಾಭಿವೃದ್ಧಿಕಾರಿಗಳು ಇದ್ದಾರೇ, ಅವರಿಗೆ ಏನೇನೂ ಕೆಲಸ ಇಲ್ಲವೇ ಇಲ್ಲ. ಇದು ಬಹಳ ಗಂಭೀರವಾಗಿರತಕ್ಕಂತಾದ್ದು ಈಗ್ಗೆ 2 ತಿಂಗಳಿಂದೀಚೆಗೆ ಅವರಿಗೆ ಸಂಪೂರ್ಣವಾಗಿ ಯಾವ ಕೆಲಸವೂ ಇಲ್ಲ. ಇಂತಹ ಹುದ್ದೆಗಳನ್ನು ಬದಲಾವಣೆ ಮಾಡುವಂತಾದ್ದು ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ತಮಗೆ ಹೇಳುತ್ತಿದ್ದೇನೆ, ಇಲ್ಲಿ ಪೋಲೀಸ್ ಠಾಣೆಗಳ ಬಗ್ಗೆ ಅನೇಕಬಾರಿ ಹೇಳಿದ್ದೇನೆ. ಪೋಲೀಸ್ ಠಾಣೆಗಳ ವ್ಯವಸ್ಥೆ, ಇದು ಜನರ ಶತ್ರುಗಳು ಎನ್ನುವ ರೀತಿಯಾಗಿದೆ. ಪೋಲೀಸ್ ಠಾಣೆಗಳು ಜನರಿಗೆ ರಕ್ಷಣೆ ಕೊಡಬೇಕು, ಆದರೆ, ಈ ಠಾಣೆಗಳೇ ಜನರ ಶತ್ರುಗಳು ಎನ್ನುವ ಭಾವನೆ ಇತ್ತೀಚೆಗೆ ನಿರ್ಮಾಣವಾಗಿದೆ. ಇದನ್ನು ಹೋಗಲಾಡಿಸತಕ್ಕ ವ್ಯವಸ್ಥೆ ಪರಿಣಾಮಕಾರಿಯಾಗಿ ಆಗಬೇಕು. ಯಾವುದೇ ಜನರು ಪೋಲೀಸ್ ಠಾಣೆಗೆ ಹೋದರೇ, ಈ ಪೋಲೀಸರ ದರ್ಶನ ಇದೆಯಲ್ಲಾ, ಅವರ ಕಣ್ಣು, ಅವರ ಮೂಗು, ಅವರ ಬಾಯಿ, ಅವರ ಧ್ವನಿ ಇದು ಬದಲಾವಣೆಯಾಗಿಬೇಕು. ಆದರೆ, ಅಲ್ಲಿಗೆ ಹೋದತಕ್ಷಣ ಯಮದರ್ಶನ ವಾಗುತ್ತದೆ. ನಮಗೆ ಅನ್ಯಾಯವಾಗಿದೆಯೆಂದು ಯಾರು ಮನವಿ ಕೊಡುವುದಕ್ಕೆ ಹೋಗುತ್ತಾನೆ, ಅವನಿಗೆ ಯಮದರ್ಶನವಾದಂತೆ. ಅವನಿಗೆ ಹೃದಯ ಏನಾದರೂ ಹೆಚ್ಚುಕಡಿಮೆ ಇದ್ದರೆ, ಅವನು ಅಲ್ಲಿಗೆ ಹೋಗಲೇಬೇಕು. ಬೇರೆ ಮಾತೇ ಇಲ್ಲ. ಅಥವಾ ಅವನ ಹೃದಯ ಘಟ್ಟಿ ಇದ್ದೂ ಕೂಡ 4 ಸಾರಿ ಪೋಲೀಸ್ ಠಾಣೆಗೆ ಹೋದರೆ, ಅವನ ಹೃದಯವೂ ಹೆಚ್ಚುಕಡಿಮೆಯಾಗಿ ಹೋಗುತ್ತದೆ. ಇದು ಸತ್ಯ. ಇದಕ್ಕೆ ಜಾತೀಯ ಲೇಪನ ಮಾಡುವುದು ಬೇಕಾಗಿಲ್ಲ. ಈ ಅಧಿಕಾರಿ ನನ್ನ ಜಾತಿಯವನು, ಇವನನ್ನು ಉಳಿಸಬೇಕು. ಇದನ್ನು

ನಾವೆಲ್ಲರೂ ಬಿಟ್ಟುಬಿಡೋಣ; ಒಮ್ಮತದಿಂದ ತೀರ್ಮಾನ ಮಾಡೋಣ ಎಂಬುದು ಇವರಿಗೆ ಬೇಡ. ಈ ಇಲಾಖೆ ಅತ್ಯಂತ ಪ್ರಮುಖವಾದ ಇಲಾಖೆ. ಈ ಇಲಾಖೆಗೆ ಶಕ್ತಿ ಬರಬೇಕಾದರೆ, ಜಾತಿ ಆಧಾರದ ಮೇಲೆ ಅಧಿಕಾರಿಗಳಿಗೆ ವಿನಾಯಿತಿ ಕೊಡುವುದನ್ನು ಪ್ರಪ್ರಥಮವಾಗಿ ಬಿಡಬೇಕು. ಅವರು ಎಂತಹ ಅಧಿಕಾರಿಯೇ ಆಗಿರಲಿ. ಯಾವ ಅಧಿಕಾರಿ ಅಪ್ರಮಾಣಿಕನಾಗಿ ನಡೆದು, ಮೇಲ್ನೋಟಕ್ಕೆ ಅಪ್ರಮಾಣಿಕ ಎಂದು ಕಂಡರೆ, ಅಂತಹವರನ್ನು ನಾವೆಲ್ಲರೂ, ಇವನು ನಮ್ಮ ಜಾತಿಯವರು, ಇವರನ್ನು ಹೇಗಾದರೂ ಮಾಡಿ ಉಳಿಸಬೇಕೆಂದು ಹೋಗತಕ್ಕ ವ್ಯವಸ್ಥೆ ಇದೆಯಲ್ಲಾ ಇದು ಮೊದಲು ಹೋಗಬೇಕು. ಆ ರೀತಿ ಹೋಗಲಿಲ್ಲವೆಂದು ಹೇಳಿದರೆ, ಕಷ್ಟವಾಗುತ್ತದೆ. ಕರ್ನಾಟಕದಲ್ಲಿ ಪೋಲೀಸ್ ಇಲಾಖೆಗೆ ಒಂದು ಹೆಸರು ಇದೆ. ಆ ಹೆಸರು ಈಗ ಬಹಳ ಕೆಟ್ಟ ಹೆಸರಾಗಿ ಬರುತ್ತಿದೆ. ಮಾನ್ಯ ಅಧ್ಯಕ್ಷರೇ, ಇವತ್ತೇನು ಲಾಕಪ್ ಸಾವು ಆಗುತ್ತಿವೆ, ಇದು ತಮಗೂ ಗೊತ್ತಿದೆ. ಲಾಕಪ್ಪಿನಲ್ಲಿ ನೇಣು ಹಾಕಿಕೊಂಡ ಸತ್ತ ಎಂದು ಹೇಳುತ್ತಾರೆ. ಅದು ಹೇಗೇ ಸಾಯುವುದಕ್ಕೆ ಸಾಧ್ಯ? ಲಾಕಪ್ಪಿನಲ್ಲಿ ಒಂದು ಚೈನು ಇರುವುದಿಲ್ಲ, ಅಲ್ಲ, ಹಗ್ಗ ಹಾಕುವುದಕ್ಕೆ ಒಂದು ಚೈನು ಇರುವುದಿಲ್ಲ, ಲಾಕಪ್ಪಿನೊಳಗೆ ಒಬ್ಬ ಖೈದಿಯನ್ನು ಕಳುಹಿಸುವಾಗ, ಅವನಿಗೆ ಚಡ್ಡಿ ಇರುವುದಿಲ್ಲ, ಬನಿಯನ್ ಇರುವುದಿಲ್ಲ, ಏನೂ ಇರುವುದಿಲ್ಲ. ಅವನ ಮೈಮೇಲೆ ಜನಿವಾರ, ಶಿವದಾರ ಏನೇನೂ ಇರುವುದಿಲ್ಲ. ಇನ್ನೆಲ್ಲಿ ಅವನು ನೇಣು ಹಾಕಿಕೊಳ್ಳುತ್ತಾನೆ? ಆದರೆ, ಲಾಕಪ್ ಸಾವು, ಇದು ಬರೀ ನಾಟಕ, ನಾಟಕೀಯ. ಪೋಲೀಸಿನವರೇ ವ್ಯವಸ್ಥಿತ ರೂಪದಲ್ಲಿ ಒದ್ದು ಅಥವಾ ಅವರು ಮಾಡತಕ್ಕಂಥ ಮೂರನೇ ಮಥೆಡ್ ಏನಿದೆ, ಆ ಕ್ರೌರ್ಯದಿಂದ ಅವನು ಸಾಯುತ್ತಾನೆ. ಕೊನೆಗೆ, ಅಂತಿಮವಾಗಿ ಲಾಕಪ್ ಸಾವು ಎಂದು ವ್ಯವಸ್ಥಿತವಾಗಿ, ನಾಟಕೀಯವಾಗಿ ಬರೆದು, ಇದು ಲಾಕಪ್ ಸಾವು ಎಂದು ನಿರ್ಮಾಣ ಮಾಡುತ್ತಾರೆ. ಇದು ಬೇಡ. ನಾವು ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕು, ಈ ಪೋಲೀಸ್ ಸ್ಟೇಷನ್‌ಗಳನ್ನು ಬಲಯುತವಾಗಿ ಮಾಡಬೇಕು. ಇವತ್ತು ಪೋಲೀಸ್ ಸ್ಟೇಷನ್‌ನಲ್ಲಿ ರೌಡಿಗಳು ಜಾಸ್ತಿಯಾಗಿದ್ದಾರೆ. ಈ ರೌಡಿಗಳು ಸ್ಟೇಷನ್‌ಗೆ ಬಂದರೆ, ತಾವು ನೋಡಬೇಕು. ಇವರು ಆನಂದವಾಗಿ ಕುರ್ಚಿಮೇಲೆ ಕುಳಿತುಕೊಂಡು ಮಾತನಾಡುತ್ತಾರೆ. ಈ ಸಂಭಾಷಣೆ, ಸರಸಸಲ್ಲಾಪಗಳು, ಪ್ರೇಮ ಸಲ್ಲಾಪಗಳು ನಡೆಯುತ್ತವೆ.

ಅಧ್ಯಕ್ಷರು :- ರೌಡಿಗಳಿಗೆ ಏನಾದರೂ ಯೂನಿಫಾರಂ ಇರುತ್ತದೆಯೇ?

ಶ್ರೀ ವಾಟಾಳ್ ನಾಗರಾಜ್ :- ಅವರಿಗೆ ಸಮವಸ್ತ್ರ ಬೇಕಾಗಿಲ್ಲ, ಅಲ್ಲಿಯ ವ್ಯವಸ್ಥೆ ಈ ರೀತಿ ಇದೆ.

ಡಾ. ಎಂ. ಪಿ. ಕರ್ಕಿ :- ಪೋಲೀಸ್ ಸ್ಟೇಷನ್‌ಗೆ ಹೋದರೆ, ರೌಡಿಗಳೆಲ್ಲರೂ ಅಲ್ಲಿಯೇ ಸಿಗುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ತಮಗೆ ಸುಮ್ಮನೆ ಉದಾಹರಣೆಗೆ ಹೇಳುತ್ತೇನೆ. ಯಾರದೋ ನಿವೇಶನ ಅಥವಾ ಯಾರದೋ ಮನೆ ಖಾಲಿ ಮಾಡಿಸಬೇಕು.

ನ್ಯಾಯಾಲಯದ ಆಜ್ಞೆ ಇರುತ್ತದೆ. ಪೋಲೀಸ್ ಸ್ಟೇಷನ್‌ಗೆ ಹೋದರೆ ನ್ಯಾಯ ದೊರಕು ವುದಿಲ್ಲವೆಂದು, ಯಾರೋ ಒಬ್ಬ ರೌಡಿಯನ್ನು ಕರೆದುಕೊಂಡು ಬಂದು, ನೀನೇ ಬಿಡಿಸಿಕೊಡು ಎಂದು ಹೇಳಿದರೆ, ಮನೆಯಿಂದ ಒದ್ದು ಹೊರಗೆ ಹಾಕುತ್ತಾನೆ. ಆಮೇಲೆ ಪೋಲೀಸರು ಹೇಳುತ್ತಾರೆ, ದಯವಿಟ್ಟು ಬಿಡಿ, ಹೊರಗೆ ಕಳುಹಿಸಿದರಲ್ಲಾ. ಈ ಕೆಲಸಕ್ಕೆ ನಾವು ಬಂದಿದ್ದರೂ ಆಗುತ್ತಾ ಇರಲಿಲ್ಲ ಎಂದು ಪೋಲೀಸಿನವರೇ ಒಪ್ಪಿಕೊಳ್ಳುತ್ತಾರೆ. ಈ ಪರಿಸ್ಥಿತಿ ನಿರ್ಮಾಣವಾಗಿದೆ. ಪೋಲೀಸ್ ಇಲಾಖೆಯ ಮೇಲೆ ಜವಾಬ್ದಾರಿಯುತವಾದ ಕೆಲಸ ಇದೆ. ಕರ್ನಾಟಕದಲ್ಲಿ ಉನ್ನತಮಟ್ಟದ, ಶ್ರೇಷ್ಠಮಟ್ಟದ ಅಧಿಕಾರಿಗಳೂ ಇದ್ದಾರೆ, ನಾನು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಆ ಪರಿಸ್ಥಿತಿ ನಿರ್ಮಾಣ ವಾಗಿದೆ. ಮತ್ತು ನೀವು ಉನ್ನತವಾದ ಅಧಿಕಾರಿಗಳಿಗೆ ಪೋಷಣೆ ಮಾಡುತ್ತಿದ್ದೀರಿ. ಮೇಲಿನ ಐ.ಸಿ.ಎಸ್. ಈ ವರ್ಗದ ಜನರಿಗೆ ಪ್ರೋಷಣೆ ಕೊಡುತ್ತೀರಿ. ಅದೇ ಕೆಳಗಡೆ ಇರತಕ್ಕ ಎಸ್.ಐ. ಕಾನ್‌ಸ್ಟೇಬಲ್ಸ್ ಈ ವರ್ಗವನ್ನು ಗುಲಾಮರ ರೀತಿ ಕಾಣುತ್ತಿದ್ದೀರಿ. ಇವರಿಗೆ ಸರಿಯಾದ ಮನೆಗಳನ್ನು ಕೊಟ್ಟಿಲ್ಲ, ಸರಿಯಾದ ವಸ್ತ್ರಗಳನ್ನು ಕೊಟ್ಟಿಲ್ಲ, ಸರಿಯಾದ ಬೂಟ್ಸ್ ಕೊಟ್ಟಿಲ್ಲ, ಸರಿಯಾದ ಕಾಲುಚೀಲ ಕೊಟ್ಟಿಲ್ಲ ಇವರು ಏನಾಗಬೇಕು. ಇವರಿಗೆ ಸರಿಯಾಗಿ ರಜೆ ಭತ್ಯೆ ಕೊಡುತ್ತಾ ಇಲ್ಲ. ಚಳುವಳಿ ಮುಂತಾದ ಕಡೆ ಹೋದಾಗ, ಇವರಿಗೆ ಸರಿಯಾಗಿ ಭತ್ಯೆ ಕೊಡುತ್ತಾ ಇಲ್ಲ. ಇವರ ಪರಿಸ್ಥಿತಿಯನ್ನು ನೋಡಿದರೆ, ಒಂದು ತರಹ ನರಕವಾಗಿದೆ. ಇವರ ಸಂಬಳ ಸಾರಿಗೆ ಕಡಿಮೆ, ಕೆಲಸ ಮಾತ್ರ 24 ಗಂಟೆ. ಎಷ್ಟು ಹೀನಾಯವಾಗಿ ಇವರು ಜೀವನ ಸಾಗಿಸುತ್ತಿದ್ದಾರೆಂದರೆ, ಇದು ನಿಜವಾಗಿಯೂ ಅತ್ಯಂತ ನೋವಿನ ಪ್ರಸಂಗ. ಕೊಲೆಗಳಾಗುತ್ತಿವೆ, ಸುಲಿಗೆಗಳಾ ಗುತ್ತಿವೆಯೆಂದು ತಾವು ಹೇಳಿದಿರಿ. ನಿಮ್ಮ ತಾಲ್ಲೂಕಿನ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದೀರಿ. ಇದು ನಡೆಯುತ್ತಾ ಇದೆ. ಇವೆಲ್ಲಾ ನಿಲ್ಲಬೇಕಾದರೆ, ಪೋಲೀಸ್ ಇಲಾ ಖೆಯಲ್ಲಿ ದಕ್ಷತೆ ಇರಬೇಕು. ದಕ್ಷತೆಯ ದೃಷ್ಟಿಯಿಂದ ಯಾರ ಮೂಲಾಜಿಗೂ ಒಳ ಗಾಗದೆ, ಯಾವ ರಾಜಕಾರಣಕ್ಕೂ ಒಳಗಾಗದೇ, ಯಾವ ಜಾತೀಯ ಪ್ರಭಾವಕ್ಕೂ ಒಳಗಾಗದೇ, ಪರಿಣಾಮಕಾರಿ ಕ್ರಮ ತೆಗೆದುಕೊಳ್ಳಬೇಕು. ಯಾರು ನಿಜವಾದ, ದಕ್ಷ ವಾದ ಅಧಿಕಾರಿ ಇದ್ದಾರೆ, ಅವರಿಗೆ ಸರಿಯಾದ, ವ್ಯವಸ್ಥಿತವಾದ ರೀತಿಯಲ್ಲಿ ಇಡ ಬೇಕು. ನನಗನ್ನಿಸುತ್ತದೆ, ಪೋಲೀಸ್ ಇಲಾಖೆಯನ್ನು ಸರಿಪಡಿಸಬೇಕು ; ಇದನ್ನು ಸರಿಪ ಡಿಸತಕ್ಕ ವ್ಯವಸ್ಥೆಯಾಗಬೇಕು. ನಾನು ತಮಗೆ ಹೇಳುತ್ತಿದ್ದೇನೆ. ಹಿಂದೆ ರಾಜ್ಯಪಾಲರಾಗಿದ್ದ, ಧರ್ಮವೀರರು ಒಂದು ವರದಿ ಕೊಟ್ಟಿದ್ದಾರೆ, ಆ ವರದಿ ಏನಾಯಿತು? ಆ ವರದಿಯ ಅಂಶವನ್ನೂ ತಾವು ಕಾರ್ಯರೂಪಕ್ಕೆ ತಂದಿಲ್ಲ. ನಿಮ್ಮ ಪೋಲೀಸ್ ಸ್ಟೇಷನ್ ದೃಶ್ಯ ಹೇಗಿದೆಯೆಂದರೆ, ಸ್ಟೇಷನ್‌ಗೆ ಹೋದರೆ, ಅಲ್ಲಿ ಕೊಳೆತು ನಾರುವ ಲಾಕಪ್‌ಗಳು. ಹಳೆಯ ಟೈರು, ಟ್ಯೂಬುಗಳನ್ನು ತುಂಬಿ ಇಟ್ಟಿರುತ್ತಾರೆ. ಮತ್ತು ಕಳ್ಳಭಟ್ಟಿಯ ವಸ್ತುಗಳು, ಹಳೆಯ ಸೈಕಲ್ಲುಗಳು, ಹಳೆಯ ಕಾರುಗಳಿರುತ್ತದೆ. ಸುಮ್ಮನೆ ಒಂದು ರೀತಿ ಪೋಲೀಸ್ ಸ್ಟೇಷನ್ ಎಂದು ನೆನೆಸಿಕೊಂಡರೆ ಸಾಕು ಅಲ್ಲಿಯ ವಾತಾವರಣ ಕಣ್ಮುಂದೆ ಬರುತ್ತದೆ ಒಂದುಕಡೆ ಕಳ್ಳಮಾಲುಗಳ ದೃಶ್ಯ ಮತ್ತೊಂದು ಕಡೆ ಪೋಲೀಸರ ಯಮದರ್ಶನ ಇನ್ನೊಂದುಕಡೆ ಇವುಗಳ ಅವ್ಯವಸ್ಥೆ. ಇವೆಲ್ಲವನ್ನೂ ನೋಡಿದಾಗ, ಮನಸ್ಸಿಗೆ ಏನಾಗುತ್ತದೆ, ಆ ಮನುಷ್ಯ ನಿಜವಾಗಿಯೂ ಬಂದ ನೋವನ್ನು ಅಲ್ಲಿ ಹೇಳಿಕೊಳ್ಳುವುದೇ ಬೇಡ, ಹೊರಟುಬಿಡೋಣ ಎಂದು ಹಿಂದಕ್ಕೆ ಹೋಗುತ್ತಾನೆ. ನನ್ನ ನೋವನ್ನು ಇಲ್ಲಿ ಹೇಳಿಕೊಂಡರೆ, ಇಲ್ಲಿ ಏನಾಗುತದೋ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ

ಪರಿಸ್ಥಿತಿ ಬದಲಾವಣೆಯಾಗಬೇಕು. ಇದರ ಬಗ್ಗೆ ನೀವು ಸಮಗ್ರವಾಗಿ ಚಿಂತನೆ ಮಾಡಬೇಕು. ನೀವು ಎಲ್ಲಾ ವಿರೋಧಪಕ್ಷಗಳ ಮುಖಂಡರನ್ನು ಕರೆಯಿರಿ. ನಾವು ಯಾರೂ ನಿಮಗೆ ಅಡ್ಡಿ ಬರುವುದಿಲ್ಲ. ಎಲ್ಲರೂ ಕುಳಿತುಕೊಂಡು, 1-2-3 ಎಂದು ಯಾವ ಯಾವ ರೀತಿಯಿಂದ ಈ ಇಲಾಖೆಯನ್ನು ಎಷ್ಟು ಪರಿಣಾಮಕಾರಿಯಾಗಿ ಮಾಡಬಹುದು, ಎಷ್ಟು ಚೆನ್ನಾಗಿ ಮಾಡಬಹುದು ಎನ್ನುವ ರೀತಿಯಲ್ಲಿ ತಾವು ಹೋಗಿ. ಅದನ್ನು ಬಿಟ್ಟು, ಇವ ನಮ್ಮ ನೆಂಟ ಬಂದಿದ್ದಾನೆ, ಇವನನ್ನು ಪೋಲೀಸ್ ಕಮೀಷನರ್ ಮಾಡಿ, ನಾವು 15 ಜನ ಎಂ.ಎಲ್.ಎ.ಗಳಿದ್ದೇವೆ, ನಿಮಗೆ ಬೆಂಬಲ ಕೊಡುತ್ತೇವೆ ಮತ್ತು ಇಂತಹ ಜಾತಿಯವರು ಎಂದು ಹೇಳಿ, ಇವನನ್ನು ಹಾಕಿ ಎಂದು ಹೇಳುವುದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಆಮೇಲೆ, ಪ್ರತಿಸಾರಿ ಮುಖ್ಯಮಂತ್ರಿ ಬದಲಾವಣೆ ಯಾದಾಗ, ಕಮೀಷನರ್ ಬದಲಾವಣೆ, ಡಿ.ಜಿ. ಬದಲಾವಣೆ, ಐ.ಜಿ. ಬದಲಾವಣೆ, ಜಿಲ್ಲೆಗಳ ಎಸ್.ಪಿ.ಗಳು ಬದಲಾವಣೆ. ಈರೀತಿಯ ಆದರೆ ಸಾಧ್ಯವೇ? ಇದು ಖಂಡಿ ತವಾಗಿಯೂ ಸಾಧ್ಯವಿಲ್ಲ. ಒಬ್ಬರು ಬದಲಾವಣೆಯಾದ ನಂತರ, ಒಬ್ಬೊಬ್ಬರನ್ನೂ ಬದಲಾವಣೆ ಮಾಡುತ್ತಾ ಹೋದರೆ, ನಾವು ಎಲ್ಲಿಗೆ ಹೋಗುತ್ತೇವೆ, ಯಾವ ಪರಿಸ್ಥಿತಿಗೆ ಹೋಗುತ್ತೇವೆ? ನಾನು ನಿಜವಾಗಿಯೂ ಹೇಳುತ್ತೇನೆ, ನಮ್ಮಲ್ಲಿ ಉನ್ನತ ಅಧಿಕಾರಿಗಳು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿ, ಇಡೀ ದೇಶಕ್ಕೇ ಹೆಚ್ಚಿನ ಶಕ್ತಿಯನ್ನು ಕೊಡತಕ್ಕ ಅಧಿಕಾರಿಗಳು ಇದ್ದಾರೆ. ಆದರೆ, ನಮ್ಮಲ್ಲಿ ಈ ವ್ಯವಸ್ಥೆ ಬದಲಾವಣೆ ಯಾಗದಿದ್ದರೆ, ನನಗನಿಸುತ್ತದೆ ಇದು ಅತ್ಯಂತ ನೋವಾಗುತ್ತದೆ, ಇದು ನೋವಿನ ಪ್ರಸಂಗ. ಈ ವ್ಯವಸ್ಥೆಯನ್ನು ಬದಲಾವಣೆ ಮಾಡುವುದಕ್ಕೆ, ಪೋಲೀಸ್ ವ್ಯವಸ್ಥೆ ಬದಲಾವಣೆಯಾಗಬೇಕು. ಹೊಸ ಆಧುನಿಕವಾದ ಅಸ್ತ್ರಾಸ್ತ್ರಗಳನ್ನು ಕೊಡಬೇಕು. ಎಲ್ಲಾ ಸ್ಟೇಷನ್‌ಗಳಲ್ಲೂ, ಯಾವುದೋ ಕಾಲದ, ಬಂಧೂಕುಗಳನ್ನು ವಸ್ತು ಪ್ರದರ್ಶನಕ್ಕೆ ಇಟ್ಟಹಾಗೆ ಇಟ್ಟಿದ್ದೀರಿ. ಆ ಬಂಧೂಕುಗಳು ಒಂದೂವರೆ ಮೈಲಿ ಉದ್ದ ಇವೆ. ಅವನು ಯಾವರೀತಿ ಅದನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ನಾಚಿಕೆಯಾಗುತ್ತದೆ, ಆ ಬಂದೂಕಗಳಿಂದ ಗುಂಡು ಹಾರಿಸಿದರೆ, ಅದರಲ್ಲಿರತಕ್ಕ ಗುಂಡು ಹೋಗುವುದೇ ಇಲ್ಲ. ಅವನು ಅದನ್ನು ಕೈಯಲ್ಲಿ ತೆಗೆದುಕೊಂಡು, ಗುಂಡು ಹೊಡೆಯಬೇಕು, ಆದರೆ ಬಂದೂಕಿನಿಂದ ಹೋಗುವುದಿಲ್ಲ. ಇಂತಹ ಬಂದೂಕುಗಳನ್ನು ಕೊಟ್ಟು, ರಾಜ್ಯದಲ್ಲಿ ಶಾಂತಿಯನ್ನು ಕಾಪಾಡುತ್ತೇವೆ, ಭಯೋತ್ಪಾದನೆಯನ್ನು ಕಾಪಾಡುತ್ತೇವೆ ಎಂದು ಹೇಳಿದರೆ ಸಾಧ್ಯವಿಲ್ಲ. ನನಗನಿಸುತ್ತದೆ, ನೀವು ಮೊದಲು ಮಾಡಬೇಕಾದ ಕೆಲಸ...

ಶ್ರೀ ಚಂದ್ರಪ್ಪ :— ಸನ್ಮಾನ್ಯ ಅಧ್ಯಕ್ಷರೇ, ಅವುಗಳನ್ನು ಆಯುಧಪೂಜೆಗೆ ಮಾತ್ರ ಇಟ್ಟಿದ್ದಾರೆನ್ನುವುದು ಮಾನ್ಯ ವಾಟಾಳ್ ನಾಗರಾಜರಿಗೆ ಗೊತ್ತಿಲ್ಲವೆಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ :— ನಿಜ. ನಾನು ಇಲ್ಲಿ ಪಕ್ಷದ ಬಗ್ಗೆ ಮಾತನಾಡುತ್ತಾ ಇಲ್ಲ. ತಾವು ಪೋಲೀಸ್ ಸ್ಟೇಷನ್ ಒಳಗಡೆ ನೋಡಿರಬೇಕು. ಒಂದೊಂದು ಸ್ಟೇಷನ್‌ನಲ್ಲೂ 20 ಬಂದೂಕುಗಳನ್ನು ಇಟ್ಟಿರುತ್ತಾರೆ. ಅದಕ್ಕೆ ಚೈನು ಹಾಕಿ, ಬೀಗ ಹಾಕಿರುತ್ತಾರೆ. ಆ ಬೀಗ ಯಾವುದೋ ಒಬ್ಬ ಕಾನ್‌ಸ್ಟೇಬಲ್ ಹತ್ತಿರ ಇರುತ್ತದೆ ಅವನು, ತಿಂಡಿಗೆ ಹೋದ ಎಂದು ಇಟ್ಟುಕೊಳ್ಳಿ. ಆಗ ಎಲ್ಲೋ, ಏನೋ ಗಲಾಟೆಯಾಗುತ್ತದೆ.

ಅಧ್ಯಕ್ಷರು :- ಪೋಲೀಸ್ ಸ್ಟೇಷನ್‌ಗೆ ನಿಮ್ಮ ನಿಕಟ ಸಂಪರ್ಕ ಏನಿದೆ, ಅದರಿಂದ ಸದನಕ್ಕೆ ಎಷ್ಟು ಪ್ರಯೋಜನವಾಗುತ್ತಿದೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅವರ ಅನುಭವದ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ಅನುಭವ, ಅದು ಸತ್ಯ. ಏಕೆಂದರೆ ತಾವು ನನ್ನ ಜೊತೆಯಲ್ಲಿ ಬಂದರೆ ತಮ್ಮಗಳಿಗೂ ಅದರ ಅನುಭವ ಮಾಡಿಸಬಹುದು ತಾವು ಬರುವುದಕ್ಕೆ ತಯಾರಿಲ್ಲ. ನನ್ನನ್ನು ಸಾವಿರಾರು ಸಾರಿ ಬಂಧಿಸಿದ್ದಾರೆ ತಮಗೆ ಗೊತ್ತಿದೆ. ನಾನು ತಮಗೆ ಹೇಳುತ್ತೇನೆ. ನನ್ನನು ನಮ್ಮ ಅಲಸೂರು ಗೇಟ್ ಪೋಲೀಸ್ ಠಾಣೆಯಲ್ಲಿ ಒಂದು ಸಾರಿ ನನ್ನನ್ನು ಬಂಧಿಸಿದ್ದರು. ಮಾನ್ಯ ಗೋಪಾಲಗೌಡರು ಆಗ ನಮ್ಮನ್ನೆಲ್ಲಾ ಬಿಡಿಸಿಕೊಂಡು ಬಂದರು. ಆಗ ನಮ್ಮನ್ನು ಲಾಕಪ್‌ನಲ್ಲಿ ಇಡುತ್ತಿದ್ದರು. ಲಾಕಪ್ ಬಿಟ್ಟು ಹೊರಗೆ ಕೂರಿಸುತ್ತಿರಲಿಲ್ಲ. ನಾನು ಯಾವಾಗ ಕಾರ್ಪೋರೇಟರ್ ಆದೆ ಆಗ ನನಗೆ ಲಾಕಪ್ ಬಿಟ್ಟು ಹೊರಗೆ ಕೂರಿಸಿದ್ದರು. ನನಗೆ ಸ್ವಲ್ಪ ಬಡ್ತಿ ಸಿಕ್ಕಿತು. ನಾನು ಶಾಸಕನಾದ ಮೇಲೆ ಸ್ವಲ್ಪ ಸ್ನೇಹದಿಂದ ಮಾತನಾಡಲು ಕಲಿತರು. ಅಲ್ಲಿಯವರೆಗೂ ನಾವು ಲಾಕಪ್‌ನವರೇ. ಇನ್ನು ಸಾಮಾನ್ಯ ಜನಗಳ ಗತಿ ಏನು? ಅವರಿಗೆ ನ್ಯಾಯ ನೀತಿ ಏನೂ ಇಲ್ಲ. ನೀವು ಚಳುವಳಿ ಮಾಡಿದರೂ ಒಂದೇ ಜನರ ಪರ ಹೋರಾಟಮಾಡಿದರೂ ಒಂದೇ? ಲಾಕಪ್ಪೇ. ಅದರಲ್ಲಿ ಏನೂ ಅನುಮಾನ ಇಲ್ಲ. ಎಂ.ಎಸ್ ಕೃಷ್ಣನ್ ಆಗಲಿ ಉಪಾಧ್ಯಾಯರು ಆಗಲಿ ಅವರನ್ನು ನಾವು ಇವತ್ತು ನೆನೆದುಕೊಳ್ಳಬೇಕು. ಸೂರ್ಯನಾರಾಯಣರಾವ್ ಆಗಲಿ ಅವರದ್ದೆಲ್ಲಾ ವರ್ಷಗಟ್ಟಲೇ ಲಾಕಪ್ ಜೀವನವೇ. ನಾನು ತಮಗೆ ಹೇಳುತ್ತೇನೆ ನನ್ನನ್ನು ಅಲಸೂರು ಗೇಟು ಲಾಕಪ್ ನೊಳಗೆ ಒಂದು ಸಾರಿ ಹಾಕಿದ್ದರು. ನಾನು ಖಾಸಗಿಯಾಗಿ ಈ ವಿಷಯ ಎಲ್ಲೋ ಒಂದು ಸಾರಿ ಹೇಳಿದ್ದೆ. ಎಂದು ಕಾಣುತ್ತದೆ. ಆ ಲಾಕಪ್‌ನಲ್ಲಿ ಕೊಯಮತ್ತೂರಿನವರು ಯಾರೋ ಒಬ್ಬ ಅಲ್ಲಿದ್ದ. ಅವನು ಯಾರು ಎಂಬುದು ನಮಗೆ ಗೊತ್ತಿಲ್ಲ. ಆಗ ನನ್ನನ್ನು ಅವರ ಜೊತೆಯಲ್ಲಿ ಲಾಕಪ್‌ನಲ್ಲಿ ಹಾಕಿಬಿಟ್ಟರು. ನಾನು ಆಗ ನೀವು ಯಾರು ಎಂದು ಕೇಳಿದೆ. ಅವರು ಇಬ್ಬರು ಇದ್ದರು.

ಶ್ರೀ ಎಸ್. ಶಿವಣ್ಣ :- ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಕೊಯ ಮತ್ತೂರಿನವರು ಹೇಗೆ ಪರಿಚಯ ಆದರು? ಏಕೆಂದರೆ ಅವರಿಗೆ ಆ ಭಾಷೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ನಾನು ಕೊಯಮತ್ತೂರಿಗೆ ಹೋಗಿರಲಿಲ್ಲ. ಕೊಯಮತ್ತೂರಿನವರು ಇದ್ದರು. ಅವರು ಅರ್ಧಂಬರ್ಧ ಕನ್ನಡ ಮಾತನಾಡುತ್ತಾರೆ. ಅಲ್ಲಿ ಕನ್ನಡ ಪ್ರದೇಶ ಇದೆ. ಕೊಯಮತ್ತೂರು, ಗೂಡಲೂರು, ಊಟಿ, ಅವೆಲ್ಲಾ ಕನ್ನಡದ ಪ್ರದೇಶಗಳು. ಆಗ ನಾನು ಅವರನ್ನು ನೀವು ಯಾರು ಎಂದು ಕೇಳಿದೆ, ನಾವು ಖೋಟಾ ನೋಟಿನವರು ಸ್ವಾಮಿ ಎಂದು ಹೇಳಿದರು. ನನಗೆ ಆಗ ಒಂದು ತರಹ ಪರಿಸ್ಥಿತಿ ಆಯಿತು. ನಮ್ಮನ್ನು ಇಲ್ಲಿ ಹಾಕಿಬಿಟ್ಟಿದ್ದಾರಲ್ಲಾ ಎಂದು. ನೀವು ಯಾರು ಎಂದು ನನ್ನನ್ನು ಅವರು ಕೇಳಿದರು, ನಾವು ಅವರೇ ಎಂದು ಹೇಳಿದೆ.

ಡಾ. ಎಂ. ಪಿ. ಕರ್ಕಿ :- ಹಾಗೆ ಹೇಳುವುದಕ್ಕಿಂತ ಖೋಟಾ ಕನ್ನಡದವರು ಎಂದು ಹೇಳಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ :- ಆ ಪರಿಸ್ಥಿತಿಯಲ್ಲಿ ನಾವು ಇದ್ದೆವು. ಆ ಲಾಕಪ್‌ನಲ್ಲಿ ನಮ್ಮನ್ನು ಹಾಕಿದ ಮೇಲೆ ನಾನು ಎಷ್ಟೇ ಮಹಾರಾಜ ಎಂದು ಹೇಳಿಕೊಂಡರೂ ನನ್ನ ಮಾತನ್ನು ಯಾರು ಕೇಳುತ್ತಾರೆ. ಅಥವಾ ನಾನು ಭಾರಿ ದೊಡ್ಡ ಹೋರಾಟಮಾಡಿದೆ ಎಂದು ಹೇಳಿದರೆ ನನ್ನನ್ನು ಯಾರು ಕೇಳುತ್ತಾರೆ. ನಾನು ನಿಮ್ಮ ಜೊತೆಯವನೇ ಅಪ್ಪ ಅದರಲ್ಲಿ ಬೇರೆ ಮಾತು ಇಲ್ಲ. ಎಂದು ಹೇಳಿದೆ. ಅದಕ್ಕೆ ಅವರು ಸರಿ ಬಿಡಿಸ್ವಾಮಿ ಎಲ್ಲರೂ ಒಟ್ಟಿಗೆ ಬಿಡಿಸಿಕೊಳ್ಳೋಣ ಎಂದು ಹೇಳಿದರು. ನಾನು ತಮಗೆ ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ತಾವು ಒಂದು ಸಾರಿ ಹೋಗಿ ಬನ್ನಿ. ಒಂದು ಸಾರಿ ಸಂದರ್ಶನ ಮಾಡಿ. ತಾವು ಯಾರಿಗೂ ಹೇಳಬೇಡಿ. ತಾವು ಸಂದರ್ಶನಕ್ಕೆ ಬರುತ್ತೇನೆ ಅಂದರೆ ಆಗ ಅವರು ಹೊಸ ಡ್ರೆಸ್ ಎಲ್ಲಾ ಹಾಕಿಕೊಂಡು ಹೊಸದಾಗಿ ಬಣ್ಣ ಬಳಿದುಬಿಡುತ್ತಾರೆ. ಅಲ್ಲಿ ಒಂದು ನಾಮ ಫಲಕ ಇದೆ. ಅದರಲ್ಲಿ ಎಲ್ಲಾ ಹೊಸದಾಗಿ ಆಗ ಬರೆದಿರುತ್ತಾರೆ. ನೀವು ಇವು ಯಾವುದೂ ಇಲ್ಲದೇ ತಕ್ಷಣ ಒಂದೊಂದು ಸ್ಟೇಷನ್‌ಗೆ ಹೋಗಿ, ಅಲ್ಲಿನ ಪರಿಸ್ಥಿತಿ ನೋಡಿ, ಆಮೇಲೆ ರಾತ್ರಿ ಟೈಮ್‌ನಲ್ಲಿ ಲಾಕಪ್‌ಗಳನ್ನು ಸಂದರ್ಶನ ಮಾಡಿ, ಲಾಕಪ್‌ಗಳಲ್ಲಿ ಯಾರು ಇದ್ದಾರೆ ಅವರ ಪರಿಸ್ಥಿತಿ ಏನು ಏನೇನು ಆಗಿದ್ದೀರಿ ಎಂದು ಹೇಳಿ; ಯಾರಿಗೂ ಹೇಳಬೇಡಿ, ಸರ್ಕಾರಿ ಕಾರು ಬಿಟ್ಟು ಬೇರೆ ಕಾರಿನಲ್ಲಿ ಹೋಗಿ, ನನಗನಿಸುತ್ತದೆ ಇದರಿಂದ ಅನುಕೂಲ ವಾಗುತ್ತದೆ ಮತ್ತು ಇದರಿಂದ ಸಮಗ್ರವಾದ ಚಿಂತನೆ ಆಗಬೇಕು.

ಶ್ರೀ ಕೆ. ಎಸ್. ಈಶ್ವರಪ್ಪ :- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಖಾಸಗಿ ಕಾರಿನಲ್ಲಿ ದಿಢೀರ್ ಎಂದುಹೋಗಿಬಿಟ್ಟರೆ ಅವರನ್ನೇ ಲಾಕಪ್‌ನಲ್ಲಿ ಹಾಕಿಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಅದೂ ನಿಜವೇ. ಹಿಂದೆ ಮಾನ್ಯ ಜಾಲಪ್ಪನವರಿಗೆ ಅನುಭವ ಆಗಿತ್ತು. ಪಾಪ ಮಾನ್ಯ ಜಾಲಪ್ಪನವರು ಹಿಂದೆ ನೆಲಮಂಗಲಕ್ಕೆ ಹೋಗಿದ್ದರಂತೆ ಒಬ್ಬ ಪೋಲೀಸ್‌ನವರೂ ಎದ್ದು ನಿಂತುಕೊಳ್ಳಲೇ ಇಲ್ಲವಂತೆ. ಆಮೇಲೆ ಇವರು ನಾನೇ ಹೋಮ್ ಮಿನಿಸ್ಟರ್ ಎಂದು ಹೇಳಿದಮೇಲೆ ಆಮೇಲೆ ಗಪ್ ಎಂದು ಸೆಲ್ಯೂಟ್ ಹೊಡೆದರಂತೆ. ಅಲ್ಲಿ ನಡೆದ ಪರಿಸ್ಥಿತಿ ಅಲ್ಲಿ ನಡೆದ ಕಥೆ. ನನಗೆ ಜಾಲಪ್ಪನವರು ಹೇಳಿದರು ನಾವು ಯಾವ ಪರಿಸ್ಥಿತಿಗೆ ಸಿಕ್ಕಿ ಹಾಕಿಕೊಂಡೆವು ಅಂತ. ತಾವು ಹೊರಗಡೆ ಹೋಗುವಂತಹ ಸಂದರ್ಭದಲ್ಲಿ ತಾವು ಈ ನಮ್ಮ ವಿಧಾನ ಸೌಧದ ಪೋಲೀಸ್ ಸ್ಟೇಷನ್‌ನಲ್ಲಿಯೇ ನೋಡಿ ಸಾರ್ ಸಾಕು. ಒಂದು ದರ್ಶನ ತಮಗೆ ಆಗಲಿ. ಆ ಬಂದೂಕುಗಳಲ್ಲಿ ಗುಂಡು ಸಿಡಿಯುತ್ತವೆಯೋ ಅಥವಾ ಗುಂಡು ಹಾರುತ್ತವೆಯೋ ಅದಕ್ಕೆ ಕುದುರೆ ಇದೆಯೋ ಇಲ್ಲವೋ ಎಂದು ಏನೂ ಗೊತ್ತಿಲ್ಲ. ಅದನ್ನು ಚೈನು ಹಾಕಿ ಇಟ್ಟಿರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಂತಹ ಬಂದೂಕುಗಳು ಇದ್ದ ಕಾರಣವೇ ಅವರು ಇಷ್ಟು ಚಳುವಳಿ ಮಾಡಿದರೂ ಕೂಡ ಅವರ ಮೈ ಮೇಲೆ ಒಂದೂ ಗಾಯ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಆದರೆ ನನ್ನ ಮೇಲೆ ಬಂದೂಕಿನಲ್ಲಿ ಹೊಡೆಯುವಷ್ಟು ಭಯೋತ್ಪಾದನೆ ನಾನು ಏನೂ ಮಾಡಿಲ್ಲ.

ಅಧ್ಯಕ್ಷರು :- ನಿಮಗೆ ಗಾಯ ಆಗಿದೆಯೋ ಇಲ್ಲವೋ ಎನ್ನುವುದು ನಮಗೆ ಗೊತ್ತಾಗುವುದಿಲ್ಲ ಕಾರಣ ನೀವು ಬಟ್ಟೆ ಹಾಕಿಕೊಂಡಿದ್ದೀರಿ ಅದರಿಂದ. ಆದರೆ ಒಳಗೆಲ್ಲಾ ಇವರು ಯಾವಾಗ ಪರೀಕ್ಷೆ ಮಾಡಿದರು ಅಂತ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಅದನ್ನು ನಾವು ಮೂರೇ ಜನ ಸೇರಿ ಮಾತನಾಡೋಣ ಬಿಡಿ. ಇಲ್ಲಿ ನಾವು ಏನಾದರೂ ಮಾತನಾಡುವುದಕ್ಕೆ ಹೋದರೆ ವಾಚಕರವಾಣಿಯಲ್ಲಿ ಬರೆದುಬಿಡುತ್ತಾರೆ. ಅದು ಬೇರೆ ತಾಪತ್ರಯ. ನಿನ್ನೆ ಯಾರೋ ವಾಚಕರವಾಣಿಯಲ್ಲಿ ಬರೆದುಬಿಟ್ಟು ಫಜೀತಿಮಾಡಿದ್ದಾರೆ. ಅದಕ್ಕೋಸ್ಕರ ಬೇಡ ಬಿಡಿ. ವಾಚಕರ ವಾಣಿ ಮಹಾಶಯರದ್ದು ಒಂದು ಗುಂಪು ಇದೆ ಮನೆಯಲ್ಲಿ ಕುಳಿತುಕೊಂಡು ವಾಚಕರವಾಣಿಯಲ್ಲಿ ಬರೆದುಬಿಡುತ್ತಾರೆ. ಅವರದ್ದು ಒಂದು ಗುಂಪು ಹೀಗೆ ಅವರು ಪ್ರತಿಸಾರಿ ವಾಚಕರವಾಣಿಯಲ್ಲಿ ಬರೆಯುವುದು. ಈ ಮಂತ್ರಿ ಸರಿ ಇಲ್ಲ. ಅವನು ಸರಿ ಇಲ್ಲ. ಅವರು ಒಂದು ದಿವಸ ಚುನಾವಣೆಯಲ್ಲಿ ನಿಂತಿಲ್ಲ. ಒಂದು ಮತ ಕೊಡಿಸುವುದಕ್ಕೆ ಹೋಗಿಲ್ಲ. ಅವರು ಒಂದು ಮತ ಹಾಕುವುದಿಲ್ಲ. ಎಂದು ಆರಾಮವಾಗಿ ವಾಚಕರವಾಣಿ ಮಹಾಶಯರು ಇದನ್ನು ಬರೆಯುತ್ತಾರೆ. ಇದನ್ನು ನಾನು ನೋಡಿದ್ದೇನೆ. ಅದು ಒಂದು ತರಹ ಮಡಿವಂತರ ಗುಂಪು. ಅವರು ಯಾರೇ ಇರಲಿ ಅವರು ಆರಾಮವಾಗಿ ಬರೆದುಬಿಡುತ್ತಾರೆ. ಅದನ್ನು ನಾನು ಒಪ್ಪುವುದಿಲ್ಲ. ಅದಕ್ಕೆ ನಾನು ಬೆಲೆಯೂ ಕೊಡುವುದು ಇಲ್ಲ. ಆಮಾತು ಬೇರೆ ಇರಲಿ. ಆದರೆ ವಾಚಕರವಾಣಿಯಲ್ಲಿ ಬಂದಿದ್ದಕ್ಕಾದರೂ ನಾವು ಗೌರವ ಕೊಡಬೇಕಲ್ಲಾ. ಆದ್ದರಿಂದ ಮೊನ್ನೇ ಅದು ಬಂದ ಮೇಲೆ ನಾನು ಸುಮ್ಮನಾದೆ. ಜಾಸ್ತಿ ಮಾಡಿದರೆ ಹೆಚ್ಚು ಕಡಿಮೆ ಆಗುತ್ತದೆ ಅಂತ. ಮಾನ್ಯ ಅಧ್ಯಕ್ಷರೇ ನಾನು ಏತಕ್ಕೆ ಆ ಮಾತನ್ನು ಹೇಳುತ್ತಿದ್ದೇನೆಂದರೆ ನನ್ನ ಭಾಷೆ ಹಾಸ್ಯವಾಗಿರಬಹುದು. ಯಾವುದಾದರೂ ಒಂದು ಊರಿನಲ್ಲಿ ಗಲಾಟೆ ಆಯಿತು ಎಂದು ಹೇಳಿದರೆ ದೊಡ್ಡದೊಡ್ಡ ಸರ್ಕಲ್‌ಗಳಲ್ಲಿ ಇಬ್ಬಿಬ್ಬರು ಪೋಲೀಸಿನವರು ನಿಂತಿರುತ್ತಾರೆ. ಆ ಬಂದೂಕುಗಳನ್ನು ಹೊತ್ತುಕೊಂಡು ನಿಂತಿರುವುದೇ ಅವರಿಗೆ ಶಿಕ್ಷೆ. ಬಂದೂಕು ಹೊತ್ತು ಹೊತ್ತು ಸುಸ್ತಾಗುವುದು. ಆದರಿಂದ ಏನೂ ಕೆಲಸ ಆಗುವುದಿಲ್ಲ. ಆ ಟಿಪ್ಪು ಸುಲ್ತಾನ್ ಕಾಲದ ಬಂದೂಕುಗಳನ್ನು ನೀವು ಇಟ್ಟುಕೊಂಡು ನಿಮ್ಮ ಪೋಲೀಸ್ ಠಾಣೆಗಳನ್ನು ನಡೆಸುವುದಾದರೆ ನೀವು ಯಾರನ್ನೂ ಹಿಡಿಯುವುದಕ್ಕೆ ಆಗುವುದಿಲ್ಲ. ಭಯೋತ್ಪಾದನೆಯನ್ನು ಮಟ್ಟ ಹಾಕುವುದಕ್ಕೆ ಆಗುವುದಿಲ್ಲ. ಶಾಂತಿಯನ್ನು ಕಾಪಾಡುವುದಕ್ಕೆ ಆಗುವುದಿಲ್ಲ. ಶಾಂತಿಯನ್ನು ಬಂದೂಕಿನಲ್ಲಿಯೇ ಮಾಡಬೇಕು ಎನ್ನುವ ವಾದ ನನ್ನದು ಅಲ್ಲ. ಆಧುನೀಕವಾದ ಶಸ್ತ್ರಾಸ್ತ್ರಗಳನ್ನು ನೀವು ಕೊಡಲಿಲ್ಲ ಎಂದು ಹೇಳಿದರೆ....

ಶ್ರೀ ಎಲ್. ಆರ್. ಶಿವರಾಮೇಗೌಡ :- ಭಯೋತ್ಪಾದಕರ ಹತ್ತಿರವೇ ಇವತ್ತು ಆಧುನೀಕರಣವಾದ ಶಸ್ತ್ರಾಸ್ತ್ರಗಳು ಇರುವುದು. ಪೋಲೀಸ್‌ನವರ ಹತ್ತಿರ ಇಲ್ಲ.

ಶ್ರೀ ವಾಟಾಳ್ ನಾಗರಾಜ್ :- ಅದು ನಿಜ. ಇವತ್ತು ಆ ವೀರಪ್ಪನ್‌ನಿಂದ ಎಷ್ಟೆಷ್ಟು ಶಸ್ತ್ರಾಸ್ತ್ರಗಳು ಬರುತ್ತಿವೆ ಎನ್ನುವುದು ತಮಗೆ ಗೊತ್ತಿರಬೇಕು. ಯಾವ್ಯಾವುದೋ

ದೇಶದ್ದು. ಇವತ್ತು ಭಟ್ಕಳದ್ದು ನಮ್ಮ ಶಾಸಕರಾದ ಚಿತ್ತರಂಜನ್‌ರ ಕೊಲೆ ಯಾವುದರಿಂದ ಆಯಿತು? ಹೊಸ ಆಧುನೀಕರಣವಾದನಂತರ ಪಿಸ್ತೂಲ್‌ನಿಂದ ಹೊಡೆದಿರತಕ್ಕಂಥಾದ್ದು. ನೀವು ಯಾವುದೋ ಓಬಿರಾಯನ ಕಾಲದ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡರೆ ಸಾಧ್ಯ ವಾಗುವುದಿಲ್ಲ. ಇದರ ಜೊತೆಗೆ ಪೋಲೀಸ್ ಕಾನ್‌ಸ್ಟೇಬಲ್‌ಗಳು, ಪೋಲೀಸ್ ವಾಹನ ಗಳನ್ನು ತಾವು ನೋಡಬೇಕು. ಯಾವುದೋ ಕಾಲದ ವಾಹನಗಳು ಅವು ಕೆಟ್ಟು ಹಾಳಾಗಿ ಹೋಗಿದೆ. 25 ಶತಮಾನಗಳಷ್ಟು ಹಳೆಯವು. ಆ ವಾಹನಗಳನ್ನು ತಳ್ಳುತ್ತಾರೆ. ನಮ್ಮನ್ನು ಮೊನ್ನೆ ವಿಧಾನ ಸೌಧದ ಹತ್ತಿರ ಅರೆಸ್ಟ್ ಮಾಡಿದರು. ತಾವು ನೋಡ ಬೇಕಾಗಿತ್ತು, ನಮ್ಮನ್ನು ಸೇರಿಸಿ ತಳ್ಳುತ್ತಿದ್ದರು ಅವು ಸ್ಟಾರ್ಟ್ ಆಗಲೇ ಇಲ್ಲ. ಇಂತಹ ವಾಹನಗಳನ್ನು ನಿಮ್ಮ ಪೋಲೀಸ್ ಇಲಾಖೆ ಇಟ್ಟುಕೊಂಡಿದೆ. ಇದು ನಿಜವಾಗಿಯೂ ನಿಮ್ಮ ಇಲಾಖೆಗೆ ಒಳ್ಳೆಯ ಹೆಸರು ತರತಕ್ಕಂಥಾದ್ದು ಅಲ್ಲ. ಪರಿಣಾಮಕಾರಿಯಾದ ಉತ್ತಮವಾದ ವಾಹನಗಳನ್ನು ತೆಗೆದುಕೊಂಡು ಬನ್ನಿ. ಒಳ್ಳೆಯ ವಾಹನಗಳು ಒಳ್ಳೆಯ ಶಸ್ತ್ರಾಸ್ತ್ರ, ಒಳ್ಳೆಯ ಪೋಲೀಸ್ ಠಾಣೆಗಳು ಒಳ್ಳೆಯ ವ್ಯವಸ್ಥೆ, ಅದು ಇರಲಿ ಮತ್ತೆ ಆರಕ್ಷಕ ಅದನ್ನು ತೆಗೆದುಬಿಡಿ. ಆ ಹೆಸರು ನಮಗೆ ಬೇಡ. ನಮಗೆ ಕನ್ನಡದ ಬಗ್ಗೆ ಬಹಳ ಅಭಿಮಾನ ಇದ್ದರೂ ನಾವು ಪೋಲೀಸ್ ಎನ್ನುವುದನ್ನೇ ಇಟ್ಟುಕೊಳ್ಳೋಣ. ಪೋಲೀಸ್ ಎನ್ನುವ ಪದವನ್ನು ನೀವು ಎಂದು ಬದಲಾವಣೆ ಮಾಡಿದಿರಿ ಅಂದೇ ನಿಮ್ಮಶಕ್ತಿ ಕುಂದಿತು. ನಿಮ್ಮ ಶಕ್ತಿ ಕುಂದಿದೆ. ಪೋಲೀಸ್ ಎನ್ನುವ ಪದ ಕನ್ನಡದ ಪದವೇ. ಎರವಲು ಪದ ಏನೂ ಅಲ್ಲ. ಅದು ನಮ್ಮದೇ ಪದ. ಪೋಲೀಸ್ ಎಂದರೆ ಜನ ಹೆದರುವ ಮಟ್ಟಿಗೆ ಬೇರೆ ಪದಕ್ಕೆ ಜನ ಹೆದರುವುದಿಲ್ಲ. ಆಮೇಲೆ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ಅಂತೂ ಬಹಳ ಕಷ್ಟಬಿಡಿ. ವೃತ್ತನಿರೀಕ್ಷಕ, ಡಿ.ಜಿ.ಗೆ ಅಂತೂ ಇನ್ನೂ ಕಷ್ಟ ಬಿಡಿ. ಈ ತರಹದ ಪದಗಳನ್ನು ಕೊಟ್ಟು ನಾವೇನೋ ಬಹಳ ಗಾಂಭೀರ್ಯ ಪದ ಕೊಟ್ಟಿದ್ದೇವೆ ಭಾಷಾಂತರ ಮಾಡಿದ್ದೇವೆ ಎಂದು ಹೇಳಿ ಇಂತಹ ಪದಗಳನ್ನು ಕೊಟ್ಟಿರ ತಕ್ಕಂಥಾದ್ದು ಬಹಳ ಕಷ್ಟ. ಮಾನ್ಯ ರೋಷನ್ ಬೇಗ್‌ರವರಿಗೆ ಆ ಪದ ಹೇಳುವುದಕ್ಕೆ ಬರುವುದಿಲ್ಲ ಬಿಡಿ. ಅವರ ಕೈಯಲ್ಲಿ ಆರಕ್ಷಕ ಎಂದು ಹೇಳಿಸಿಬಿಡಿ. ತಾವು ಏನು ಕೇಳಿದರೂ ಕೊಟ್ಟುಬಿಡುತ್ತೇನೆ. ಪೋಲೀಸ್ ಅಂದರೆ ಸಲೀಸಾಗಿ ಹೇಳುತ್ತಾರೆ. ಆ ಪದ ಬದಲಾವಣೆಯಾಗಬೇಕಾದುದು ಅತಿ ಮುಖ್ಯ. ತಾಲ್ಲೂಕಿನಲ್ಲಿರತಕ್ಕಂಥ ಸಬ್ ಇನ್ಸ್‌ಪೆಕ್ಟರ್ ಗಳದ್ದು ಇರಲಿ ಅಲ್ಲಿರತಕ್ಕಂಥ ಪೋಲೀಸ್ ದಫೇದಾರ್ ಪೋಲೀಸಿನವರ ರಾಜಕೀಯ ವನ್ನು ತಾವು ನೋಡಬೇಕು. 10 ವರ್ಷ ಅವರೇ ಇರುತ್ತಾರೆ. ಎಲ್ಲಾ ಪಾರ್ಟಿಗಳಿಗೂ ಅವರೇ ಸಲಹೆಗಾರರು ಆಗಿರುತ್ತಾರೆ. ಅಂತಹ ಒಂದು ಲಿಸ್ಟನ್ನು ತಾವು ಸರಿಸಿಬಿಡಿ. ಬಹಳವರ್ಷಗಳು ಒಂದೇ ಕಡೆ ಇರತಕ್ಕಂಥ ಈ ಪೋಲೀಸ್ ಕಾನ್‌ಸ್ಟೇಬಲ್‌ಗಳನ್ನು ಈ ಕೂಡಲೇ ಅವರೆಲ್ಲರನ್ನೂ ವರ್ಗಾವರ್ಗಿ ಇಲ್ಲ ಎಂದು ಹೇಳಿದರೂ ಚಿಂತೆ ಇಲ್ಲ, ಅವರನ್ನು ಬದಲಾವಣೆ ಮಾಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಿ. ಎಲ್ಲದ್ದಕ್ಕೂ ಅವರೇ ಕಾರಣ. ಜಾತಿ ಜಗಳಕ್ಕೆ ಅವರೇ ಕಾರಣ. ಕೋಮು ಗಲಭೆಗಳಿಗೆ ಅವರೇ ಕಾರಣ. ಬೇರೆ ಬೇರೆ ರಾಜಕಾರಣಗಳನ್ನು ಎತ್ತಿಕಟ್ಟುವುದು ಅವರದೇ ಅಟ್ಟಹಾಸ, ದುರಹಂಕಾರ, ಅವರ ಮಾತು, ಇವೆಲ್ಲಾ ನಿಲ್ಲಬೇಕಾದರೆ ನೀವು ಪರಿಣಾಮಕಾರಿಯಾದ ಕ್ರಮ ಕೈಗೊಳ್ಳಲಿಲ್ಲ ಅಂದರೆ .....

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾವು ಈಗ ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಮತ್ತು ಸರ್ಕಲ್ ಇನ್ಸ್‌ಪೆಕ್ಟರ್‌ಗಳನ್ನು ಬದಲಾವಣೆ ಮಾಡುತ್ತೇವೆ. ನಾನು ಮಾನ್ಯ ಸಿಂಧ್ಯಾರವರು ಗೃಹ ಸಚಿವರಾಗಿದ್ದಾಗಲೂ ಸಹ ನಾನು ವಿನಂತಿ ಮಾಡಿದ್ದೇನೆ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಜನತಾ ದರ್ಶನದಲ್ಲಿ ಎಲ್ಲಾ ರಾಜಕೀಯ ಪ್ರಮುಖರೂ ಸಹ ಈ ವಿಚಾರ ಪ್ರಸ್ತಾಪ ಮಾಡಿದ್ದೇವೆ.

1.40 ಪಿ. ಎಂ.

ಸಬ್‌ಇನ್ಸ್‌ಪೆಕ್ಟರುಗಳನ್ನು ಮತ್ತು ಸರ್ಕಲ್ ಇನ್ಸ್‌ಪೆಕ್ಟರುಗಳನ್ನು ಬದಲಾವಣೆ ಮಾಡಿದ ಹಾಗೆ ಎ.ಎಸ್.ಐ.ಗಳನ್ನು ಮತ್ತು ದಫೇದಾರ್‌ಗಳನ್ನು ಬದಲಾವಣೆ ಮಾಡುತ್ತಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಎಲ್ಲಾ ಅವ್ಯವಸ್ಥೆಯೂ ಪ್ರಾರಂಭ ವಾಗುವುದೇ ಇವರಿಂದ ನನ್ನ ಕ್ಷೇತ್ರದಲ್ಲೂ ಹತ್ತು ಹದಿನೈದು ಜನ ಪೋಲೀಸರಿದ್ದಾರೆ, ಅವರಿಗೆ ಆಗದವರ ಮೇಲೆ ಬೇರೆಯವರ ಮೂಲಕ ಕಂಪ್ಲೇಂಟ್ ತೆಗೆದುಕೊಂಡು ಪಿ.ಸಿ.ಆರ್. ಕೇಸ್ ಹಾಕಿಸುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ, ಇನ್ನು ಮುಂದೆ ಪೋಲೀಸರುಗಳನ್ನೂ ಬದಲಾವಣೆ ಮಾಡತಕ್ಕಂಥ ಹೊಸ ಕೆಲಸವನ್ನು ಈ ರಾಜ್ಯದಲ್ಲಿ ಮಾಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಇನ್ನು ಗೃಹ ರಕ್ಷಕ ದಳದವರಿಗೆ 3 ವರ್ಷಕ್ಕೆ ಒಂದು ಸಾರಿ ಅಥವಾ 5 ವರ್ಷಕ್ಕೆ ಒಂದು ಸಾರಿ ಸಮವಸ್ತ್ರಗಳನ್ನು ಕೊಡಲಾಗುತ್ತಿದೆ. ಇನ್ನು ಮುಂದಾದರೂ ಈ ಗೃಹ ರಕ್ಷಕ ದಳದವರಿಗೆ ವ್ಯವಸ್ಥಿತ ರೀತಿಯಲ್ಲಿ ಸಮವಸ್ತ್ರಗಳನ್ನು ಕೊಡುವಂಥ ಕೆಲಸವಾಗಬೇಕು. ಇನ್ನು ಜೈಲು ಸುಧಾರಣೆ ಕೆಲಸವನ್ನು ಆದಷ್ಟು ಬೇಗ ತೆಗೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಬಹಳ ಕಷ್ಟವಾಗುತ್ತದೆ. ರೌಡಿಗಳು ಜೈಲಿಗೆ ಹೋಗಿ ಅವರ ವೈರಿಗಳನ್ನು ಕೊಂದು ಬರುತ್ತಾರೆ ಎಂದರೆ ಅದು ತಲೆ ತಗ್ಗಿಸತಕ್ಕಂಥ ವಿಚಾರ. ಇಂತಹ ಪರಿಸ್ಥಿತಿ ಬೇರೆ ರಾಜ್ಯದ ಅಥವಾ ಬೇರೆ ದೇಶಗಳಲ್ಲಿ ಆಗಿದ್ದಿದ್ದರೆ ಸರ್ಕಾರ ತನ್ನ ಬೇಜವಾಬ್ದಾರಿಯನ್ನು ಒಪ್ಪಿಕೊಂಡು ರಾಜೀನಾಮೆಯನ್ನು ಕೊಡುತ್ತಿತ್ತು. ಆದುದರಿಂದ ಜೈಲು ಸುಧಾರಣೆ ಬಗ್ಗೆ ವ್ಯವಸ್ಥಿತವಾದಂಥ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕೆಂದು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಷಯ, ರೈತರ ಚಳುವಳಿ, ರಾಜಕೀಯ ಚಳುವಳಿ, ಜನಸಾಮಾನ್ಯರ ಚಳುವಳಿ ಇಂಥ ಸಂದರ್ಭದಲ್ಲಿ ಚಳುವಳಿಗಾರರ ಮೇಲೆ ಹೂಡಿರುವ ಎಲ್ಲಾ ಮೊಕದ್ದಮೆಗಳನ್ನು ಈ ಕ್ಷಣದಲ್ಲಿ ಸರ್ಕಾರ ವಾಪಸ್ ಪಡೆಯ ಬೇಕೆಂದು ಸರ್ಕಾರದಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಅದರಲ್ಲೂ ಪ್ರೊಫೆಸರ್ ನಂಜುಂಡಸ್ವಾಮಿಯವರ ಮೇಲೆ ಹೂಡಲಾಗಿರುವ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಪ್ರೊಫೆಸರ್ ನಂಜುಂಡಸ್ವಾಮಿಯವರ ಮೇಲೆ ಏನು ಕೇಸ್ ಹಾಕಲಾಗಿದೆ ಅದು ನಿಜಕ್ಕೂ ಸರಿಯಾದುದಲ್ಲ ಮತ್ತು ಅದು ಯಾರಿಗೂ ಗೌರವ ತರತಕ್ಕಂಥ ಕೆಲಸವಲ್ಲ. ಅವರು ಈ ವಯಸ್ಸಿನಲ್ಲೂ ಪೋಲೀಸ್ ಸ್ಟೇಷನ್‌ಗೆ ಹೋಗಿ ಕುಳಿತು ಕೊಂಡು ಬರತಕ್ಕಂಥ ವ್ಯವಸ್ಥೆ ಇದೆಯಲ್ಲಾ ಅದನ್ನು ಮೊದಲು ತೆಗೆಯಬೇಕು. ಅದರ

ಜೊತೆಗೆ ಈ ತರಹ ಕೇಸ್‌ಗಳು ರಾಜ್ಯದಲ್ಲಿ ಎಷ್ಟು ಇವೆಯೋ ಅವುಗಳನ್ನೆಲ್ಲಾ ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಅಲ್ಲಂ ವೀರಭದ್ರಪ್ಪ :- ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಯಲ್ಲಿ ನೀರಿಗೋಸ್ಕರ ರೈತರು ಚಳುವಳಿ ಮಾಡಿದ್ದರು. ಆ ಸಂದರ್ಭದಲ್ಲಿ ಹೂಡಲಾಗಿದ್ದ ಮೊಕದ್ದಮೆಗೆ ನಾನ್ ಬೇಲಬಲ್ ವಾರೆಂಟ್ ಕೊಟ್ಟಿದ್ದಾರೆ. ಈ ಕೇಸ್‌ಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :- ತಮ್ಮ ಅಭಿಪ್ರಾಯಕ್ಕೆ ನನ್ನ ಬೆಂಬಲವನ್ನೂ ಸೂಚಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ಇಂತಹ ಜನ ಪರ ಹೋರಾಟದಲ್ಲಿ ಭಾಗವಹಿಸಿದವರ ಮೇಲೆ ಇದುವರೆಗೆ ಎಷ್ಟು ಕೇಸ್‌ಗಳನ್ನು ಹಾಕಲಾಗಿದೆ ಎಂಬ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಬೇಕು ಹಾಗೂ ಇಂಥ ಮೊಕದ್ದಮೆಗಳನ್ನು ಈ ಕ್ಷಣದಿಂದ ವಾಪಸ್ ತೆಗೆದುಕೊಂಡಿದ್ದೇವೆಂದು ಘೋಷಣೆ ಮಾಡಬೇಕು. ಜನರ ಪರವಾಗಿ, ರೈತರ ಪರವಾಗಿ ಹೋರಾಟ ಮಾಡಿದಂಥ ಜನರ ಮೇಲೆ ಮೊಕದ್ದಮೆಗಳನ್ನು ಹೂಡುವ ಕೆಲಸವನ್ನು ಮೊದಲು ಬಿಡಬೇಕು. ಮಾನ್ಯ ಅಧ್ಯಕ್ಷರೆ, ಹೋದ ಸಾರಿ ತಾವು ಶಾಸಕರಾಗಿಲ್ಲದೇ ಇದ್ದಂಥ ಸಂದರ್ಭದಲ್ಲಿ ನಿಮ್ಮ ಬೆಂಬಲಿಗರು ನಮ್ಮ ಹತ್ತಿರ ಪೋಲೀಸ್ ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಗಳನ್ನು ಕರೆದುಕೊಂಡು ಬಂದಿದ್ದರು. ಅವರುಗಳ ಮೇಲೆ ನಡೆದಂಥ ದುರಂತ, ಪಾಶವೀಕೃತ್ಯ, ಅವರ ಮೈ ತುಂಬಾ ಎದ್ದಿರತಕ್ಕಂಥ ಬಾಸುಂಡೆಗಳು, ಒದ್ದಿರತಕ್ಕಂಥ ಬೂಡ್ಸಿನ ಮೊಳೆಗಳ ಗುರುತುಗಳು ಇವುಗಳನ್ನೆಲ್ಲಾ ನೋಡಿ ಎಷ್ಟು ಕ್ರೌರ್ಯ ತೋರಿಸಿದ್ದಾರೆಂದು ಸದನದಲ್ಲಿ ಚರ್ಚೆ ಮಾಡಿದ್ದೆವು. ಇದನ್ನೆಲ್ಲಾ ನೋಡಿದಾಗ ಈ ರಾಜ್ಯದಲ್ಲಿ ಯಾರೂ ಚಳುವಳಿ ಮಾಡಲೇ ಬಾರದು, ಹೋರಾಟ ಮಾಡಲೇ ಬಾರದು ಎಂದರೆ ಹೇಗೆ? ಆ ದಿನ ಅವರಿಗೆ ಆದ ನೋವನ್ನು ನೋಡಿ ನಮಗೆ ಕಣ್ಣೀರು ಬಂತು. ಅವರನ್ನೆಲ್ಲಾ ಸದನದ ಒಳಗೆ ಕರೆತರುವ ಅವಕಾಶವಿದ್ದಿದ್ದರೆ ಒಳಗೇ ಕರೆದುಕೊಂಡು ಬರುತ್ತಿದ್ದೆವು. ಕೊನೆಗೆ ಅಧ್ಯಕ್ಷರ ಕೊಠಡಿಗೆ ಕರೆದುಕೊಂಡು ಹೋಗಿ ಆಗಿದ್ದ ಅಧ್ಯಕ್ಷರಿಗೆ ತೋರಿಸಿದೆವು. ಇಂತಹ ಘಟನೆಗಳು ಅಲ್ಲಿ ಒಂದೇ ಕಡೆ ಅಲ್ಲದೆ ಎಲ್ಲಾ ಕಡೆ ನಡೆಯುತ್ತಿರುವುದರಿಂದ ನಮಗೆ ರಕ್ಷಣೆ ಬೇಕು ಮತ್ತು ಇವರು ಆಡಳಿತ ಪಕ್ಷದವರು-ಇವರು ವಿರೋಧ ಪಕ್ಷದವರು ಎನ್ನುವ ಮನೋಭಾವನೆ ಪೋಲೀಸರಲ್ಲಿ ಮೊದಲು ಹೋಗಬೇಕು, ಇದರ ಜೊತೆಗೆ ಯಾವುದೇ ಸರ್ಕಾರ ಆಡಳಿತಕ್ಕೆ ಬಂದಾಗ ತಮಗೆ ಬೇಕಾದ ಅಧಿಕಾರಿಗಳನ್ನು ಬೇಕಾದ ಕಡೆಗೆ ಹಾಕಿಕೊಳ್ಳುವುದು ಇತರರನ್ನು ಗಾಳಿ ಪಟದಂತೆ ಬೇರೆ ಕಡೆ ಹಾಕುವ ಕೆಲಸ ಆಗಬಾರದೆಂದು ಹೇಳುತ್ತೇನೆ. ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ, ಕರ್ನಾಟಕ ಏಕೀಕರಣ ಸಮಯದಲ್ಲಿ ನಡೆದಂಥ ಚಳವಳಿಯಲ್ಲಿ ಹೋರಾಟಗಾರರ ವಿರುದ್ಧ ಹೂಡಲಾಗಿದ್ದ ಮೊಕದ್ದಮೆಯನ್ನು, ಆಗಿನ ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರು ದೆಹಲಿಗೆ ಹೋಗುವ ಮುನ್ನಾ ನಡೆದ ಸಚಿವ ಸಂಪುಟದ ಸಭೆಯಲ್ಲಿ ಚಳುವಳಿಗಾರರ ವಿರುದ್ಧ ಹೂಡಲಾಗಿರುವ ಎಲ್ಲಾ ಮೊಕದ್ದಮೆಗಳನ್ನು ವಾಪಸ್

ಪಡೆಯಲಾಗಿದೆಯೆಂದು ತಿಳಿಸಿದರು. ಅದರಂತೆ ಚಳುವಳಿಗಾರರ ವಿರುದ್ಧ ಹೂಡಲಾಗಿದ್ದ ಎಲ್ಲಾ ಮೊಕದ್ದಮೆಗಳನ್ನು ವಾಪಸ್ ಪಡೆದುಕೊಳ್ಳಲಾಯಿತು. ಆದುದರಿಂದ, ರೈತರ ಬಗ್ಗೆ ಹೋರಾಟ ಮಾಡಿದವರ, ಬಡ ಬಗ್ಗರ ಬಗ್ಗೆ ಹೋರಾಟ ಮಾಡಿದವರ ವಿರುದ್ಧ ಹೂಡಲಾಗಿರುವ ಎಲ್ಲಾ ಮೊಕದ್ದಮೆಗಳನ್ನು ವಾಪಸ್ ಪಡೆಯುವ ಬಗ್ಗೆ ಸಂಬಂಧಪಟ್ಟ ಮಂತ್ರಿಯವರು ಮುಖ್ಯ ಮಂತ್ರಿಗಳ ಜೊತೆ ಮಾತಾನಾಡಿ ಏನು ಕ್ರಮ ಕೈಗೊಳ್ಳ ಲಾಗುತ್ತದೆಂದು ಉತ್ತರ ಕೊಡುವಂಥ ಸಂದರ್ಭದಲ್ಲಿ ಹೇಳಬೇಕು, ಹಾಗೂ ರಾಜ್ಯಾದ್ಯಂತ ಇಂಥಾ ಮೊಕದ್ದಮೆಗಳ ಸಂಖ್ಯೆ ಎಷ್ಟಿವೆಯೆಂದು ಸದನಕ್ಕೆ ಅಂಕಿ ಅಂಶವನ್ನು ಒದಗಿಸಿ ಕೊಡಬೇಕು. ಈ ಕೇಸ್‌ಗಳು ಹಾಗೆಯೇ ಇರುವುದರಿಂದ ಸರ್ಕಾರಕ್ಕೂ ನಷ್ಟ ಜೊತೆಗೆ ಕೇಸ್ ಹಾಕಿಕೊಂಡಿರುವವರೂ ಸಹಾ ಯಾವಾಗಲೂ ನ್ಯಾಯಾಲಯಕ್ಕೆ ಓಡಾಡುವಂಥ ತೊಂದರೆಗಳು ಇರುತ್ತದೆ. ಆದುದರಿಂದ ಇಂಥಾ ಮೊಕದ್ದಮೆಗಳನ್ನು ಸಾರಾಸಗಟಾಗಿ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರದಲ್ಲಿ ಕಳಕಳಿಯಿಂದ ಮನವಿ ಮಾಡಿ ಕೊಳ್ಳುತ್ತೇನೆ. ಇನ್ನು ಸಾರಿಗೆ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ, ಸಾರಿಗೆ ವ್ಯವಸ್ಥೆ ಸುಧಾರಣೆ ಮಾಡುವ ಸಲುವಾಗಿ ಮಾನ್ಯ ಸಿಂಧ್ಯಾರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಲಾಗಿತ್ತು, ಆ ಸಮಿತಿಯಲ್ಲಿ ನಾನೂ ಕೂಡ ಸದಸ್ಯನಾಗಿದ್ದೆ. ಆ ಸಮಿತಿಯು ಒಳ್ಳೆಯ ವರದಿಯನ್ನು ಕೊಟ್ಟಿದೆ. ಆದರೆ, ನನ್ನ ದೃಷ್ಟಿಯಲ್ಲಿ ಸಾರಿಗೆ ಸಂಸ್ಥೆಯನ್ನು ವಿಭಜನೆ ಮಾಡುವುದು ಬೇಡ. 4 ಭಾಗಗಳನ್ನು ಮಾಡಿ ಅದಕ್ಕೆ 4 ಜನ ಅಧ್ಯಕ್ಷರನ್ನು ಸರ್ಕಾರ ನೇಮಕ ಮಾಡಬಹುದು, ಆದರೆ ಅದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. 4 ವಿಭಾಗಗಳನ್ನಾಗಿ ಮಾಡುವುದರಿಂದ ಒಂದು ವಿಭಾಗ ಚೆನ್ನಾಗಿ ನಡೆದು ಇನ್ನೊಂದು ವಿಭಾಗ ನಷ್ಟದಲ್ಲಿ ನಡೆಯುವಂಥ ಸಂದರ್ಭದಲ್ಲಿ ಈ ವ್ಯವಸ್ಥೆಯೂ ಸರಿಯಾಗಿಲ್ಲದೇ ಇರುವುದರಿಂದ ಇದನ್ನು ಖಾಸಗೀ ಕರಣ ಮಾಡಿಬಿಡೋಣ ಎನ್ನುವ ಸಂದರ್ಭ ಬಂದರೂ ಬರಬಹುದು. ಆದುದರಿಂದ ಈ ಸಾರಿಗೆ ಸಂಸ್ಥೆಯನ್ನು 4 ಭಾಗಗಳನ್ನಾಗಿ ಮಾಡುವುದು ಒಳ್ಳೆಯ ನೀತಿಯಲ್ಲ. ಸಾರಿಗೆ ವಿಷಯದಲ್ಲಿ ಮಾನ್ಯ ಮಂತ್ರಿಯವರಿಗೆ ಅಪಾರವಾದ ಅನುಭವವಿರುವುದರಿಂದ ಈ ವಿಷಯವನ್ನು ತೀರ್ಮಾನ ಮಾಡುವ ಮೊದಲು ಸಮಗ್ರವಾಗಿ ಚರ್ಚಿಮಾಡಿ, ತಾವೂ ಪ್ರಾಮಾಣಿಕವಾದ ಚಿಂತನೆ ಮಾಡಿ ಮುಂದಿನ ಕ್ರಮ ಕೈಗೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವ್ಯಕ್ತ ಮಾಡಿರುವ ಸಲಹೆ ಒಳ್ಳೆಯದಿದೆ. ಅದರಲ್ಲಿ ಒಂದು ತಾಪತ್ರಯ ಇದೆ. ಉದಾಹರಣೆಗೆ ಬೀದರ್‌ನಲ್ಲಿರುವ ಡಿಪೋನವರು ಒಂದು ಬಸ್‌ಗೆ ಹೊಸ ಟೈರ್ ಹಾಕಿಸಿಕೊಳ್ಳಬೇಕಾದರೆ ಅವರು ಹುಬ್ಬಳ್ಳಿ ಅಥವಾ ಬೆಂಗಳೂರಿನಲ್ಲಿರುವ ರೀಜನಲ್ ಆಫೀಸ್‌ಗೆ ಬರಬೇಕಾಗುತ್ತದೆ. ತಮಿಳುನಾಡಿನಲ್ಲಿ ಅಥವಾ ಬೇರೆ ರಾಜ್ಯದಲ್ಲಿ ಯಾವ ರೀತಿ ಮಾಡಿದ್ದಾರೆಂಬ ಬಗ್ಗೆ ತಿಳಿದುಕೊಂಡು ಕನಿಷ್ಟಪಕ್ಷ ಡಿವಿಷನಲ್ ಲೆವೆಲ್ ಮಾಡದೇ ಹೋದರೆ ಸರಿಯಾದಂಥ ವ್ಯವಸ್ಥೆಯಾಗುವುದಿಲ್ಲವೆಂಬುದು ನಮ್ಮ ಅಭಿಪ್ರಾಯ. ಇದರ ಬಗ್ಗೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಸದಸ್ಯರು ಹೇಳಿರುವುದನ್ನು ಒಪ್ಪುತ್ತೇನೆ, ಆದರೂ ಸಂಸ್ಥೆಯನ್ನು ವಿಭಾಗ ಮಾಡದೇ ಅಭಿವೃದ್ಧಿಪಡಿಸುವ ಬಗ್ಗೆ ಏನಾದರೂ ಮಾರ್ಗಗಳಿದ್ದರೆ ಹುಡುಕಬೇಕು. ರಾಜ್ಯದ ಮಟ್ಟದ ಒಂದು ಸಂಸ್ಥೆಯನ್ನು ನಾಲ್ಕು ಭಾಗಗಳಾಗಿ ಹಂಚಬಾರದೆಂದು ನನ್ನ ಅಭಿಪ್ರಾಯ. ಇದರ ಜೊತೆಗೆ ಬಿ.ಟಿ.ಎಸ್.ನ್ನು ಸಹಾ ವಿಭಾಗ ಮಾಡುವುದೂ ಸರಿಯಲ್ಲ. ಬಿ.ಟಿ.ಎಸ್.ನ್ನು ವಿಭಾಗಗಳನ್ನಾಗಿ ಮಾಡಿ ವಿಶ್ವಬ್ಯಾಂಕ್‌ನಿಂದ ಸಾಲ ಪಡೆದು ಅದನ್ನು ಅಭಿವೃದ್ಧಿಪಡಿಸಬೇಕೆಂಬ ನೀತಿ ಸರ್ಕಾರದ ಮುಂದೆ ಇದೆ. ವಿಶ್ವ ಬ್ಯಾಂಕ್‌ನಿಂದ ಸಾಲ ಪಡೆದರೆ ಅವರು ಹಾಕುವ ಷರತ್ತುಗಳಿಗೆಲ್ಲಾ ಸರ್ಕಾರ ಒಪ್ಪಿಕೊಳ್ಳಬೇಕಾಗುತ್ತದೆ. ಇನ್ನು ಮುಂದೆ ವಿದ್ಯಾರ್ಥಿಗಳಿಗೆ ಕೊಡುವ ಪಾಸ್ ಕೊಡಬಾರದೆಂದು ಅವರು ಹೇಳಲೂ ಬಹುದು, ಇವತ್ತಿನ ದಿವಸ ವಿದ್ಯಾರ್ಥಿಗಳಿಗೆ ಪಾಸ್ ಕೊಡುವುದರಿಂದ ಸರ್ಕಾರಕ್ಕೆ 132 ಕೋಟಿ ರೂಪಾಯಿಗಳ ಖರ್ಚು ಬರುತ್ತಿದೆಯೆಂದು ನನಗೆ ತಿಳಿದಿದೆ. ವಿಶ್ವಬ್ಯಾಂಕ್‌ನವರು ಒಂದು ರೀತಿ ಮಾರ್ವಾಡಿ ಲೆಕ್ಕ ಹಾಕುವುದರಿಂದ ಅಲ್ಲಿಂದ ಸಾಲ ಪಡೆಯುವ ಮೊದಲು ಸಾಧಕಬಾಧಕಗಳ ಬಗ್ಗೆ ಸರ್ಕಾರ ಸಮಗ್ರವಾಗಿ ಚಿಂತನೆ ಮಾಡಬೇಕು. ಆಮೇಲೆ, ವ್ಯವಸ್ಥಾಪಕ ಮಂಡಳಿಯಲ್ಲಿ ಕಾರ್ಮಿಕರ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಲಾಗುತ್ತದೆಂದು ವರದಿಯಲ್ಲಿ ಕೊಡಲಾಗಿದೆ. ಕಾರ್ಮಿಕರುಗಳೆಲ್ಲಾ ಸರಿಯಿಲ್ಲವೆಂದು ಸಾರಾಸಗಟಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆ ಸಂಸ್ಥೆಯಲ್ಲಿ ಕೆಲಸ ಮಾಡುವ 67 ಸಾವಿರ ಕಾರ್ಮಿಕರಲ್ಲಿ ಒಂದಿಬ್ಬರು ಚಾಲಕ ಮತ್ತು ನಿರ್ವಾಹಕರು ಸರಿ ಇಲ್ಲದೇ ಇರಬಹುದು. ಆದರೆ ಎಲ್ಲರೂ ಸರಿ ಇಲ್ಲ ಎಂದು ಹೇಳುವುದು ಸರಿಯಲ್ಲ. ನೀವು ಕಾರ್ಮಿಕರ ಬಗ್ಗೆ ಅಪಾರವಾದಂಥ ಚಿಂತನೆ ಮಾಡಿರತಕ್ಕಂಥವರು. ಆ ಕಾರಣಕ್ಕಾಗಿ ಈ ಬಗ್ಗೆ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಖಾಸಗಿ ಬಸ್‌ಗಳ ಹಾವಳಿ ತುಂಬಾ ಹೆಚ್ಚಾಗಿದೆ. ತಾವುಗಳು ಕಲಾಸಿಪಾಳ್ಯ ಬಸ್‌ಸ್ಟ್ಯಾಂಡನ್ನು ನೋಡಬೇಕು. ಸಾಯಂಕಾಲ ಸುಮಾರು 7 ಗಂಟೆಯ ನಂತರ ಹೋದರೆ ಅಲ್ಲಿ ಸಾವಿರಾರು ಖಾಸಗಿ ಬಸ್‌ಗಳು ಲೈನ್ ಆಗಿ ನಿಂತಿರುತ್ತವೆ. ಇಡೀ ಕಲಾಸಿಪಾಳ್ಯ ಪ್ರದೇಶವನ್ನು ಯಾರೋ 3-4 ಸಂಸ್ಥೆಗಳ ಮಾಲೀಕರುಗಳಿಗೆ ಕೊಟ್ಟಹಾಗೆ ಕಾಣುತ್ತದೆ. ಇಂಥ ಬಸ್‌ಗಳನ್ನು ಏಕೆ ಇಲ್ಲಿ ಸರಕಾರಿ ಜಾಗದಲ್ಲಿ ನಿಲ್ಲಿಸಿದ್ದೀರಿ ಎಂಬ ಬಗ್ಗೆ ಕೇಳುವ ಪೋಲೀಸ್ ವ್ಯವಸ್ಥೆಯೂ ಇಲ್ಲ. ನಾವೇನಾದರೂ ಎಂ.ಜಿ. ರಸ್ತೆಯಲ್ಲಿ ಕಾರ್ ನಿಲ್ಲಿಸಿದರೆ ಪೋಲೀಸರು ಬಂದು ತೆಗೆಯಿರಿ ಎಂದು ಹೇಳುತ್ತಾರೆ. ಆದರೆ ಕಲಾಸಿಪಾಳ್ಯ ಪ್ರದೇಶದಲ್ಲಿ ಖಾಸಗಿ ಬಸ್‌ಗಳವರು ಹಗಲೂ ರಾತ್ರಿ ಒಂದು ರೀತಿಯಲ್ಲಿ ಜನರ ಲೂಟಿ ಮಾಡುತ್ತಿದ್ದಾರೆ. ಆದ್ದರಿಂದ ನಮ್ಮ ಸಾರಿಗೆ ಸಂಸ್ಥೆಗೆ ಅಪಾರವಾದ ನಷ್ಟ ಹಾಗೂ ಅಪಾಯ ಇದೆ ಎಂದು ಹೇಳ ಬಯಸುತ್ತೇನೆ. ಸಿಂಧ್ಯಾ ಸಮಿತಿಯ ವರದಿ ಏನಿದೆ ಅದನ್ನು ಅನುಸರಿಸಿ ವ್ಯವಸ್ಥಿತ ವಾದಂಥ ಒಂದು ನೀತಿ ಆಗಬೇಕು. ಅದರಲ್ಲಿ ಏನು ಪರಿಣಾಮಕಾರಿಯಾದ ರೀತಿ ಯಲ್ಲಿ ಸಲಹೆಗಳನ್ನು, ಮಾರ್ಗದರ್ಶನಗಳನ್ನು ಕೊಟ್ಟಿದ್ದಾರೆ ಅವುಗಳನ್ನು ಜಾರಿಗೆ ತರ ಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನಮ್ಮ ವಾರ್ತಾ ಇಲಾಖೆಯು ಬಹಳ ಪ್ರಮುಖವಾದಂಥ ಇಲಾಖೆಯಾಗಿದೆ. ಅದಕ್ಕಾಗಿ ಹನ್ನೊಂದೂವರೆ ಕೋಟಿಗಳ ತನಕ ಅನುದಾನ ಇರಬಹುದು. ಆದರೆ ಆ ಇಲಾಖೆಯು ನಮ್ಮ ಇಡೀ ಸರಕಾರದ ಪ್ರಚಾರ ಮಾಡ ತಕ್ಕಂಥ ಏಕೈಕ ಇಲಾಖೆಯಾಗಿದೆ. ಅದು ಸರಕಾರದ ಕಣ್ಣು, ಕಿವಿ, ಮೂಗು ಇದ್ದಂಥ ಉತ್ತಮವಾದ ಇಲಾಖೆ. ಆ ಇಲಾಖೆಯ ನಾಶಕ್ಕೆ ನೀವು ಅವಕಾಶ ಮಾಡಿಕೊಡಬೇಡಿ. ನಾನು ಆ ಇಲಾಖಾ ಸಮಿತಿಯ ಅಧ್ಯಕ್ಷನಾಗಿಯೂ ಕೆಲಸ ಮಾಡಿದ್ದೇನೆ. ಈಗ ಅಧ್ಯಕ್ಷರಾಗಿರುವ ಮಾನ್ಯ ಬಸವರಾಜ್ ಪಾಟೀಲ್ ಅಟ್ಟೂರ್‌ರವರು ಕೂಡ ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಅನುಷ್ಠಾನಕ್ಕೆ ತರಬೇಕು. ಆ ಇಲಾಖೆ ಯಲ್ಲಿ ಕೆಲಸಮಾಡುತ್ತಿರತಕ್ಕಂಥವರನ್ನು ಉನ್ನತ ಹುದ್ದೆಗಳಿಗೆ ತರಬೇಕು, ನಿರ್ದೇಶಕರನ್ನಾಗಿ ಮಾಡಬೇಕು. ನಮ್ಮಲ್ಲಿ ಒಂದು ಪರಿಪಾಠ ಬೆಳೆದು ಬಂದಿದೆ. ಎಲ್ಲಾ ಕಡೆಗಳಲ್ಲಿಯೂ ಐಎಎಸ್‌ನವರನ್ನು ಅಧ್ಯಕ್ಷರನ್ನಾಗಿ ಮಾಡಿಬಿಡುವುದು. ಯಾವುದೇ ಇಲಾಖೆಯ ಪ್ರಮುಖ ಸ್ಥಾನಗಳಿಗೆ ಅವರನ್ನು ನೇಮಿಸುವ ಪರಿಪಾಠ ಏನು ಬೆಳೆಸಿಕೊಂಡು ಬಂದಿದ್ದಾರೆ ಅದನ್ನು ಬಿಡಬೇಕು. ವಾರ್ತಾ ಇಲಾಖೆಯ ಪುನಃಶ್ಚೇತನಕ್ಕೆ ಸರಕಾರವು ಪರಿಣಾಮಕಾರಿಯಾದಂಥ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಆದೃಷ್ಟಿಯಿಂದ ವಾರ್ತಾ ಇಲಾಖೆಗೆ ಹೆಚ್ಚು ಶಕ್ತಿಯನ್ನು ತುಂಬತಕ್ಕಂಥ ಕೆಲಸವು ಸರಕಾರದಲ್ಲಿ ಆಗಬೇಕು. ಮಾನ್ಯ ಸಿದ್ಧ ರಾಮಯ್ಯನವರು ಆ ಓಬಿರಾಯನ ಕಾಲದ ಇಲಾಖೆಗೆ ಹೆಚ್ಚು ಹಣವನ್ನು ಕೊಡಬೇಕು. ತಾವುಗಳು ಆ ಇಲಾಖೆಗೆ ಕಾಯಕಲ್ಪಕೊಡುವ ಒಂದು ಕಾರ್ಯವನ್ನು ಮಾಡಬೇಕು. ಮಾನ್ಯ ಅಧ್ಯಕ್ಷರೇ, ಮಾನ್ಯ ನಾಣಯ್ಯನವರು ಮೊನ್ನೆ ಭಾಷಣ ಮಾಡುವಾಗ ಕನ್ನಡ ಚಲನಚಿತ್ರರಂಗಕ್ಕೆ ಇನ್ನು ಯಾವ ಸಹಾಯಧನವನ್ನೂ ಕೊಡುವುದಿಲ್ಲ ಎಂದು ಹೇಳಿದರು. ಇನ್ನೂ ಹೆಚ್ಚಿನ ಸೌಲಭ್ಯ ಕೊಡುವುದಿಲ್ಲ ಎಂದು ಹೇಳಿದರು. ಅದು ಸರಿಯಾದುದಲ್ಲ. ಕನ್ನಡಚಿತ್ರರಂಗದ ಬೆಳವಣಿಗೆಗೆ ಒಂದು ಶಕ್ತಿಯುತವಾದಂಥ ಬುನಾದಿಯನ್ನು ಹಾಕಿ ತಮಿಳುನಾಡಿನಲ್ಲಿ ಕನ್ನಡಚಿತ್ರ ತೆಗೆಯತಕ್ಕಂಥ ವ್ಯವಸ್ಥೆ ಏನಿತ್ತು ಅದನ್ನು ಬದಲಾಯಿಸಿ ಕರ್ನಾಟಕದಲ್ಲಿಯೇ ಕನ್ನಡ ಚಿತ್ರಗಳು ತೆಗೆಯುವಂತಾಗಬೇಕು, ಇಲ್ಲಿ ಕನ್ನಡ ಚಿತ್ರರಂಗ ಬೆಳೆಯ ಬೇಕೆಂಬ ದೃಷ್ಟಿಯಿಂದ ಇಲ್ಲಿಗೆ ಬಂದರು. ಆ ಕಾಲದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಹಣಕಾಸು ಸಚಿವರು ಆಗಿದ್ದರು. ಆಗ ಅವರು ಇದಕ್ಕೆ ಸಹಾಯಧನ ಎಂದು ಹೊಸರೂಪ ಕೊಟ್ಟು ಕನ್ನಡ ಚಿತ್ರಗಳನ್ನು ಇಲ್ಲಿಯೇ ತೆಗೆಯಿರಿ ಎಂದು ಹೇಳಿ ಅದಕ್ಕೆ ಒಂದು ಚೈತನ್ಯವನ್ನು ಕೊಟ್ಟರು. ಆಗ ಒಂದು ನೀತಿ ಮತ್ತು ಶಕ್ತಿಯನ್ನು ಕೊಟ್ಟಂಥ ಇತಿಹಾಸವನ್ನು ಬದಲಾವಣೆ ಮಾಡಿ ಇನ್ನುಮುಂದೆ ಸಹಾಯಧನ ಕೊಡು ವುದಿಲ್ಲ, ಚಿತ್ರಗಳಿಗೆ ನಮ್ಮ ಹೆಚ್ಚಿನ ಅನುಕೂಲಗಳಿಲ್ಲ ಎಂದು ಹೇಳುವುದು ಸರಿಯಾದ ಮಾರ್ಗವಲ್ಲ. ಸರಕಾರವು ತೀರ್ಮಾನವನ್ನು ಕೈಗೊಳ್ಳುವುದಕ್ಕಿಂತ ಮುಂಚೆ ಪ್ರಾಮಾಣಿಕ ವಾದ ಚಿಂತನೆಯನ್ನು ಮಾಡಬೇಕು. ಈಗ ಕಂಠೀರವ ಸ್ಟುಡಿಯೋದ ಬಗ್ಗೆಯೂ ಅಪಸ್ವರ ಬರುತ್ತಾ ಇದೆ. ಈ ಸ್ಟುಡಿಯೋವನ್ನು ಖಾಸಗಿಯವರಿಗೆ ಕೊಡುವ ಬಗ್ಗೆ ಪ್ರಸ್ತಾಪವಿದೆ ಎಂಬ ಮಾತು ಕೇಳಿಬರುತ್ತಿದೆ. ಈ ಸ್ಟುಡಿಯೋವಿಗೆ 19 ಎಕರೆ ಜಾಗವಿದೆ. ಇವೊತ್ತು ಒಂದು ಎಕರೆ ಜಾಗಕ್ಕೆ ಒಂದು ಕೋಟಿ ರೂ. ಕೊಟ್ಟರೂ ಸಾಲದು ಎಂಬಷ್ಟು ಬೆಲೆ ಇದೆ. ಶ್ರೀಮಾನ್ ಕರಿಬಸಯ್ಯನವರು, ಗುಬ್ಬಿವೀರಣ್ಣನವರು

ಮುಂತಾಗಿ ಎಲ್ಲರೂ ಶ್ರಮಪಟ್ಟು ಕಟ್ಟಿದಂಥ ಸ್ಟುಡಿಯೋವನ್ನು ಇವೊತ್ತು ಅನಾಥವಾಗಿ ಮಾಡತಕ್ಕಂಥ ವ್ಯವಸ್ಥೆಯಾಗಬಾರದು. ಸರಕಾರ ಅದಕ್ಕಾಗಿ ಒಂದು ಮಂಡಳಿಯನ್ನು ಮಾಡಿದ್ದು ಅದರ ಮೂಲಕ ಕಂಠೀರವ ಸ್ಟುಡಿಯೋವನ್ನು ಬೆಳೆಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಕನ್ನಡ ಚಿತ್ರರಂಗಕ್ಕೆ ಕೊಡತಕ್ಕಂಥ ಎಲ್ಲಾ ಸೌಲಭ್ಯಗಳನ್ನು, ಸವಲತ್ತುಗಳನ್ನು ಪರಿ ಪೂರ್ಣವಾಗಿ ಕೊಡಬೇಕೆಂದು ಒತ್ತಾಯಿಸುವುದು ನನ್ನ ಆಧ್ಯಕರ್ತವ್ಯ. ಮಾನ್ಯ ಮುಖ್ಯಮಂತ್ರಿಯವರು ಸಭೆಯಲ್ಲಿ ಉಪಸ್ಥಿತರಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು. ಅವರು ಸದನ ದಲ್ಲಿದ್ದರೆ ಒಂದು ಹಾಸ್ಯಮಯ ಸ್ಫೂರ್ತಿಯು ನಮಗೆಲ್ಲರಿಗೂ ಬರುತ್ತದೆ. ಅವರು ಇವೊತ್ತು ಇಲ್ಲಿ ಬರದೇ ಇರಲು ಕಾರಣಗಳು ಗೊತ್ತಾಗುತ್ತಾ ಇಲ್ಲ. ಅವರು ಅನಾರೋಗ್ಯದಲ್ಲಿದ್ದಾರೆಂದು ಮಾನ್ಯ ಉಪ-ಮುಖ್ಯಮಂತ್ರಿಯವರು ಹೇಳುತ್ತಿದ್ದಾರೆ. ಹೋಗಲಿ; ನಿಮ್ಮ ಸರಕಾರವಾದರೂ ಭದ್ರವಾಗಿದೆಯೇ? ಏನಾದರೂ ಹೆಚ್ಚುಕಡಿಮೆಯಾಗಿ ಬಿಟ್ಟೀತು ಎಂಬ ಒಂದು ಭಯ ನನಗೆ ಮನಸ್ಸಿನಲ್ಲಿ ಕಾಡುತ್ತಾ ಇತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನಿನ್ನೆ ಸಿದ್ದರಾಮಯ್ಯನವರು, ಸಿಂಧ್ಯಾ ರವರು, ಬಹಳ ದೀರ್ಘವಾಗಿ ಪ್ರಧಾನಿಯವರ ಜೊತೆಗೆ ಒಂದು ಗಂಟೆ ಕಾಲದ ಚರ್ಚೆ ಮಾಡಿದ್ದಾರೆ. ಏನೇನು ಭದ್ರಪಡಿಸಬೇಕೆಂಬ ಬಗ್ಗೆ ಸಾಕಷ್ಟು ಮಾತುಕತೆ ನಡೆದಿದೆ. ಹಾಗಾಗಿ ಇವೊತ್ತು ಮುಂಜಾನೆ ಇಲ್ಲಿ ಹಾಜರಾತಿ ಕಡಿಮೆ ಇತ್ತು. ಬಹುಶಃ ಅದೇ ಸಮಾಲೋಚನೆಗಾಗಿ ಮಂತ್ರಿಗಳೆಲ್ಲರೂ ಹೋಗಿರಬೇಕು.

ಶ್ರೀ ವಾಟಾಳ್ ನಾಗರಾಜ್ :- ನನಗೆ ಭಯ ಏನೆಂದರೆ ನಮ್ಮ ಪತ್ರಿಕೆಗಳು ಇವರಿಗೆಲ್ಲಾ ಭಯ ಹುಟ್ಟಿಸಿ ಬಿಟ್ಟಿವೆ. ರಾಮಕೃಷ್ಣ ಹೆಗಡೆಯವರು ಹೋದಾಗಲೊ ಭಾರಿ ಪ್ರಚಾರ, ಭಾರೀ ಜನ ಸ್ತೋಮ ಸೇರುತ್ತಾ ಇದೆ. ಅದನ್ನು ನೋಡಿ ಭಯಬಿದ್ದು ಇವರು ಯಾವ ಕಡೆ ಸೇರಬೇಕು, ಎತ್ತಹೋಗಬೇಕೆಂದು ಭಯಭೀತರಾಗಿ ಬಿಟ್ಟಿದ್ದಾರೆ. ನೀವೆಲ್ಲಾ ರಾಮಕೃಷ್ಣ ಹೆಗಡೆಯವರನ್ನು ಮರೇತೇ ಬಿಟ್ಟಿದ್ದೀರಿ.

ಶ್ರೀ ಸಿದ್ಧರಾಮಯ್ಯ :- ನಾವು ಅಧಿಕಾರಕ್ಕೆ ಬಂದಾದಮೇಲೆ 4-5 ಚುನಾವಣೆಗಳನ್ನು ನೋಡಿ ಆಗಿದೆ. ಆದುದರಿಂದ ನಮಗೆ ಯಾರಿಂದಲೂ ಕೂಡ ಭಯವಿಲ್ಲ. ಎಲ್ಲರೂ ನಮ್ಮ ಜೊತೆಗೆ ಇದ್ದು ಆಶೀರ್ವಾದ ಮಾಡಿದ್ದಾರೆ. ನಾವು ಮಾಡತಕ್ಕಂಥ ಕೆಲಸಗಳನ್ನು ಜನರು ಮೆಚ್ಚಿಕೊಂಡು ಪ್ರತಿ ಚುನಾವಣೆಯಲ್ಲಿ ನಮಗೆ ಆಶೀರ್ವಾದ ಮಾಡಿದ್ದಾರೆ. ಹೀಗಿರುವಾಗ ನಾವೇಕೆ ಭಯಪಡಬೇಕು?

ಶ್ರೀ ವಾಟಾಳ್ ನಾಗರಾಜ್ :- ನಮಗೆ ಏನಾಗಿದೆ ಅಂದರೆ, ಪತ್ರಿಕೆಗಳನ್ನು ನೋಡಿದ ನಿಮಗೆ ನಡುಕವೇನಾದರೂ ಹುಟ್ಟಿ ನಮ್ಮ ಪರಿಸ್ಥಿತಿ ಏನು ಎಲ್ಲಿ ಎಂಬಂತಾಗಿದೆ. ಏಕೆಂದರೆ ಮಳೆಯಲ್ಲಿಯೂ ಜನ ಅಪಾರವಾಗಿ ಸೇರಿದ್ದರು ಎಂದು ಪತ್ರಿಕೆಯಲ್ಲಿ ಬಂದಿದೆ. ಮೊನ್ನೆ ಉತ್ತರ ಕರ್ನಾಟಕದಲ್ಲಿ ಅದೇ ಬಂದಿದೆ. ಭಯ ಇಲ್ಲ ಅಂದರೆ ನೀವೆಲ್ಲರೂ ಹೆಗಡೆಯವರನ್ನು ಮರೆತೇ ಬಿಟ್ಟಿದ್ದೀರಿ?

ಶ್ರೀ ಎನ್. ರಾಜಣ್ಣ :- ಜನ ಬರುತ್ತಾರೆ, ಬಂದು ರಾಮಕೃಷ್ಣ ಹೆಗಡೆಯವರ

ಭಾಷಣ ಕೇಳ್ತಾರೆ, ಆದರೆ ಅವರು ಓಟುಕೊಡುವುದಕ್ಕೋಸ್ಕರ ಬರುತ್ತಾ ಇಲ್ಲ. ಅವರು ಓಟು ಕೊಡುವುದು ನಮ್ಮ ಪಾರ್ಟಿಗೇನೇ....

ಶ್ರೀ ವಾಟಾಳ್ ನಾಗರಾಜ್ :- ನಾನೇನು ಹೆಗಡೆಯವರ ಪರವಾಗಿ ಮಾತಾಡುತ್ತಾ ಇಲ್ಲ. ನಿಮ್ಮ ತಲೆಯ ಮೇಲೆ ಹೆಗಡೆಯವರ ಫೋಟೋ ಇಟ್ಟುಕೊಂಡಿದ್ದವರು ನೀವುಗಳು ಅವರನ್ನೇ ಮರೆತುಬಿಟ್ಟಿದ್ದೀರಿ? ರಾಮಕೃಷ್ಣ ಹೆಗಡೆಯವರು ಯಾರು ಎಂಬುದಾದರೂ ಗೊತ್ತೇ? ನನಗೆ ಗೊತ್ತು ಅವರು ನಿಮ್ಮ ನಾಯಕರಾಗಿದ್ದರು. ಹಗಲೂ ರಾತ್ರಿಯೂ ನೀವುಗಳು ಮರೆದಿದ್ದೀರಿ. ಆದರೆ ಅವರು ಈಗ ನಿಮಗೆ ಗೊತ್ತಿಲ್ಲವೇ? ಅವರ ಹೆಸರು ಹೇಳುವುದಕ್ಕೂ ಭಯ ಪಡುತ್ತಾ ಇದ್ದೀರಿ.... ಇಲ್ಲಿ ಏನಾಗಿದೆ ಅಂದರೆ ರಾಮಕೃಷ್ಣ ಹೆಗಡೆಯವರ ಪರ ಅಂದರೆ ಡೆಲ್ಲಿ ಭೂತ ಹಿಡಿದುಕೊಳ್ಳುತ್ತದೆ. ಇಲ್ಲಿ ಪರ ಅಂದರೆ ಅಲ್ಲಿನ ಭೂತ ಹಿಡಿದುಕೊಳ್ಳುತ್ತದೆ. ಹೀಗಾಗಿ ಇವರು ಬಹಳ ಇಕ್ಕಟ್ಟಿನಲ್ಲಿ ಸಿಕ್ಕಿಬಿಟ್ಟಿದ್ದಾರೆ......

ಶ್ರೀ ಎಸ್. ಎಸ್. ಪಾಟೀಲ್ :- ವಾಟಾಳ್ ನಾಗರಾಜ್‌ರವರು ದಿನವೂ ಅದೇ ಚಿಂತೆಯಲ್ಲಿರುವಂತೆ ನನಗೆ ಅನಿಸುತ್ತದೆ. ಇನ್ನೂ ಇವರು ಇಷ್ಟು ಭದ್ರವಾಗಿದ್ದಾರಲ್ಲಾ ಎಂಬ ಚಿಂತೆ ಅವರಿಗೆ ಹತ್ತಿದ ಹಾಗೆ ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ತಾವುಗಳು ಭದ್ರವಾಗಿಲ್ಲವೆಂದು ನಾನು ಅಂದುಕೊಂಡಿಲ್ಲ. ಈಗ ನಿಮಗೆ ಬೇಸಿಗೆ ಕಾಲದಲ್ಲಿಯೂ ಚಳಿ ಹತ್ತಿದ ಹಾಗೆ ಆಗಿಬಿಟ್ಟಿದೆ. ಎರಡು ತಿಂಗಳ ಹಿಂದೆ ರಾಮಕೃಷ್ಣ ಹೆಗಡೆಯವರ ಬಗ್ಗೆ ಇವರು ಏನು ಹೇಳುತ್ತಿದೆಯೋ ಅದನ್ನು ಈಗ ಹೇಳಲಿ....

ಶ್ರೀ ಸಿ. ಎಂ. ಉದಾಸಿ :- ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಪತ್ರಿಕೆಯಲ್ಲಿನ ಪ್ರಚಾರ ನೋಡಿಕೊಂಡು ಭಯ ಬಿದ್ದಿದ್ದಾರೆ ಎಂದು ಹೇಳುತ್ತಿದ್ದಾರೆ. ಕೆಲವರು "ಏನೇ ಬರಲಿ ಒಗ್ಗಟ್ಟಿರಲಿ ಎನ್ನುವುದಕ್ಕಿಂತ" "ಏನೇ ಬರಲಿ ಬಿಕ್ಕಟ್ಟಿರಲಿ"- ಎಂದು ಆಸೆಪಡುವವರಲ್ಲಿ ಇವರೂ ಕೂಡ ಒಬ್ಬರು- ಎಂಬ ಅನುಮಾನ ನನಗೆ ಬರುತ್ತಿದೆ.

ಶ್ರೀ ವಾಟಾಳ್ ನಾಗರಾಜ್ :- ನೀವು 45 ಜನರು ಮಂತ್ರಿಗಳಾಗಿದ್ದೀರಿ. ಇನ್ನೂ 35 ಜನ ಮಂಡಳಿಗೆ ಆದರೆ 75 ಜನ ಆಯಿತು. ಇನ್ನೇನು ಅವಿಶ್ವಾಸ ಬರುವಹಾಗೇ ಇಲ್ಲವಲ್ಲಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಂಥ ಬಿಕ್ಕಟ್ಟೇನಾದರೂ ಬಂದರೆ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾಗ ಒಂದು ಮಾತನ್ನು ಹೇಳಿದ್ದರು. ಒಂದು-ಎರಡು ಕಡಿಮೆ ಬಿದ್ದರೆ ನಾನು ಸಿದ್ಧನಿದ್ದೇನೆ ಎಂದು ಹೇಳಿದ್ದಾರೆ. ಆದರೆ ನಿಮ್ಮ ಸಂಕಟ ನೋಡಲು ಅವರಿಗೆ ಆಗುತ್ತಾ ಇಲ್ಲ.

ಶ್ರೀ ಸಿದ್ದರಾಮಯ್ಯ :- ನಮಗೆ ಬಿಕ್ಕಟ್ಟೂ ಇಲ್ಲ, ನಮ್ಮ ಸರಕಾರವು ಬಹಳ ಸದೃಢವಾಗಿ ಇದೆ. ನೀವ್ಯಾರೂ ಚಿಂತೆ ಮಾಡಬೇಕಾದ ಅಗತ್ಯವಿಲ್ಲ. ಬೇರೆಯವರ ಸಹಾಯ ತೆಗೆದುಕೊಂಡು ಸರಕಾರ ಮಾಡುವ ಪರಿಸ್ಥಿತಿಯು ನಮಗೆ ನಿರ್ಮಾಣ ವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಿಮಗೆ ಶಿವರಾಮೇಗೌಡರಂಥವರು ನಾಲ್ಕು ಐದು ಜನ ಸಹಾಯ ಮಾಡಿದ್ದಾರೆ. ನಿಮ್ಮ ಸರಕಾರ ಇರಬೇಕೆಂದು ಹೇಳುವ ಮನುಷ್ಯ ನಾನು. ನಾನು ಹಿಂದೆ ಬಹಿರಂಗ ಸಭೆಯಲ್ಲಿ ಹೇಳಿದ್ದೇನೆ. ನನ್ನ ಒಂದು ಓಟಿನಿಂದ ಪಟೇಲರ ಸರಕಾರ ಬಿದ್ದುಹೋಗುತ್ತದೆ ಅಂದರೆ ನಾನು ಓಟು ಕೊಡು ತ್ತೇನೆಂದು ಹೇಳಿದ್ದೇನೆ. ಈಗ ಪತ್ರಿಕೆಗಳಲ್ಲಿನ ಪ್ರಚಾರ ವೈಖರಿಯನ್ನು ನೋಡುತ್ತಾ ಇದ್ದು ತಮ್ಮಲ್ಲಿ ಬಹಳ ಜನರು ಭಯಬಿದ್ದುಬಿಟ್ಟಿದ್ದೀರಿ. ನನ್ನ ಪ್ರಶ್ನೆ ಬೇರೆ. ನಿಮ್ಮಲ್ಲಿ ಬಹುತೇಕ ಜನ ಅವರ ಚಿತ್ರ ಹಾಕಿಕೊಂಡು ಅವರನ್ನು ಭಾಷಣಕ್ಕೆ ಕರೆದು ಅವರ ಕಡೆಯಿಂದ ಗೆದ್ದಿದ್ದೀರಲ್ಲಾ; ನಾನು ಏಕೆ ಈ ಮಾತು ಹೇಳುತ್ತಿದ್ದೇನೆಂದರೆ ಪ್ರಚಾರಯುಗದಲ್ಲಿ ಪ್ರಚಾರದಿಂದ ಭಯೋತ್ಪಾದನೆ ಆಗುವುದೆಂಬ ಮಾತಿದೆ. ನೀವ್ಯಾರೂ ಅದಕ್ಕೆ ತಯಾರಾಗಿಲ್ಲ. ಆದ್ದರಿಂದ ನಾನೇನೂ ಮಾಡುವುದಕ್ಕಾಗುವುದಿಲ್ಲ; ನಾವು ಧೈರ್ಯವಾಗಿದ್ದೇವೆ; ಅಂದರೆ ಸಂತೋಷ, ನಿಮಗೆ ಒಳ್ಳೆಯದಾಗಲಿ. ಕೊನೆಯದಾಗಿ ಸಾರ್ ಒಂದು ಮಾತು ನಾನು ಹೇಳಬಯಸುತ್ತೇನೆ. ಇದು ಸಂಬಂಧವಿಲ್ಲದ್ದು. ಕೇಂದ್ರದ ವಾರ್ತಾಸಚಿವರು "ವರದಿ ಸಾಬೀತು ಪತ್ರಕರ್ತನ ಹೊಣೆ" ಎಂದು ಹೇಳಿರುವುದು ನಿನ್ನೆ ಪತ್ರಿಕೆಗಳಲ್ಲಿ ಬಂದಿದೆ. ಆದರಲ್ಲಿ ಪ್ರಾಮಾಣಿಕ ಚಿಂತನೆ ಆಗಬೇಕೇ ಹೊರತು ಪತ್ರಕರ್ತ ವರದಿ ಕೊಡಬೇ ಕಾದರೆ ಜವಾಬ್ದಾರಿಯಿಂದಲೇ ವರದಿ ಸ್ಪಷ್ಟಮಾಡುತ್ತಾರೆ. ಆದರೆ ಮಾನನಷ್ಟ ಮೊಕದ್ದಮೆ ಎಂಬುದಕ್ಕೆ ಇನ್ನೂ ತಿದ್ದುಪಡಿ ತರಬೇಕು. ಹೆಚ್ಚಿನ ಒತ್ತು ಆದಕ್ಕೆ ಕೊಡಬೇಕು ಎಂಬುದು ಮತ್ತು ಮಾನನಷ್ಟ ಮೊಕದ್ದಮೆ ಸಾಬೀತಾದಲ್ಲಿ ಆತನಿಗೆ ಶಿಕ್ಷೆ ಕೊಡ ಬೇಕೆಂಬುದು ನಿಜ, ಬರವಣಿಗೆಗಳ ಬಗ್ಗೆ ಚರ್ಚೆಯಾಗಬೇಕು. ಯಾವರೀತಿ ವರದಿ ಇರಬೇಕು ಎಂದು. ಆದರೆ ದೆಹಲಿಯಲ್ಲಿ ಪ್ರೆಸ್ ಕೌನ್ಸಿಲ್ ಎಂದು ಇದೆ, ಆದಕ್ಕೆ ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಾಧೀಶರು ಅಧ್ಯಕ್ಷರಾಗಿದ್ದಾರೆ. ಅಲ್ಲಿ ವಿಶೇಷವಾಗಿ ನಾವು ವರದಿ ಸಲ್ಲಿಸಲು ಅವಕಾಶ ಇದೆ. ಆದ್ದರಿಂದ ಇದು ಸರಿಯಾದ ಮಾರ್ಗ ವಲ್ಲವೆಂಬುದು ನನ್ನ ಅನಿಸಿಕೆ. ಒಂದು ರೀತಿ ಸರ್ವಾಧಿಕಾರಿ ಮನೋಭಾವನೆಗೆ ಇದು ಹೋಗುವಂಥದ್ದು, ಇಂತಹ ತಿದ್ದುಪಡಿಗಳನ್ನು ಲೋಕಸಭೆಯಾಗಲಿ ಯಾರೇ ಆಗಲಿ ತರಬಾರದೆಂಬ ಮಾತು ಹೇಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

(5) ವರದಿಯನ್ನು ಒಪ್ಪಿಸುವುದು.

ಶ್ರೀ ಜಿ. ಬಿ. ಶಿವಕುಮಾರ್ (ಕೆರೆಗೋಡು) :- ಅಧ್ಯಕ್ಷರೇ, ರಾಜ್ಯದಲ್ಲಿ ವಿದ್ಯುಚ್ಛಕ್ತಿ ದರವನ್ನು ಪುನರ್ ವಿರ್ಮಶಿಸುವ ಬಗ್ಗೆ ಪರಿಶೀಲಿಸಿ ವರದಿ ನೀಡಲು ರಚಿಸಲಾಗಿರುವ ಜಂಟಿ ಸಲಹಾ ಸಮಿತಿಯ ಅಧ್ಯಕ್ಷನಾದ ನಾನು ಆದರ ವರದಿಯನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.